ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 11 ಗುರುವಾರ 2024

ಸಂಪುಟ: 44 | ಸಂಚಿಕೆ: 265 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದ ಕೆಲ ಸಚಿವರಿಗೆ ಸಿಂಹಸ್ವಪ್ನವಾದ ಚುನಾವಣಾ ತಂತ್ರಗಾರ ಸುನೀಲ್ ಕನುಗೋಲು!

ಇಂತಿಂಥ ಸಚಿವರ ಇಂತಿಂಥ ಕಡೆ ಕಣಕ್ಕಿಳಿಸಿದರೆ

ಗೆಲುವು ಸಾಧ್ಯತೆ ವರದಿ

- ಕನುಗೋಲು ವರದಿ ಗಂಭೀರವಾಗಿ ಪರಿಗಣಿಸಿದ ಕಾಂಗ್ರೆಸ್ ವರಿಷ್ಠರು
- ಸಚಿವರು ಪಕ್ಷಕ್ಕಾಗಿ ಯಾವ ತ್ಯಾಗಕ್ಕೂ ಸಿದ್ಧರಾಗಲು ಸುರ್ಜೇವಾಲ ಸೂಚನೆ



ಸುನೀಲ್ ಕನುಗೋಲು

ಅಗ್ನಿಪರೀಕ್ಷೆಗೀಡಾಗುವ ಸಚಿವರು?

ಉನ್ನತ ಮೂಲಗಳ ಪ್ರಕಾರ ವರದಿಯಲ್ಲಿ ಕೆ.ಎಚ್.ಮುನಿಯಪ್ಪ (ಕೋಲಾರ–ಮೀಸಲು), ಚಲುವರಾಯಸ್ವಾಮಿ(ಮಂಡ್ಯ), ಡಾ.ಎಚ್.ಸಿ. ಮಹದೇವಪ್ಪ (ಚಾಮರಾಜನಗರ–ಮೀಸಲು), ಕೆ.ಎನ್. ರಾಜಣ್ಣ (ಚಿತ್ರದುರ್ಗ–ಮೀಸಲು), ಈಶ್ವರ ಖಂಡ್ರೆ (ಬೀದರ್), ಸತೀಶ್ ಜಾರಕಿಹೊಳಿ (ಬೆಳಗಾವಿ), ಎಚ್.ಕೆ ಪಾಟೀಲ್ (ಹಾವೇರಿ) ಸೇರಿದಂತೆ 10 ಸಚಿವರನ್ನು ಹೆಸರಿಸಲಾಗಿದೆ. ಅಲ್ಲದೆ, ಕೆಲವು ವರ್ಚಸ್ವಿ ಹಾಗೂ ಹಿರಿಯ ಶಾಸಕರನ್ನು ನಿರ್ದಿಷ್ಟ ಕ್ಷೇತ್ರಗಳಲ್ಲಿ ಕಣಕ್ಕಿಳಿಸಿದರೆ ಪಕ್ಷಕ್ಕೆ ಲಾಭವಾಗಲಿದೆ ಎಂದು ವರದಿಯಲ್ಲಿ ಕನುಗೋಲು ತಿಳಿಸಿದ್ದಾರೆ.



ಬೆಂಗಳೂರು, ಜ.10(ಕೆಎಂಶಿ)– ಚುನಾವಣಾ ರಣತಂತ್ರ ನಿಪುಣ ಸುನೀಲ್ ಕನುಗೋಲು ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದ ಕೆಲವು ಸಚಿವರಿಗೆ ಸಿಂಹಸ್ವಪ್ನವಾಗಿದ್ದಾರೆ.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಿಂದ ಹೆಚ್ಚು ಸ್ಥಾನ ಗಳಿಸಬೇಕೆಂದರೆ ಕನಿಷ್ಠ 10 ವರ್ಚಸ್ವಿ ಮತ್ತು ಪ್ರಭಾವೀ ಸಚಿವರನ್ನು ಚುನಾವಣಾ ಕಣಕ್ಕಿಳಿಸುವಂತೆ ಎಐಸಿಸಿಗೆ ಕನುಗೋಲು ವರದಿ ನೀಡಿದ್ದಾರೆ. ಈಗಾಗಲೇ ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮೂರ್‍ನಾಲ್ಕು ಚುನಾವಣಾ ಪೂರ್ವ ಸಮೀಕ್ಷೆ ನಡೆಸಿ, ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಅಧಿನಾಯಕ ರಾಹುಲ್ ಗಾಂಧಿ ಹಾಗೂ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲರಿಗೆ ತಮ್ಮ ವರದಿ ಆಧಾರದ ಮೇಲೆ ವಿವರವನ್ನೂ ನೀಡಿದ್ದಾರೆ.

ಅಷ್ಟೇ ಅಲ್ಲ ಯಾವ ಸಚಿವರನ್ನು ಯಾವ ಕ್ಷೇತ್ರಗಳಲ್ಲಿ ಕಣಕ್ಕಿಳಿಸಿದರೆ ಪಕ್ಷಕ್ಕೆ ಯಾವ ರೀತಿ ಲಾಭವಾಗುತ್ತದೆ ಎಂಬ ಪರಿಪೂರ್ಣ ಮಾಹಿತಿ ನೀಡಿದ್ದಾರೆ. ಕಳೆದ ವಿಧಾನಸಭಾ ಚುನಾವಣೆ ವೇಳೆ ಕನುಗೋಲು ನಡೆಸಿದ ಸಮೀಕ್ಷೆಗಳಿಂದ ಕರ್ನಾಟಕದಲ್ಲಿ ಕಾಂಗ್ರೆಸ್ ಪ್ರಚಂಡ ಬಹುಮತದಿಂದ ಅಧಿಕಾರದ ಚುಕ್ಕಾಣಿ ಹಿಡಿಯಿತು. ಅಲ್ಲದೆ ಇತ್ತೀಚೆಗೆ ತೆಲಂಗಾಣ ರಾಜ್ಯದಲ್ಲೂ ಕನುಗೋಲು ತೆರೆಮರೆಯಲ್ಲಿ ಕೆಲಸ ಮಾಡಿದ್ದರು.

ಕರ್ನಾಟಕಕ್ಕೆ ಸೀಮಿತವಾಗಿ ಕನುಗೋಲು ಅವರಿಂದಲೇ ಚುನಾವಣಾ ಪೂರ್ವ ವರದಿಯನ್ನು

● 7ನೇ ಪುಟಕ್ಕೆ

ಗ್ಯಾರಂಟಿ ಪ್ರಚಾರಕ್ಕೆ ಕಾರ್ಯಕರ್ತರಿಗೂ

‘ಪದವಿ’ ಗ್ಯಾರಂಟಿ!

“ಚುನಾವಣೆಯನ್ನು ನಾವು ಗೆಲ್ಲಲೇಬೇಕು. ಇಷ್ಟೆಲ್ಲಾ ಮಾಡಿಯೂ ನಾವು ಗೆಲ್ಲದೆ ಹೋದರೆ ಅದು ನಮಗೆ ಹಿನ್ನಡೆಯಾಗಲಿದೆ. ನಾವು ಗೆಲ್ಲಲೇಬೇಕು. 28ಕ್ಕೆ 28 ಸೀಟನ್ನು ಗೆಲ್ಲಬೇಕು. ಕನಿಷ್ಠ 26 ಸೀಟನ್ನಾದರೂ ಗೆಲ್ಲಬೇಕು. ಜನರ ನಾಡಿ ಮಿಡಿತ ನಮ್ಮ ಪರವಾಗಿರುವುದರಿಂದ ಅಪಪ್ರಚಾರದಿಂದ ನಾವು ಯಾರೂ ಹತಾಶರಾಗಬಾರದು, ಸಕಾರಾತ್ಮಕವಾಗಿರಬೇಕು.

–ಸಿದ್ದರಾಮಯ್ಯ, ಮುಖ್ಯಮಂತ್ರಿ

- ರಾಜ್ಯ, ಜಿಲ್ಲಾ, ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಗ್ಯಾರಂಟಿಗಳ ಅನುಷ್ಠಾನ ಸಮಿತಿ ರಚನೆ
- ರಾಜ್ಯ ಮಟ್ಟದ ಅಧ್ಯಕ್ಷರು, ಐವರು ಉಪಾಧ್ಯಕ್ಷರು, 31 ಸದಸ್ಯರು; ಅಧ್ಯಕ್ಷರಿಗೆ ಸಂಪುಟ ದರ್ಜೆ, ಉಪಾಧ್ಯಕ್ಷರಿಗೆ ರಾಜ್ಯ ಸಚಿವ ಸ್ಥಾನಮಾನ; ಪ್ರತ್ಯೇಕ ಕಚೇರಿ, ಸದಸ್ಯರಿಗೂ ಗೌರವ ಧನ; ಖಜಾನೆಯಿಂದಲೇ ಖರ್ಚು!
- ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿಗೆ ತಲಾ 25 ಕೋಟಿ ಅನುದಾನ; 28ರಲ್ಲಿ 26 ಗೆಲ್ಲಲೇಬೇಕು!!



ಬೆಂಗಳೂರು, ಜ.10(ಕೆಎಂಶಿ)–ಲೋಕಸಭಾ ಚುನಾವಣೆ ಸಮೀಪವಾಗುತ್ತಿದ್ದಂತೆ ಆಡಳಿತ ಪಕ್ಷದ ಶಾಸಕರು ಮತ್ತು ಕಾರ್ಯಕರ್ತರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭರಪೂರ ಕೊಡುಗೆ ನೀಡುತ್ತಿದ್ದಾರೆ. ಬರುವ ಮಾರ್ಚ್ ಅಂತ್ಯದ ವೇಳೆಗೆ ಪ್ರತಿ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ತಲಾ 25 ಕೋಟಿ ರೂ. ಅನುದಾನ, ಸರ್ಕಾರದ ವಿವಿಧ ಸಂಸ್ಥೆಗಳಿಗೆ ತಕ್ಷಣವೇ ಕಾರ್ಯಕರ್ತರ ನೇಮಕ ಮಾಡಲಿದ್ದು, ಸದಸ್ಯತ್ವದ ಆಡಳಿತಾವಧಿ ಎರಡು ವರ್ಷ ಇರಲಿದೆ.

ಗ್ಯಾರಂಟಿ ಯೋಜನೆಗಳಿಗೆ ಎದುರಾಗಿರುವ ಅಪಪ್ರಚಾರಕ್ಕೆ ಇತಿಶ್ರೀ ಹಾಡಿ ಕೆಳಹಂತದಲ್ಲಿ ಪ್ರಚಾರ ದೊರಕಿಸಲು ರಾಜ್ಯ, ಜಿಲ್ಲಾ ಹಾಗೂ ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಗ್ಯಾರಂಟಿಗಳ ಅನುಷ್ಠಾನ ಸಮಿತಿ ರಚಿಸಲಾಗುವುದು ಎಂದು ಘೋಷಿಸಿದ್ದಾರೆ. ಅವರು ಇಂದು ಕೆಪಿಸಿಸಿ ಕಚೇರಿಯಲ್ಲಿ ನಡೆದ ಲೋಕಸಭಾ ಚುನಾವಣಾ ಸಿದ್ಧತಾ ಸಭೆಯಲ್ಲಿ ಪಕ್ಷದ ವಿವಿಧ ಹಂತದ ಮುಖಂಡರನ್ನು ಉದ್ದೇಶಿಸಿ ಮಾತನಾಡಿ, ಕಾರ್ಯಕರ್ತರಿಗೆ ಆಡಳಿತದಲ್ಲೂ ಅಧಿಕಾರ ನೀಡುವ ಘೋಷಣೆ ಮಾಡಿದರು. ಚುನಾವಣೆಯನ್ನು ಗಂಭೀರವಾಗಿ ತೆಗೆದುಕೊಳ್ಳಿ, 28 ಕ್ಷೇತ್ರಗಳ ಪೈಕಿ 26ರಲ್ಲಿ

● 7ನೇ ಪುಟಕ್ಕೆ

ದೇವಾಲಯಗಳಲ್ಲಿ ತುಂಡು ಬಟ್ಟೆ ಧರಿಸಿದವರಿಗೆ ಪ್ರವೇಶಾವಕಾಶವಿಲ್ಲ!

ಬೆಂಗಳೂರು: ಕರ್ನಾಟಕ ದೇವಸ್ಥಾನ, ಮಠ ಮತ್ತು ಧಾರ್ಮಿಕ ಸಂಸ್ಥೆಗಳ ಮಹಾಸಂಘ ಬೆಂಗಳೂರಿನ 50 ದೇವಸ್ಥಾನಗಳು ಸೇರಿದಂತೆ ರಾಜ್ಯದಾದ್ಯಂತ 500ಕ್ಕೂ ಹೆಚ್ಚು ದೇವಸ್ಥಾನಗಳಲ್ಲಿ ಭಾರತೀಯ ಸಂಸ್ಕೃತಿಗೆ ಅನುಗುಣವಾಗಿ ಡ್ರೆಸ್ ಕೋಡ್ ಜಾರಿಗೆ ತರಲು ಚಿಂತನೆ ನಡೆಸಿದೆ. ದತ್ತಿ ಇಲಾಖೆ ಅಧೀನದಲ್ಲಿರುವ ದೇವಸ್ಥಾನಗಳಲ್ಲೂ ವಸ್ತ್ರ ಸಂಹಿತೆ ಜಾರಿಗೊಳಿಸುವಂತೆ ರಾಜ್ಯ ಹಿಂದೂ ಧಾರ್ಮಿಕ ದತ್ತಿ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಮನವಿ ಸಲ್ಲಿಸಲು ಮಹಾಸಂಘ ನಿರ್ಧರಿಸಿದೆ.

ಈ ಕುರಿತು ಪ್ರಕಟಣೆ ನೀಡಿರುವ ‘ಕರ್ನಾಟಕ ದೇವಸ್ಥಾನ–ಮಠ ಮತ್ತು ಧಾರ್ಮಿಕ ಸಂಸ್ಥೆಗಳ ಮಹಾಸಂಘ’ದ ಸಂಚಾಲಕ ಮೋಹನ್‌ಗೌಡ, ದೇವರ ದರ್ಶನಕ್ಕಾಗಿ ತುಂಡು ಬಟ್ಟೆ ಅಥವಾ ಸಾಂಪ್ರದಾಯಿಕವಲ್ಲದ ಉಡುಗೆಯಲ್ಲಿ ದೇವಸ್ಥಾನಗಳಿಗೆ ಹೋಗುವುದು ಅಭಿವ್ಯಕ್ತಿ ಸ್ವಾತಂತ್ರ್ಯವಾಗಲಾರದು. ಪ್ರತಿಯೊಬ್ಬರಿಗೂ ಮನೆಯಲ್ಲಿ ಮತ್ತು ಸಾರ್ವಜನಿಕವಾಗಿ ಏನು ಧರಿಸಬೇಕೆಂಬ ವೈಯಕ್ತಿಕ ಸ್ವಾತಂತ್ರ್ಯವಿದೆ. ಆದರೆ ದೇವಾಲಯದ ಆವರಣದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಅಲ್ಲ ಧರ್ಮವನ್ನು ಪಾಲಿಸುವುದು ಮುಖ್ಯ ಎಂದಿದ್ದಾರೆ.

ಅರಣ್ಯ ಭೂಮಿ ಗುತ್ತಿಗೆ; ವಿರಾಜಪೇಟೆ ಒಂದರಲ್ಲೇ 1601 ಕೋಟಿ ಬಾಕಿ

ಅರಣ್ಯ ಸಚಿವ ಈಶ್ವರ ಖಂಡ್ರೆ ಮಾಹಿತಿ

ಬೆಂಗಳೂರು, ಜ.10– ರಾಜ್ಯದಾದ್ಯಂತ ಐದು ಸಾವಿರ ಎಕರೆ ಅರಣ್ಯ ಭೂಮಿಯನ್ನು ಗುತ್ತಿಗೆ ಪಡೆದಿರುವವರಿಂದ ಸುಮಾರು 2 ಸಾವಿರ ಕೋಟಿ ರೂ. ಬಾಕಿ ಬರಬೇಕಾಗಿದ್ದು, ಅದರಲ್ಲೂ ಕೊಡಗಿನ ವಿರಾಜಪೇಟೆವೊಂದರಲ್ಲೇ 1601 ಕೋಟಿ ರೂ. ಸರ್ಕಾರಕ್ಕೆ ಬರಬೇಕಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ವಿಕಾಸಸೌಧದಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳ ಜೊತೆ ಸಭೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯ ಪೂರ್ವದಲ್ಲಿ ಕಾಫಿ, ಟೀ, ರಬ್ಬರ್ ಬೆಳೆಯಲು ಸಾವಿರಾರು ಎಕರೆ ಅರಣ್ಯ ಭೂಮಿಯನ್ನು ಲೀಸ್‌ಗೆ ನೀಡಲಾಗಿತ್ತು. ಸುಮಾರು 2 ಸಾವಿರ ಕೋಟಿಯಷ್ಟು ಲೀಸ್ ಹಣ ಸರ್ಕಾರಕ್ಕೆ ಬರಬೇಕಾಗಿದ್ದು, ಈ ಹಣ ಸಂದಾಯ ಮಾಡದೇ ಇರುವ ಕಂಪನಿಗಳಿಂದ ಭೂಮಿ ವಾಪಸ್ ಪಡೆಯಲು ನಿರ್ಧಾರ ಮಾಡಲಾಗಿದೆ ಎಂದರು.

ಸ್ವಾತಂತ್ರ್ಯ ಪೂರ್ವದಲ್ಲಿ ಎಕರೆಗೆ ಕೇವಲ ಎರಡು ರೂ.ನಿಂದ ಏಳು ರೂ. ಲೀಸ್ ಹಣ ನಿಗದಿ ಮಾಡಿಕೊಡಲಾಗಿತ್ತು. 1997ರಲ್ಲಿ ಹೆಕ್ಟೇರ್‌ಗೆ 5 ಸಾವಿರ ರೂ. ನಿಗದಿ ಮಾಡಲಾಗಿದ್ದು, ಅದರಂತೆ ಲೀಸ್ ಹಣ ಬಾಕಿ ಉಳಿಸಿಕೊಂಡ ಕಂಪನಿಗಳಿಂದ ಭೂಮಿ ವಾಪಸ್ ಪಡೆಯಲಾಗುತ್ತದೆ ಎಂದು ಹೇಳಿದರು.



ಈಶ್ವರ್ ಖಂಡ್ರೆ

ವಿರಾಜಪೇಟೆಯ ಮರ್ಕೆರಾ ಕಂಪನಿ 1,575 ಎಕರೆ, ಥಾಮ್ಸನ್ ರಬ್ಬರ್ ಲಿ. 625 ಎಕರೆ ಗುತ್ತಿಗೆ ಪಡೆದಿದ್ದು, 2015ರವರೆಗೆ 91.29 ಕೋಟಿ ರೂ. ಪಾವತಿಸಬೇಕಿದೆ. ನಿಲಂಬೂರ್ ರಬ್ಬರ್ ಕಂಪನಿ ಲಿಮಿಟೆಡ್ 713 ಎಕರೆ ಗುತ್ತಿಗೆ ಪಡೆದಿದ್ದು, 130.22 ಕೋಟಿ ರೂ. ಪಾವತಿಸಬೇಕಿದೆ. ಪೋರ್ಟ್ ಲ್ಯಾಂಡ್ ರಬ್ಬರ್ ಎಸ್ಟೇಟ್ ಲಿಮಿಟೆಡ್ 1288 ಎಕರೆ ಗುತ್ತಿಗೆ ಪಡೆದಿದ್ದು 2022 ರವರೆಗೆ 536.66 ಕೋಟಿ ರೂ. ಬಾಕಿ ಉಳಿಸಿಕೊಂಡಿದೆ. ಗ್ಲೆನ್ ಲಾರೆನ್ಸ್ ಪ್ರೈ.ಲಿ. ಮತ್ತು ಟಾಟಾ ಕಂಪನಿ 943 ಎಕರೆ ಅರಣ್ಯ ಭೂಮಿ ಗುತ್ತಿಗೆ ಪಡೆದಿದ್ದು, 524 ಕೋಟಿ ರೂ. ಬಾಕಿ ಪಾವತಿಸಬೇಕಿದೆ.

ಚಾಮರಾಜನಗರದ ಹೊನ್ನಮಟ್ಟಿ ನೀಲಗಿರಿ ಪ್ಲಾಂಟೇಷನ್ ಲಿ. ಮತ್ತಿತರರಿಂದ 2015 ರವರೆಗೆ 25.36 ಕೋಟಿ ರೂ. ಬಾಕಿ ಬರಬೇಕಾಗಿದ್ದು, ಒಟ್ಟಾರೆ ಎರಡು ಸಾವಿರ ಕೋಟಿ ರೂ.ಗೂ ಹೆಚ್ಚು ಲೀಸ್ ಹಣವನ್ನು ಕಂಪನಿಗಳು ಅರಣ್ಯ ಇಲಾಖೆಗೆ ಪಾವತಿ

● 7ನೇ ಪುಟಕ್ಕೆ

ಸುತ್ತೂರು ಮಠದ ಸಂಸ್ಥಾಪಕರಾದ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ 1064ನೇ ಜಯಂತಿ ಮಹೋತ್ಸವದ ಸುಸಂದರ್ಭದಲ್ಲಿ

ಸುತ್ತೂರು ಶ್ರೀಗಳಿಂದ ವಿವಿಧ ಪದವಿ, ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ



ನಂಜನಗೂಡು ತಾಲೂಕಿನ ಸುತ್ತೂರು ಶ್ರೀ ಕ್ಷೇತ್ರದಲ್ಲಿ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ 1064ನೇ ಜಯಂತಿ ಮಹೋತ್ಸವದ ಅಂಗವಾಗಿ ವಿವಿಧ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪುರಸ್ಕೃತರು ಮತ್ತು ರಾಜ್ಯ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಪಡೆದ ಸಾಧಕರನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಸನ್ಮಾನಿಸಿದರು. ಚಿತ್ರದಲ್ಲಿ ಸನ್ಮಾನಿತರಾದ (ಕುಳಿತಿರುವವರು–ಎಡದಿಂದ): ‘ಮೈಸೂರು ಮಿತ್ರ’ ಮತ್ತು ‘ಸ್ಟಾರ್ ಆಫ್ ಮೈಸೂರ್’ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ (ಮೈಸೂರು ವಿವಿ ಗೌರವ ಡಾಕ್ಟರೇಟ್ ಪುರಸ್ಕೃತರು), ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ (ಧಾರವಾಡ ಕರ್ನಾಟಕ ವಿವಿ ಗೌರವ ಡಾಕ್ಟರೇಟ್), ತೋಂಟದಾರ್ಯ ಮಠದ ಶ್ರೀ ನಿಜಗುಣಾನಂದ ಸ್ವಾಮೀಜಿ (ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು), ಶಿಕ್ಷಣ ತಜ್ಞ ಡಾ.ವುಡೇ ಪಿ.ಕೃಷ್ಣ (ಗೌರವ ಡಾಕ್ಟರೇಟ್) ಮತ್ತು ಎಸ್.ಷಡಕ್ಷರಿ (ನಾಡೋಜ ಪ್ರಶಸ್ತಿ ಪುರಸ್ಕೃತರು), ನಿಂತಿರುವವರು (ಎಡದಿಂದ): ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ (ರಾಜ್ಯೋತ್ಸವ ಪ್ರಶಸ್ತಿ), ಬೆಂಗಳೂರು ಮೈಥಿಕ್ ಸೊಸೈಟಿಯ ವಿ.ನಾಗರಾಜ್ (ರಾಜ್ಯೋತ್ಸವ ಪ್ರಶಸ್ತಿ), ಸುತ್ತೂರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕಿದ್ವಾಯಿ ನಿವೃತ್ತ ನಿರ್ದೇಶಕ ಡಾ.ಸಿ.ರಾಮಚಂದ್ರ (ರಾಜ್ಯೋತ್ಸವ ಪ್ರಶಸ್ತಿ), ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸಿ.ಸೋಮಶೇಖರ್ (ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಿದ್ದವರು) ಮತ್ತು ಮೈಸೂರು ವಿವಿ ಪ್ರಸಾರಾಂಗದ ನಿವೃತ್ತ ನಿರ್ದೇಶಕ ಪ್ರೊ.ಸಿ.ನಾಗಣ್ಣ (ರಾಜ್ಯೋತ್ಸವ ಪ್ರಶಸ್ತಿ) ಅವರನ್ನು ಕಾಣಬಹುದು.

ಸುತ್ತೂರು, ಜ.10–ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ 1064ನೇ ಜಯಂತಿ ಮಹೋತ್ಸವದ ಅಂಗವಾಗಿ ನಂಜನಗೂಡು ತಾಲೂಕು ಸುತ್ತೂರು ಮಠದಲ್ಲಿ ವಿವಿಧ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್, ರಾಜ್ಯ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಪಡೆದವರೂ ಸೇರಿದಂತೆ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು.

ಈ ಸಮಾರಂಭದ ಸಾನ್ನಿಧ್ಯವನ್ನು ಸುತ್ತೂರು ಶ್ರೀಗಳಾದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳು ವಹಿಸಿದ್ದು, ಸಮಾರಂಭದಲ್ಲಿ ‘ಮೈಸೂರು ಮಿತ್ರ’ ಮತ್ತು ‘ಸ್ಟಾರ್ ಆಫ್ ಮೈಸೂರ್’ ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ (ಮೈಸೂರು ವಿವಿ ಗೌರವ ಡಾಕ್ಟರೇಟ್ ಪುರಸ್ಕೃತರು), ಬಸವ ಸಮಿತಿ ಅಧ್ಯಕ್ಷರಾದ ಅರವಿಂದ ಜತ್ತಿ (ಧಾರವಾಡ ಕರ್ನಾಟಕ ವಿವಿ ಗೌರವ ಡಾಕ್ಟರೇಟ್ ಪುರಸ್ಕೃತರು), ತೋಂಟದಾರ್ಯ ಮಠದ ಶ್ರೀ ನಿಜಗುಣಾನಂದ ಸ್ವಾಮೀಜಿ (ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು), ಶಿಕ್ಷಣ ತಜ್ಞ ಡಾ.ವುಡೇ ಪಿ.ಕೃಷ್ಣ (ಗೌರವ ಡಾಕ್ಟರೇಟ್), ಎಸ್.ಷಡಕ್ಷರಿ (ನಾಡೋಜ ಪ್ರಶಸ್ತಿ), ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ (ರಾಜ್ಯೋತ್ಸವ ಪ್ರಶಸ್ತಿ), ಬೆಂಗಳೂರಿನ ಮೈಥಿಕ್ ಸೊಸೈಟಿಯ ವಿ.ನಾಗರಾಜ್ (ರಾಜ್ಯೋತ್ಸವ ಪ್ರಶಸ್ತಿ), ಕಿದ್ವಾಯಿ ಸಂಸ್ಥೆಯ

● 6ನೇ ಪುಟಕ್ಕೆ

ಮನುಕುಲದ ಉದ್ಧಾರವೇ ಸುತ್ತೂರು ಶ್ರೀಕ್ಷೇತ್ರದ ಧ್ಯೇಯವಾಗಿದೆ...

- ತೋಂಟದಾರ್ಯ ನಿಜಗುಣಾನಂದ ಸ್ವಾಮೀಜಿ ಗುಣಗಾನ
- ಸುತ್ತೂರು ಶ್ರೀಕ್ಷೇತ್ರ ಸದಾಕಾಲ ಸಂಕಷ್ಟದಲ್ಲಿರುವವರ ರಕ್ಷಿಸುತ್ತಿದೆ: ಕೆಬಿಜಿ

ಸುತ್ತೂರು, ಜ.10–ರಾಜ್ಯದ ಲಿಂಗಾಯತ ಮಠಗಳು ಕೇವಲ ಗುಡಿ–ಗುಂಡಾರಗಳಿಗೆ ಸೀಮಿತವಾಗದೇ ಮನು ಕುಲದ ಉದ್ಧಾರಕ್ಕಾಗಿ ಶಾಲಾ–ಕಾಲೇಜುಗಳನ್ನು ತೆರೆದು ಅನ್ನ ಹಾಗೂ ಅಕ್ಷರ ದಾಸೋಹವನ್ನು ನಡೆಸುತ್ತಿದೆ ಎಂದು ತೋಂಟದಾರ್ಯ ಮಠದ ನಿಜಗುಣಾನಂದ ಸ್ವಾಮೀಜಿ ಮುಕ್ತ ಕಂಠದಿಂದ ಕೊಂಡಾಡಿದರು.

ಸುತ್ತೂರು ಶ್ರೀ ಕ್ಷೇತ್ರದಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ 1064ನೇ ಜಯಂತಿ ಅಂಗವಾಗಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಅನ್ನ, ಅರಿವು, ಆಶ್ರಯ ನೀಡಿ ಮನುಷ್ಯನನ್ನು ಮನುಷ್ಯರನ್ನಾಗಿ ಕಾಣುವುದೇ ಲಿಂಗಾಯತ ಧರ್ಮ. ಇದಕ್ಕೆ ಬಸವಾದಿ ಶರಣರ ಸಂದೇಶಗಳೇ ಕಾರಣ ಎಂದರಲ್ಲದೇ, ಸುತ್ತೂರಿನ ರಾಜೇಂದ್ರ ಶ್ರೀಗಳು ತಮ್ಮ ಚಿನ್ನದ ಕರಡಿಗೆಯನ್ನು ವಿಕ್ರಯಿಸಿ, ವಿದ್ಯಾರ್ಥಿಗಳ ಹೊಟ್ಟೆ ತುಂಬಿಸಿದ ಪುಣ್ಯಾತ್ಮರು. ಕೊರೊನಾ ಸಂದರ್ಭದಲ್ಲಿ 2 ವರ್ಷ ಕಾಲ ಪ್ರವಚನ ಕಾರ್ಯಕ್ರಮಗಳು ನಿಂತು ಹೋಗಿ ಸಂಕಷ್ಟ ಪರಿಸ್ಥಿತಿಯಲ್ಲಿದ್ದಾಗ ಅನೇಕ ಸ್ವಾಮೀಜಿಗಳಿಗೆ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ಆರ್ಥಿಕ ಸಹಾಯ ಮಾಡಿದ ಮಾತೃಹೃದಯಿಗಳು. ಸುತ್ತೂರು ಶ್ರೀಮಠವು ರಾಜ್ಯದಲ್ಲಿ ಜನರು ಸಂಕಷ್ಟಕ್ಕೀಡಾದಾಗಲೆಲ್ಲಾ ಸಹಾಯಹಸ್ತ ಚಾಚುವ ಮೂಲಕ ಹೃದಯ ವೈಶಾಲ್ಯತೆ ಮೆರೆದಿದೆ ಎಂದು ಹೇಳಿದರು.

ಸಂಕಷ್ಟದಲ್ಲಿರುವವರ ರಕ್ಷಣೆ

‘ಸ್ಟಾರ್ ಆಫ್ ಮೈಸೂರ್’ ಮತ್ತು ‘ಮೈಸೂರು ಮಿತ್ರ’ ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ(ಕೆಬಿಜಿ)ಯವರು ಮಾತನಾಡಿ, ಸುತ್ತೂರು ಶ್ರೀ ಮಠವು ಸಂಕಷ್ಟದಲ್ಲಿ ಸಿಲುಕಿರುವವರಿಗೆ ತಕ್ಷಣವೇ ಸ್ಪಂದಿಸಿ ಅವರ ರಕ್ಷಣೆಗೆ ನಿಲ್ಲುವ ಮಹತ್ಕಾರ್ಯವನ್ನು ಸತತವಾಗಿ ಮಾಡುತ್ತಾ ಬಂದಿದೆ ಎಂದರು.

ಕೆಲ ವರ್ಷದ ಹಿಂದೆ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣದ ಬಳಿ ದುರದೃಷ್ಟಕರವಾದ ಜೀತದಾಳು ಪದ್ಧತಿಯ ಪ್ರಕರಣವೊಂದು ನಡೆದಿತ್ತು. ಆ ಸಂದರ್ಭದಲ್ಲಿ ಅನೇಕ ಮಕ್ಕಳ ಪೋಷಕರು ಮುಂದೇನು ಮಾಡುವುದು ಎಂದು ತೋಚದೇ ನಿಂತಿದ್ದಾಗ ಮರುದಿನವೇ ಶಿವರಾತ್ರಿ ದೇಶಿಕೇಂದ್ರ ಶ್ರೀಗಳು ಮಕ್ಕಳನ್ನೆಲ್ಲಾ ತಮ್ಮ ಮಠಕ್ಕೆ ಕರೆಸಿ ಅವರಿಗೆ ಉಚಿತ ಊಟ, ವಿದ್ಯಾಭ್ಯಾಸ, ವಸತಿ ಕೊಡುವ ಮೂಲಕ ನೆರವಿಗೆ ನಿಂತಿದ್ದರು. ಜೀವನದಲ್ಲಿ ಕೆಲವು

● 6ನೇ ಪುಟಕ್ಕೆ

ವಿಪಕ್ಷಗಳ ಐಎನ್‌ಡಿಐಎ ಒಕ್ಕೂಟದಲ್ಲಿ ಸ್ಥಾನ ಹೊಂದಾಣಿಕೆ ಅಷ್ಟು ಸುಲಭವಲ್ಲ

- ಕೇಂದ್ರ ಸಚಿವ ಹರ್ದೀಪ್ ಸಿಂಗ್‌ಪುರಿ ವ್ಯಂಗ್ಯ
- ಅವರಿನ್ನೂ ಒಕ್ಕೂಟದ ಸಂಚಾಲಕರನ್ನೇ ಆಯ್ಕೆ ಮಾಡಿಲ್ಲ



ಬೆಂಗಳೂರು, ಜ.10(ಕೆಎಂಶಿ)– ಎನ್‌ಡಿಎ ಸರ್ಕಾರದ ಕಾರ್ಯಕ್ರಮಗಳನ್ನು ಟೀಕಿಸುವ ವಿಪಕ್ಷಗಳ 'ಐ ಎ ನ್ ಡಿ ಐ ಎ' ಒಕ್ಕೂಟ ತನ್ನ ಸಂಚಾಲಕರನ್ನೇ ಆಯ್ಕೆ ಮಾಡಲಾಗುತ್ತಿಲ್ಲ ಎಂದು ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ವ್ಯಂಗ್ಯವಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕಸಭಾ ಚುನಾವಣೆಗೆ ಸ್ಥಾನ ಹಂಚಿಕೆಯೇ ವಿಪಕ್ಷಗಳ ಒಕ್ಕೂಟಕ್ಕೆ ಸಾಧ್ಯವಾಗುತ್ತಿಲ್ಲ ಎಂದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಎಲ್ಲ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದ್ದು, ಜಿಡಿಪಿ ದರ ಶೇ7.6 ಮೀರಿದೆ. ಬರುವ ಮೇ ವೇಳೆಗೆ 45 ಸಾವಿರ ಬ್ಯಾರೆಲ್ ಕಚ್ಚಾ ತೈಲ ಹಾಗೂ ಶೇ.7ರಷ್ಟು ಗ್ಯಾಸ್ ಹೆಚ್ಚು ಉತ್ಪಾದನೆ ಮಾಡಲಿದೆ, 2016ರಲ್ಲಿ ಆರಂಭವಾದ ಉಜ್ವಲ ಯೋಜನೆಯಡಿ 10.50 ಕೋಟಿ ಕುಟುಂಬಕ್ಕೆ ಉಚಿತ ಅಡುಗೆ ಅನಿಲ (ಎಲ್‌ಪಿಜಿ) ಸಂಪರ್ಕ ಒದಗಿಸಲಾಗಿದೆ, ದೇಶದಲ್ಲಿ 2014ರಲ್ಲಿದ್ದ 14 ಕೋಟಿ ಅಡುಗೆ ಅನಿಲ ಸಂಪರ್ಕ ಇಂದು 32 ಕೋಟಿಗೆ ಏರಿಕೆಯಾಗಿದೆ, ಕಂಪ್ರೆಸ್ಡ್ ಬಯೋಗ್ಯಾಸ್ ಸೌಲಭ್ಯವನ್ನೂ ನೀಡಲಾಗಿದೆ. ಜಾಗತಿಕ ಮಟ್ಟದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ದರ ಏರಿಕೆಯಾಗುತ್ತಿದ್ದರೂ, ಭಾರತದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಕಳೆದ 2 ವರ್ಷಗಳಲ್ಲಿ ಕಡಿಮೆ ಆಗಿದೆ, ಪೆಟ್ರೋಲಿಯಂ ಉತ್ಪನ್ನಗಳ ಎಕ್ಸೈಸ್ ಸುಂಕ ಕಡಿಮೆ ಮಾಡಲಾಗಿದೆ. 11 ಕೋಟಿ ಶೌಚಾಲಯ ನಿರ್ಮಿಸಲಾಗಿದೆ, ಆವಾಸ್ ಯೋಜನೆಯಡಿ ಮಹಿಳೆಯರಿಗೆ ಆದ್ಯತೆ ನೀಡಲಾಗಿದೆ, ಮಹಿಳೆಯರಿಗೆ ಶೇ.33 ರಾಜಕೀಯ ಮೀಸಲಾತಿ ಕೊಡುವ ನಿರ್ಧಾರವನ್ನು ಎನ್‌ಡಿಎ ಸರ್ಕಾರ ಕೈಗೊಂಡಿದೆ ಎಂದರು.

ಕಳೆದ 3 ವರ್ಷದಲ್ಲಿ 11,363 ಎಸ್ಸಿ, ಎಸ್ಟಿ, ಪೌರಕಾರ್ಮಿಕರಿಗೆ ನಗರಪಾಲಿಕೆಯಿಂದ 17.14 ಕೋಟಿ ರೂ. ಸೌಲಭ್ಯ





> "ನಿವೇಶನ ಖರೀದಿ, ಪಕ್ಕಾ ಮನೆ, ಸ್ವಂತ ಉದ್ಯೋಗ, ಹೊಲಿಗೆ ಯಂತ್ರ, ವೈದ್ಯಕೀಯ ಸಹಾಯ ಧನ, ಆರೋಗ್ಯ ವಿಮೆ, ಅಪಘಾತ ವಿಮೆ, ಆರೋಗ್ಯ ತಪಾಸಣೆ, ಅತಿವೃಷ್ಟಿ–ಅನಾವೃಷ್ಟಿ, ಅನಿಲ ಸಂಪರ್ಕ, ಲ್ಯಾಪ್ ಟಾಪ್ ಸಹಾಯ ಧನ, ವ್ಯಾಸಂಗ ಪ್ರೋತ್ಸಾಹ ಧನ, ಎಲ್‌ಎಲ್‌ಬಿ ಪುಸ್ತಕ ಖರೀದಿಗೆ, ಪೌರಕಾರ್ಮಿಕರ ದಿನಾಚರಣೆ, ಬೆಳಗಿನ ಉಪಾಹಾರ, ನೀರಿನ ಸಂಪರ್ಕ, ಶವ ಸಂಸ್ಕಾರ, ಕೌಶಲ್ಯಾಭಿವೃದ್ಧಿ ತರಬೇತಿ, ಕ್ರೀಡಾ ಪ್ರೋತ್ಸಾಹ ಧನ, ನಾಗರಿಕ ಸೇವಾ ವೃತ್ತಿ ತರಬೇತಿ, ಮನೆ ರಿಪೇರಿ, ಪಿಹೆಚ್.ಡಿ ಪದವಿ ಪಡೆಯಲು ಪಾಲಿಕೆಯು ಈ ಅನುದಾನವನ್ನು ಬಳಸುತ್ತಿದೆ. –ಎಂ.ಜೆ.ರೂಪಾ, ಪಾಲಿಕೆ ಅಪರ ಆಯುಕ್ತೆ,

ಮೈಸೂರು, ಜ.10(ಆರ್‌ಕೆ)–ಮೈಸೂರು ಮಹಾನಗರ ಪಾಲಿಕೆಯು ಪರಿಶಿಷ್ಟ ಜಾತಿ, ಪಂಗಡದ ಸಮುದಾಯ ಹಾಗೂ ಪೌರಕಾರ್ಮಿಕರಿಗೆ ಮೀಸಲಿರಿಸಿದ ಅನುದಾನವನ್ನು ಫಲಾನುಭವಿಗಳಿಗೆ ಪೂರ್ಣ ಪ್ರಮಾಣದಲ್ಲಿ ಬಳಸುತ್ತಿದೆ.

2020–21 ರಿಂದ 2022, 2022 ರಿಂದ 2023ರವರೆಗೆ ಕಳೆದ ಮೂರು ವರ್ಷಗಳಲ್ಲಿ ಶೇ. 24.10ರ ಯೋಜನೆಯಡಿ 11,363 ಮಂದಿ ಎಸ್ಸಿ, ಎಸ್ಟಿ ಹಾಗೂ ಪೌರಕಾರ್ಮಿಕರಿಗೆ ಒಟ್ಟು 17.14 ಕೋಟಿ ರೂ.ಗಳ ಸೌಲಭ್ಯಗಳನ್ನು ಮೈಸೂರು ಮಹಾನಗರ ಪಾಲಿಕೆಯು ತಲುಪಿಸಿದೆ ಎಂದು ಅಪರ ಆಯುಕ್ತೆ ಎಂ.ಜೆ. ರೂಪಾ ತಿಳಿಸಿದ್ದಾರೆ.

ಪರಿಶಿಷ್ಟ ಜಾತಿಯ 3,528 ಮಂದಿಗೆ ರಾಜ್ಯ ಹಣಕಾಸು ಆಯೋಗ (SFC)ದ 109.07 ಲಕ್ಷ ರೂ., ಪಾಲಿಕೆಯ 781.82 ಲಕ್ಷ ರೂ. ಸೇರಿ 890.89 ಲಕ್ಷ ರೂ.ಗಳ ಕ್ರಿಯಾ ಯೋಜನೆ ರೂಪಿಸಲಾಗಿತ್ತು. ಆ ಪೈಕಿ 741.20 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದ್ದು, 149.69 ಲಕ್ಷ ರೂ. ಬಾಕಿ ಉಳಿದಿದೆ. ಪರಿಶಿಷ್ಟ ಪಂಗಡದ 1,591 ಮಂದಿಗೆ ಎಸ್‌ಎಫ್‌ಸಿಯ 44.21 ಲಕ್ಷ ರೂ., ಪಾಲಿಕೆಯ 313.44 ಲಕ್ಷ ರೂ. ಸೇರಿ 357.65 ಲಕ್ಷ ರೂ.ಗಳ ಕ್ರಿಯಾ ಯೋಜನೆ ಮೊತ್ತದಲ್ಲಿ ಒಟ್ಟು 293.89 ಲಕ್ಷ ರೂ. ಖರ್ಚು ಮಾಡಲಾಗಿದ್ದು, 66.26 ಲಕ್ಷ ರೂ. ಹಣ ಉಳಿದಿದೆ ಎಂದು ತಿಳಿಸಿದರು.

ಅದೇ ರೀತಿ 6,244 ಮಂದಿ ಪೌರ ಕಾರ್ಮಿಕ ಫಲಾನುಭವಿಗಳಿಗೆ ಸಿದ್ಧಪಡಿಸಿದ್ದ ಎಸ್‌ಎಫ್‌ಸಿಯ 38.32 ಲಕ್ಷ ರೂ., ಪಾಲಿಕೆಯ 965.49 ಲಕ್ಷ ರೂ. ಸೇರಿ 1,006.95 ಲಕ್ಷ ರೂ. ಕ್ರಿಯಾ ಯೋಜನೆ ಮೊತ್ತದಲ್ಲಿ ಒಟ್ಟು 679.38 ಲಕ್ಷ ರೂ. ಅನುದಾನ ವೆಚ್ಚ ಮಾಡಲಾಗಿದ್ದು, 328.54 ಲಕ್ಷ ರೂ. ಬಾಕಿ ಉಳಿದಿದೆ. ಒಟ್ಟಾರೆ ಮೈಸೂರು ಮಹಾನಗರಪಾಲಿಕೆಯು ಕಳೆದ ಮೂರು ವರ್ಷಗಳಲ್ಲಿ 2,255.49 ಲಕ್ಷ ರೂ. ಕ್ರಿಯಾ ಯೋಜನೆಯಲ್ಲಿ 1,714.47 ಲಕ್ಷ ರೂ. ಗಳನ್ನು 11,363 ಮಂದಿ ಎಸ್ಸಿ, ಎಸ್ಟಿ ಹಾಗೂ ಪೌರ ಕಾರ್ಮಿಕ ಫಲಾನುಭವಿಗಳ ಕಲ್ಯಾಣ ಕಾರ್ಯಕ್ರಮಕ್ಕಾಗಿ ವಿನಿಯೋಗಿಸಿದೆ ಎಂದು ಎಂ.ಜೆ.ರೂಪಾ ತಿಳಿಸಿದರು.

ಪಾಲಿಕೆ ಸಂಪನ್ಮೂಲ, ರಾಜ್ಯ, ಕೇಂದ್ರ ಸರ್ಕಾರದ ಅನುದಾನದ ಮೊತ್ತದಲ್ಲಿ ನಿಯಮಾನುಸಾರ ನಿಗದಿಪಡಿಸಿರುವ ಶೇ.24.10ರ ಯೋಜನೆಯಂತೆ ಪರಿಶಿಷ್ಟ ಜಾತಿ, ಪಂಗಡ ಮತ್ತು ಪೌರಕಾರ್ಮಿಕರಿಗಾಗಿಯೇ ಅನುದಾನವನ್ನು ಖರ್ಚು ಮಾಡುತ್ತಿದೆ ಎಂದು ತಿಳಿಸಿದರು.

28ರಲ್ಲಿ 26 ಸ್ಥಾನ ಗೆಲ್ಲುವುದು ಕಾಂಗ್ರೆಸ್ ಗುರಿ; ಎಲ್ಲವನ್ನೂ ಬಾಚಿಕೊಳ್ಳೋದು ಬಿಜೆಪಿ ಹಠ!


ಉಭಯ ಪಕ್ಷಗಳ ಮುಖಂಡರ ಕಸರತ್ತು

ಬೆಂಗಳೂರು, ಜ.10 (ಕೆಎಂಶಿ)–ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿನ ಎಲ್ಲಾ ಸ್ಥಾನಗಳನ್ನು ಬಾಚಿಕೊಳ್ಳಬೇಕೆಂಬ ಉತ್ಸಾಹದಲ್ಲಿ ಇಂದು ಇಡೀ ದಿನ ಆಡಳಿತಾರೂಢ ಕಾಂಗ್ರೆಸ್ ಹಾಗೂ ಪ್ರತಿಪಕ್ಷ ಬಿಜೆಪಿ ಗಹನವಾದ ಚರ್ಚೆ ನಡೆಸಿದವು.

ಕಾಂಗ್ರೆಸ್ 28ರ ಪೈಕಿ ಕನಿಷ್ಠ 26 ಸ್ಥಾನಗಳಲ್ಲಿ ಗೆಲ್ಲಲೇಬೇಕೆಂಬ ಗುರಿ ಹಾಕಿಕೊಂಡಿದ್ದರೆ, ಬಿಜೆಪಿ ತನ್ನ ಮೈತ್ರಿ ಪಕ್ಷ ಜೆಡಿಎಸ್ ಜೊತೆಗೂಡಿ ಎಲ್ಲಾ 28 ಸ್ಥಾನಗಳನ್ನು ಗೆಲ್ಲಲೇಬೇಕು ಎಂಬ ಹಠದೊಂದಿಗೆ ಮುಖಂಡರು ಮತ್ತು ಕಾರ್ಯಕರ್ತರನ್ನು ಹುರಿದುಂಬಿಸುವ ಕಾರ್ಯಕ್ಕೆ ಇಂದಿಲ್ಲಿ ಚಾಲನೆ ನೀಡಿದವು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಇಂದು ಇಡೀ ದಿನ ಜಿಲ್ಲಾ ಅಧ್ಯಕ್ಷರು, ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಸೋತವರು, ಶಾಸಕರು ಹಾಗೂ ಸಚಿವರ ಜೊತೆ ಪ್ರತ್ಯೇಕ ಸಭೆಗಳನ್ನು ನಡೆಸಿ ಸಲಹೆ–ಸೂಚನೆಗಳನ್ನು ಪಡೆದುಕೊಂಡಿದ್ದಾರೆ. ಸರ್ಕಾರ ಅನುಷ್ಠಾನಕ್ಕೆ ತಂದಿರುವ ಐದು ಗ್ಯಾರಂಟಿಗಳೇ ಲೋಕಸಭಾ ಚುನಾವಣಾ ಅಸ್ತ್ರಗಳಾಗಿದ್ದು, ಇವುಗಳಿಗೆ ಕೆಳಹಂತದಲ್ಲಿ ಆದ್ಯತೆ ನೀಡಲು ಮುಂದಾಗಬೇಕು. ಚುನಾವಣೆಗೂ ಮುನ್ನವೇ ಪ್ರತಿ ಜಿಲ್ಲೆಯಲ್ಲೂ ಫಲಾನುಭವಿಗಳ ಸಭೆ ನಡೆಸಬೇಕು, ಸಭೆಗೆ ಪ್ರತಿ ಪಂಚಾಯತ್‌ನಿಂದ 100 ಫಲಾನುಭವಿಗಳನ್ನು ಕರೆತರುವಂತೆ ಸೂಚಿಸಿದರು.

ಇನ್ನೊಂದೆಡೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ 13 ಲೋಕಸಭಾ ಕ್ಷೇತ್ರಗಳ ಗೆಲುವಿನ ಬಗ್ಗೆ ಗಂಭೀರ ಚರ್ಚೆ ನಡೆಸಿತು. ಬೆಳಗ್ಗೆಯಿಂದ ಸಂಜೆವರೆಗೆ ತಲಾ ನಾಲ್ಕು ಜಿಲ್ಲೆಗಳ ಒಂದು ಗುಂಪಿನಂತೆ ಸಭೆಗಳನ್ನು ನಡೆಸಲಾಯಿತು. ಆಡಳಿತಾರೂಢ ಕಾಂಗ್ರೆಸ್ ವೈಫಲ್ಯಗಳನ್ನು ಜನರಿಗೆ ತಿಳಿಹೇಳಬೇಕು, ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಜನಪರ ಯೋಜನೆಗಳ ಪ್ರಯೋಜನಗಳನ್ನು ಮನೆ–ಮನೆಗೆ ತಲುಪಿಸುವ ಕೆಲಸ ಆಗಬೇಕು ಎಂದು ಸೂಚಿಸಲಾಯಿತು.



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ 'ಪ್ರತಾಪ್ ಸಿಂಹ' 2024ನೇ ಸಾಲಿನ ಕ್ಯಾಲೆಂಡರ್ ಅನ್ನು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಬಿಡುಗಡೆ ಮಾಡಿದರು. ಈ ವೇಳೆ ಮಹಾಜನ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಟಿ.ಮುರುಳೀಧರ್ ಭಾಗವತ್, ಶ್ರೀಮತಿ ವಿಜಯಲಕ್ಷ್ಮಿ ಭಾಗವತ್, ಮಲ್ಲಿಕಾರ್ಜುನ ಬೂಕನಕೆರೆ, ಪ್ರವೀಣ್ ಜೈನ್ ಇನ್ನಿತರರು ಉಪಸ್ಥಿತರಿದ್ದಾರೆ.

ಜ.26ರ ಗಣರಾಜ್ಯೋತ್ಸವ ಹಿನ್ನೆಲೆ

ಮೈಸೂರಲ್ಲಿ ಪಾಲಿಕೆಯಿಂದ ಪ್ಲಾಸ್ಟಿಕ್ ಧ್ವಜ ಮಾರಾಟ ವಿರುದ್ಧ ಕಾರ್ಯಾಚರಣೆ



ಮೈಸೂರು, ಜ.10 (ಆರ್‌ಕೆ) –ಜನವರಿ 26ರಂದು ನಡೆಯಲಿರುವ ಗಣರಾಜ್ಯೋತ್ಸವ ಹಿನ್ನೆಲೆಯಲ್ಲಿ ಮೈಸೂರು ನಗರದಾದ್ಯಂತ ನಗರಪಾಲಿಕೆ ಅಧಿಕಾರಿಗಳು ಇಂದಿನಿಂದ ಪ್ಲಾಸ್ಟಿಕ್ ಧ್ವಜ ದಾಸ್ತಾನು, ಮಾರಾಟದ ವಿರುದ್ಧ ಕಾರ್ಯಾಚರಣೆ ಆರಂಭಿಸಿದ್ದಾರೆ.

ಮೈಸೂರು ಮಹಾನಗರ ಪಾಲಿಕೆ ಅಡಿಷನಲ್ ಕಮಿಷ್ನರ್ ಎಂ.ಜೆ. ರೂಪಾ ನಿರ್ದೇಶನದಂತೆ ಎಲ್ಲಾ 9 ವಲಯ ಕಚೇರಿಗಳ ವ್ಯಾಪ್ತಿಯಲ್ಲಿ ವಲಯ ಆಯುಕ್ತರ ನೇತೃತ್ವದಲ್ಲಿ ಆರೋಗ್ಯ ನಿರೀಕ್ಷಕರು, ಪರಿಸರ ಇಂಜಿನಿಯರ್‌ಗಳು ಹಾಗೂ ಅಭಯ ತಂಡದ ಸಿಬ್ಬಂದಿ ಇಂದು ಬೆಳಗ್ಗೆಯಿಂದ ಅಂಗಡಿಗೆ ತೆರಳಿ ಪರಿಶೀಲನೆ ನಡೆಸಿದರು.

ಅಂಗಡಿ, ಗೋದಾಮು, ಮಾಲೀಕರ ಮನೆಗಳಲ್ಲಿ ಪ್ಲಾಸ್ಟಿಕ್ ಧ್ವಜಗಳನ್ನು ದಾಸ್ತಾನು ಮಾಡಲಾಗಿದೆ ಎಂಬ ಮಾಹಿತಿಯ ಜಾಡು ಹಿಡಿದ ಅಧಿಕಾರಿಗಳು, ದಾಳಿ ನಡೆಸಿ ಪರಿಶೀಲಿಸಿದರು. ಮೊದಲ ದಿನವಾದ ಇಂದು ಸಂಜೆವರೆಗೂ ಪ್ಲಾಸ್ಟಿಕ್ ಧ್ವಜಗಳು ಸಿಗಲಿಲ್ಲ. ಆದರೆ ಅಂಗಡಿ ಮಾಲೀಕರಿಗೆ ಪ್ಲಾಸ್ಟಿಕ್ ಪದಾರ್ಥ ಅಥವಾ ಧ್ವಜ ದಾಸ್ತಾನು, ಮಾರಾಟ ಮಾಡಬಾರದು ಎಂದು ತಿಳುವಳಿಕೆ ಹೇಳಿರುವ ಪಾಲಿಕೆ ಅಧಿಕಾರಿಗಳು, ನಿಯಮ ಮೀರಿ ಮಾರಾಟ ಮಾಡಿದರೆ ಪ್ರಕರಣ ದಾಖಲಿಸಿ ದಂಡ ವಿಧಿಸಲಾಗುವುದು ಎಂದು ಎಚ್ಚರಿಕೆ ನೀಡುತ್ತಿದ್ದಾರೆ.

ಎಲ್ಲರೂ ಬಟ್ಟೆಯಿಂದ ತಯಾರಿಸಿದ ರಾಷ್ಟ್ರಧ್ವಜವನ್ನು ಮಾತ್ರ ಖರೀದಿಸಿ ಬಳಸಬೇಕು ಎಂದು ಸಾರ್ವಜನಿಕರಿಗೂ ಸಲಹೆ ನೀಡಿರುವ ಅಧಿಕಾರಿಗಳು, ಪ್ಲಾಸ್ಟಿಕ್ ಧ್ವಜ ಮಾರಾಟ ವಿರುದ್ಧ ಕಾರ್ಯಾಚರಣೆ ಮುಂದುವರಿಸಲಾಗುವುದು ಎಂದು ಪಾಲಿಕೆ ಹೆಚ್ಚುವರಿ ಆಯುಕ್ತರಾದ ಎಂ.ಜೆ. ರೂಪಾ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ನಾಯಕ ಸಮುದಾಯಕ್ಕೆ ಕಾಂಗ್ರೆಸ್ ಟಿಕೆಟ್ ನೀಡುವಂತೆ ಆಗ್ರಹ



ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಅಧ್ಯಕ್ಷ ದ್ಯಾವಪ್ಪನಾಯಕ ಮಾತನಾಡಿದರು.

ಮೈಸೂರು, ಜ.10(ಎಂಟಿವೈ)– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮೈಸೂರು–ಕೊಡಗು ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷ ನಾಯಕ ಸಮುದಾಯಕ್ಕೆ ಟಿಕೆಟ್ ನೀಡಬೇಕು ಎಂದು ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಅಧ್ಯಕ್ಷ ದ್ಯಾವಪ್ಪನಾಯಕ ಒತ್ತಾಯಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ನಾಯಕ ಸಮುದಾಯದ 2 ಲಕ್ಷಕ್ಕೂ ಅಧಿಕ ಮತದಾರರಿದ್ದಾರೆ. ಆದರೂ, ಜನಸಂಖ್ಯೆಗೆ ತಕ್ಕ ರಾಜಕೀಯ ಪ್ರಾತಿನಿಧ್ಯ ದೊರೆತಿಲ್ಲ. ಸಿಎಂ ಸಿದ್ದರಾಮಯ್ಯ ಅವರು ನಮಗೆ ಸಾಮಾಜಿಕ ನ್ಯಾಯ ದೊರಕಿಸಬೇಕು. ಮೈಸೂರು ವಿಭಾಗದಲ್ಲಿಯೂ 15 ಲಕ್ಷ ಮತದಾರರಿದ್ದೇವೆ. ಇಲ್ಲಿ ಟಿಕೆಟ್ ನೀಡಿದರೆ ಚಾಮರಾಜನಗರ, ಮಂಡ್ಯ, ಹಾಸನ, ತುಮಕೂರು ಕ್ಷೇತ್ರದ ಪಕ್ಷಕ್ಕೆ ಸಹಕಾರಿಯಾಗಲಿದೆ. ಬಿಜೆಪಿಯವರು ಅವಕಾಶ ನೀಡಿದರೂ ಸಹಕರಿಸುತ್ತೇವೆ ಎಂದರು. ಗೋಷ್ಠಿಯಲ್ಲಿ ಸಮುದಾಯದ ಮುಖಂಡರಾದ ಶಿವನಂಜಯ್ಯ ರಮ್ಮನಹಳ್ಳಿ, ವಾಲೀಕಿ ನಿಂಗರಾಜ್, ಮಯೂರ ಕಲ್ಲುಣಿಕೆ, ಕೃಷ್ಣ ಸೋಮಶಪುರ, ಬನ್ನಿಕುಪ್ಪೆ ರಾಮಚಂದ್ರ, ಹುಣಸೂರು ರಾಜು ಇದ್ದರು.

ಅಸಂಘಟಿತ ಮಹಿಳೆಯರಿಗೆ ಕಾರ್ಯಾಗಾರ



ಮೈಸೂರು,ಜ.10–ರಾಷ್ಟ್ರೀಯ ಕಾರ್ಮಿಕ ಶಿಕ್ಷಣ ಅಭಿವೃದ್ಧಿ ಮಂಡಳಿ ವತಿಯಿಂದ ನಿಂಗಯ್ಯನಕೆರೆ ಅಂಗನವಾಡಿಯಲ್ಲಿ ಅಸಂಘಟಿತ ಮಹಿಳೆಯರಿಗೆ ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಕುಂಬಾರಕೊಪ್ಪಲಿನ ಪ್ರಾಂಶುಪಾಲ ಶಿವಕುಮಾರ ಕಾರ್ಯಾಗಾರ ಉದ್ಘಾಟಿಸಿದರು. ನಂತರ ಕಾರ್ಮಿಕ ಶಿಕ್ಷಣ ಇಲಾಖೆ ಪ್ರಾದೇಶಿಕ ನಿರ್ದೇಶಕ ಪ್ರಭಾರ ರಾಜು ವೆಂಕಪ್ಪ ವಡೆಯರ್ ಮಾತನಾಡಿ, ಕಾರ್ಮಿಕ ಇಲಾಖೆ ನೀಡಿರುವ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ನೀಡಿ ಇ–ಶ್ರಮ್ ಕಾರ್ಡ್ ನೋಂದಣಿಯನ್ನು ಮಾಡಿಸಿಕೊಳ್ಳಲು ಫಲಾನುಭವಿಗಳಿಗೆ ಮಾಹಿತಿ ನೀಡಿ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳಾದ ಮಂದನ ಕಟ್ಟಡ ಕಾರ್ಮಿಕರ ಕಾರ್ಡ್, ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆ, ಪೆನ್ಷನ್ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಅಂಗನವಾಡಿ ಶಿಕ್ಷಕಿ ಮಂಗಳ, ಸಹಾಯಕಿ ಸರೋಜಾ, ಆರೋಗ್ಯ ಇಲಾಖೆ ಸಿಬ್ಬಂದಿಗಳಾದ ಗೋಪಾಲ್, ನಾಗೇಂದ್ರಪ್ರಸಾದ್ ಇದ್ದರು.

ದುಡಿಯುವ ಜನರ ಬದುಕು ಸಂರಕ್ಷಿಸಲು ಆಗ್ರಹಿಸಿ ಮೈಸೂರಲ್ಲಿ ಸಿಐಟಿಯು ಸಹಿ ಸಂಗ್ರಹ ಅಭಿಯಾನ



ದುಡಿಯುವ ಜನರ ಬದುಕನ್ನು ಸಂರಕ್ಷಿಸುವಂತೆ ಒತ್ತಾಯಿಸಿ ಸಿಐಟಿಯು ವತಿಯಿಂದ ಗನ್‌ಹೌಸ್ ಬಳಿ ಸಹಿ ಸಂಗ್ರಹ ಅಭಿಯಾನ ನಡೆಸಲಾಯಿತು.

ಮೈಸೂರು, ಜ.10(ಜಿಎ)–ಶ್ರಮಜೀವಿಗಳ ಜೀವನಮಟ್ಟ ಸುಧಾರಿಸಿ, ದುಡಿಯುವ ಜನರ ಬದುಕನ್ನು ಸಂರಕ್ಷಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಸೆಂಟರ್ ಆಫ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ವತಿಯಿಂದ ನಗರದ ಗನ್‌ಹೌಸ್ ಬಳಿ ಸಹಿ ಸಂಗ್ರಹ ಅಭಿಯಾನ ನಡೆಸಲಾಯಿತು.

ದೇಶದಲ್ಲಿ ದಿನದಿಂದ ದಿನಕ್ಕೆ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರುತ್ತಿದೆ. ದುಡಿಯುವ ಜನರ ಬದುಕು ದುಸ್ತರವಾಗಿದೆ. ಯುವಕರಿಗೆ ಸರಿಯಾಗಿ ಉದ್ಯೋಗ ಸಿಗುತ್ತಿಲ್ಲ. ಶ್ರಮಿಕರಿಗೆ ಕೆಲಸಕ್ಕೆ ತಕ್ಕಂತೆ ವೇತನ ನೀಡುತ್ತಿಲ್ಲ. ಇದರಿಂದ ಉತ್ತಮ ಬದುಕು ಕಟ್ಟಿಕೊಳ್ಳಲು ಆಗುತ್ತಿಲ್ಲ. ಸರ್ಕಾರಗಳ ಅವೈಜ್ಞಾನಿಕ ನೀತಿಗಳಿಂದಾಗಿ ಬಡ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೀಗಾಗಿ ಕೇಂದ್ರ ಸರ್ಕಾರ ಜನರ ಘನತೆಯ ಬದುಕು ಖಾತ್ರಿಗೊಳಿಸಬೇಕೆಂದು ಆಗ್ರಹಿಸಿದರು.

ಅಗತ್ಯ ವಸ್ತುಗಳ ಬೆಲೆ ಏರಿಕೆ ನಿಯಂತ್ರಿಸಬೇಕು. ರೈತರಿಗೆ ಮಾರಕವಾಗಿರುವ ಕೃಷಿ ಕಾನೂನು ತಿದ್ದುಪಡಿ ಹಿಂಪಡೆದು, ಎಪಿಎಂಸಿ ಬಲಪಡಿಸಬೇಕು. ದೇಶದ ಸಂವಿಧಾನ ರಕ್ಷಿಸಿ, ಜನತೆಯ ಐಕ್ಯತೆ, ಸಾಮರಸ್ಯ ಕಾಪಾಡಬೇಕು. ವಿದ್ಯುತ್, ರೈಲ್ವೆ ಒಳಗೊಂಡಂತೆ ಸಾರ್ವಜನಿಕ ವಲಯದ ಖಾಸಗೀಕರಣ ನಿಲ್ಲಬೇಕು. ಕಾರ್ಮಿಕ ವಿರೋಧಿ ನಾಲ್ಕು ಕಾರ್ಮಿಕ ಸಂಹಿತೆ ಹಿಂಪಡೆಯಬೇಕು. ಮಹಿಳೆಯರನ್ನು ರಾತ್ರಿ ಪಾಳಿಯಲ್ಲಿ ದುಡಿಸಿಕೊಳ್ಳಲು ಅವಕಾಶ ನೀಡುವ ಕಾನೂನು ಹಿಂಪಡೆಯಬೇಕು. ಕನಿಷ್ಠ ಕೂಲಿಯನ್ನು 31 ಸಾವಿರಕ್ಕೆ ಏರಿಕೆ ಮಾಡಬೇಕು. ಇಎಸ್‌ಐ, ಪಿಎಫ್, ಗ್ರಾಚ್ಯುಯಿಟಿ, ಬೋನಸ್ ಕಾಯಿದೆಯಲ್ಲಿ ವಿಧಿಸಲಾಗಿರುವ ಎಲ್ಲಾ ಮಿತಿಗಳನ್ನು ತೆಗೆದುಹಾಕಬೇಕು. ಇಪಿಎಫ್ ನಿವೃತ್ತಿದಾರರಿಗೆ ಕನಿಷ್ಠ 10 ಸಾವಿರ ಪಿಂಚಣಿ ಹಾಗೂ ತುಟ್ಟಿಭತ್ಯೆ ನೀಡಬೇಕು. ಪಂಚಾಯಿತಿ ನೌಕರರಿಗೆ ಸಮಯಕ್ಕೆ ಸರಿಯಾಗಿ ವೇತನ ಹಾಗೂ ಇನ್ನಿತರ ಕಾನೂನುಬದ್ಧ ಸೌಲಭ್ಯ ನೀಡಬೇಕು. ನಿವೃತ್ತರಾದ ಬಿಸಿಯೂಟ ನೌಕರರಿಗೆ ಇಡುಗಂಟು ನೀಡಬೇಕೆಂದು ಒತ್ತಾಯಿಸಿದರು. ಸಿಐಟಿಯು ರಾಜ್ಯಾಧ್ಯಕ್ಷೆ ಎಸ್.ವರಲಕ್ಷ್ಮೀ, ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಪ್ರೊ.ವಿ.ಎನ್.ಲಕ್ಷ್ಮೀನಾರಾಯಣ್, ಜಿಲ್ಲಾಧ್ಯಕ್ಷ ಜಿ.ಜಯರಾಂ, ಕಾರ್ಯಾಧ್ಯಕ್ಷ ಎಚ್.ಎಸ್.ಜಗದೀಶ್, ಪ್ರಧಾನ ಕಾರ್ಯದರ್ಶಿ ಬಾಲಾಜಿ ರಾವ್, ಖಜಾಂಚಿ ಎಂ.ಅಣ್ಣಪ್ಪ ಸೇರಿದಂತೆ ಹಲವರು ಭಾಗವಹಿಸಿದ್ದರು.

ಪಿಎಚ್.ಡಿ ಪದವೀಧರರು

ಎಂ.ಸಿ.ಪ್ರವೀಣ್‌ಕುಮಾರ್



ಮೈಸೂರು, ಜ. 10– ಡಾ. ಶ್ರೀಶೈಲ ನಾಗರಾಳ ಅವರ ಮಾರ್ಗದರ್ಶನದಲ್ಲಿ ಎಂ.ಸಿ.ಪ್ರವೀಣ್ ಕುಮಾರ್ ಭಾಷಾ ನಿಕಾಯ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ವಚನ ಸಾಹಿತ್ಯದಲ್ಲಿ ಗುರುಶಿಷ್ಯರ ಪರಿಕಲ್ಪನೆ ಮಹಾಪ್ರಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಎಸ್.ಸಚಿನ್



ಡಾ.ಸಿ.ನಿಂಗಪ್ಪ ಮತ್ತು ಡಾ.ಎ.ಎ.ಪ್ರಸನ್ನ ಅವರ ಮಾರ್ಗದರ್ಶನದಲ್ಲಿ ಎಸ್.ಸಚಿನ್ ಅವರು ಫಾಕಲ್ಟಿ ಆಫ್ ಅಪ್ಲೈಡ್ ಸೈನ್ಸಸ್ (ಭೌತಶಾಸ್ತ್ರ) ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಬೆಳಗಾವಿ ವಿಶ್ವೇಶ್ವರಯ್ಯ ಟೆಕ್ನಾಲಜಿಕಲ್ ಯೂನಿವರ್ಸಿಟಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಮೈಸೂರು ವಿಶ್ವವಿದ್ಯಾಲಯದ ನೂತನ ಸಿಂಡಿಕೇಟ್ ಸದಸ್ಯರಾಗಿ ನೇಮಕಗೊಂಡ ಬಸವರಾಜು ಚೆಟ್ಟಿಹುಂಡಿ ಅವರನ್ನು ಮೈಸೂರು ವಿಶ್ವವಿದ್ಯಾನಿಲಯದ ಸ್ನೇಹ ಬಳಗದ ವತಿಯಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಭಾಸ್ಕರ್, ಪ್ರಸಾದ್, ನಂದೀಶ್‌ಕುಮಾರ್, ಕೃಷ್ಣಕುಮಾರ್, ಅಜಯ್ ಉಪಸ್ಥಿತರಿದ್ದರು.


ಮನಸೂರೆಗೊಂಡ ಸೌಂದರ್ಯ ಲಹರಿ ವಿಲಾಸ ನೃತ್ಯರೂಪಕ



ಮೈಸೂರು, ಜ. 10– ಮೈಸೂರಿನ ಸೆಂಟರ್ ಫಾರ್ ಡಿವೈನ್ ಆರ್ಟ್ಸ್ ವತಿಯಿಂದ ಹಿರಿಯ ರಂಗಕರ್ಮಿ ದಂಪತಿ ಲೀಲಾ ಬಸವರಾಜು ಪುತ್ರಿ ಭರತನಾಟ್ಯ ವಿದುಷಿ ಪುಣೆಯ ಡಾ.ಲಕ್ಷ್ಮಿ ಅವರ ತಂಡದವರು ಗವಿಪುರದ ಅದಮ್ಯಚೇತನ ಕಾರ್ಯಾಲಯ ಸಭಾಂಗಣದಲ್ಲಿ ನಡೆದ ಮಾಸಿಕ ಎ ಛಾಟ್ ಕಾರ್ಯಕ್ರಮದಲ್ಲಿ ಆದಿ ಶಂಕರಾಚಾರ್ಯ ವಿರಚಿತ ಸೌಂದರ್ಯ ಲಹರಿ ಭಗವತಿಯನ್ನು ಸರ್ವಾಂಗ ಸುಂದರವಾಗಿ ಕೃತಿಯನ್ನು ವಿಶೇಷ ಧ್ವನಿ ಬೆಳಕು ರಂಗಸಜ್ಜಿಕೆಂಯೊಡನೆ ಸೌಂದರ್ಯ ಲಹರಿ ವಿಲಾಸ ನೃತ್ಯ ರೂಪಕವನ್ನು ಪ್ರದರ್ಶಿಸಲಾಯಿತು.

ಅದಮ್ಯ ಚೇತನ ಮುಖ್ಯಸ್ಥೆ ಡಾ.ತೇಜಸ್ವಿನಿ ಅನಂತಕುಮಾರ್, ಹಿರಿಯ ಶಿಕ್ಷಣ ತಜ್ಞ ಚಾಣಕ್ಯ ವಿಶ್ವವಿದ್ಯಾಲಯದ ಪ್ರೊ. ಪಿವಿ.ಕೃಷ್ಣಭಟ್ಟ, ಅನಂತ ಪಥದ ಸಂಪಾದಕ ಟಿ.ಎಸ್.ಗೋಪಾಲ್, ಕಲಾವಿದೆ ಸುಧಾ ಪ್ರಸನ್ನ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.1.2024 ಗುರುವಾರ, ಮಳೆ ನಕ್ಷತ್ರ: ಉತ್ತರಾಷಾಢ 11.1.2024ರಿಂದ 23.01.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಮೂಲಾ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಬಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಮೈಸೂರು ವಿಶ್ವವಿದ್ಯಾಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಮೈಸೂರು ವಿವಿ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ.ಬಿ.ನಾಗರಾಜು ಅವರಿಂದ ಭಾರತದ ಸಂವಿಧಾನ ಮತ್ತು ವಾಣಿಜ್ಯ ಕುರಿತು ಉಪನ್ಯಾಸ, ಅಧ್ಯಕ್ಷತೆ: ಟಿಟಿಎಲ್ ಕಾಲೇಜು ಪ್ರಾಂಶುಪಾಲ ಡಾ.ಡಿ.ವಿ. ಪ್ರಶಾಂತ್, ಸ್ಥಳ: ಟಿಟಿಎಲ್ ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು:** ಸಾಂಸ್ಕೃತಿಕ, ಸಾಹಿತ್ಯಕ ಹಾಗೂ ಕ್ರೀಡಾ ವೇದಿಕೆಗಳ ಸಮಾರೋಪ, ಅಧ್ಯಕ್ಷತೆ: ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ. ನಿರಂಜನ ಮೂರ್ತಿ, ಮುಖ್ಯ ಅತಿಥಿಗಳು: ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಸುದರ್ಶನ್, ಬಹುಮಾನ ವಿತರಣೆ: ಏಕಲವ್ಯ ಪ್ರಶಸ್ತಿ ಪುರಸ್ಕೃತರಾದ ಡಾ.ಸವಿತಾ ಪ್ರಶಾಂತ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

■ **ಚಿನ್ಮಯ ಮಿಷನ್:** ಪಂಡಿತ್ ಕೃಷ್ಣರಾವ್ ಪ್ರಕಾಶ್‌ರಿಂದ ಶ್ರೀಮದ್ ಭಾಗವತ–11ನೇ ಸ್ಕಂದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಮೈಸೂರು ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪ್ರಖ್ಯಾತ ಪಂಡಿತ್ ಕಲ್ಲಾಪುರ ಪವಮಾನಾಚಾರ್ಯ ಅವರಿಂದ ಭಗವದ್ಗೀತೆ 14ನೇ ಅಧ್ಯಾಯ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ, ಸಂಜೆ 5ರಿಂದ 6ರವರೆಗೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ (ಬೆಂಗಳೂರು), ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ (ಮೈಸೂರು) :** ಹೆಸರಾಂತ ಉಪನ್ಯಾಸಕರಾದ ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀ ರಾಮ ಮಂದಿರ, ಕಾಂತರಾಜ ಅರಸ್ ರಸ್ತೆ, ಸಂಜೆ 6.15ರಿಂದ.

■ **ಶ್ರೀ ಉತ್ತರಾದಿ ಮಠ ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀ ಪಾದಂಗಳವರ ಆಜ್ಞೆ ಮತ್ತು ಅನುಗ್ರಹದಿಂದ ಹೆಸರಾಂತ ಪ್ರವಚನಕಾರರಾದ ಪಂಡಿತ್ ಶ್ರೀ ಪವಮಾನಾಚಾರ್ಯ ಕಲ್ಲಾಪುರ ಅವರಿಂದ ಶ್ರೀ ಭಗವದ್ಗೀತಾ ಅಭಿಯಾನ, ಸ್ಥಳ: ರೋಗ ಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6.30ರಿಂದ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ– ಮೈಸೂರಿನ ಎನ್.ರವಿಶಂಕರ್, 6.40 ಪದ ಸಂಸ್ಕೃತಿ, ಪ್ರಸ್ತುತಿ –ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ, 10.00 ಬೊನಾಲ ಶಂಕರ ಪ್ರಕಾಶ್–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 1.20 ಭಾವಗೀತೆ–ಸುನಂದಾ ದಿಲೀಪ್, 4.00 ಜನಪದ ಸಂಗೀತ, 4.30 ರಸಮಂಜರಿ–ಶಾರದಾ ವಿಲಾಸ ಕಾಲೇಜಿನ ಸಂಸ್ಕೃತ ವಿಭಾಗದವರಿಂದ ಕಾರ್ಯಕ್ರಮ ವೈವಿಧ್ಯ, 6.50 ಕೃಷಿರಂಗ–ಜೈವಿಕ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ ಎಸ್. ಮಲ್ಲೇಶ್ ಕುಮಾರ್ ಹಾಗೂ ಹೆಚ್.ಪಿ.ರಾಮಚಂದ್ರ, 8.00 ಯುವವಾಣಿ–ರಾಷ್ಟ್ರೀಯ ಯುವ ದಿನದ ಸಂದರ್ಭದಲ್ಲಿ ನನ್ನ ಕನಸಿನ ಭಾರತ ಕುರಿತು ಮಾತುಕತೆ. ಭಾಗವಹಿಸುವವರು ಯತೀಶ್ ಎಸ್., ದಿಯಾ ಎಸ್. ಅರಸ್, ಅಂಜಲಿ ಸಿ.ಎಂ., ಶಿಶಿರ್ ಕೆ. ಲೋಹಿತ್, ನಡೆಸಿಕೊಡುತ್ತಾರೆ ಕೆ.ಎಂ. ದೀಕ್ಷಿತ್ ನಾಯರ್, 10.30 ಸವಿನೆನಪು

ರಾರಾಜಿಸುತ್ತಿರುವ ಜಾಹೀರಾತು ಫಲಕಗಳು; ಮೈಸೂರು ಸಹಜ ಸೌಂದರ್ಯಕ್ಕೆ ಧಕ್ಕೆ

● ನಗರದ ಹೃದಯ ಭಾಗದಲ್ಲಿ ಸ್ವಲ್ಪ ನಿಯಂತ್ರಣ, ಅದರಿಂದಾಚೆಗೆ ಅನಿಯಂತ್ರಿತ ವಾತಾವರಣ ● ಸಾರ್ವಜನಿಕರ ಆಕ್ರೋಶ



ಮೈಸೂರಿನ ಹೆಬ್ಬಾಳದಲ್ಲಿ ಮಳಿಗೆಯೊಂದರ ಜಾಹೀರಾತು ಫಲಕವನ್ನು ರಸ್ತೆಯಲ್ಲೇ ಇಟ್ಟಿರುವುದು.





ಮೈಸೂರಿನ ವಿವಿಧೆಡೆ ರಸ್ತೆಗಳಲ್ಲಿ ಅಳವಡಿಸಿರುವ ನಿಧನ ಹೊಂದಿದವರಿಗೆ ಶ್ರದ್ಧಾಂಜಲಿ ಸಲ್ಲಿಸಿರುವ ಬ್ಯಾನರ್‌ಗಳು.



ಮೈಸೂರಿನ ಗೋಕುಲಂ ಬಳಿಯ ಕೆಆರ್‌ಎಸ್ ರಸ್ತೆಬದಿಯಲ್ಲಿ ರಾರಾಜಿಸುತ್ತಿರುವ ವಾಣಿಜ್ಯ ಉದ್ದೇಶಿತ ಜಾಹೀರಾತು ಫಲಕಗಳು.

ಮೈಸೂರು,ಜ.10(ಪಿಎಂ)–ಮೈಸೂರು ನಗರದ ಅಂದಕ್ಕೆ ಧಕ್ಕೆ ಉಂಟು ಮಾಡುತ್ತಿವೆ ಕಂಡ ಕಂಡಲ್ಲಿ ಹಾಕುತ್ತಿರುವ ಫ್ಲೆಕ್ಸ್, ಬ್ಯಾನರ್, ಪೋಸ್ಟರ್ ಜಾಹೀರಾತುಗಳು. ಇವುಗಳಲ್ಲಿ ಅದೆಷ್ಟು ಅಧಿಕೃತವೋ–ಅನಧಿಕೃತವೋ ಗೊತ್ತಿಲ್ಲ. ಒಟ್ಟಾರೆ ನಗರದ ಸಹಜ ಸೌಂದರ್ಯಕ್ಕೆ ಸಂಚಕಾರ ಆಗಿದೆ ಎಂಬ ಆಕ್ರೋಶ ಸಾರ್ವಜನಿಕರಿಂದ ವ್ಯಕ್ತವಾಗಿದೆ. ಬಹುತೇಕ ಜಾಹೀರಾತುಗಳು ಅನಧಿಕೃತವೇ ಆಗಿವೆ ಎನ್ನುತ್ತವೆ ಮೂಲಗಳು.

ನಗರದ ಹೃದಯಭಾಗದಲ್ಲಿ ಬ್ಯಾನರ್, ಬಂಟಿಂಗ್ಸ್ ಸೇರಿದಂತೆ ವಿವಿಧ ಬಗೆಯ ಜಾಹೀರಾತುಗಳ ಹಾವಳಿಗೆ ಬಹುತೇಕ ಬ್ರೇಕ್ ಬಿದ್ದಿದೆ. ಮೈಸೂರು ಮಹಾನಗರ ಪಾಲಿಕೆ ಕಟ್ಟುನಿಟ್ಟಿನ ಕ್ರಮದಿಂದ ಇದು ಸಾಧ್ಯವಾಗಿದೆ. ಆದರೆ ನಗರದ ವಿವಿಧ ಬಡಾವಣೆ, ಪ್ರದೇಶಗಳಲ್ಲಿ ತರಾವರಿ ಜಾಹೀರಾತು ರಾರಾಜಿಸುತ್ತಿವೆ. ಹಾಗಾಗಿ ನಗರದ ಹೃದಯಭಾಗದಿಂದಾಚೆಗೂ ಪಾಲಿಕೆಯ ಬಿಗಿ ಕ್ರಮ ಅಗತ್ಯವಿದೆ ಎನ್ನುತ್ತಾರೆ ಪ್ರಜ್ಞಾವಂತ ನಾಗರಿಕರು.

ಹಬ್ಬಕ್ಕೆ ಶುಭಾಶಯ ಕೋರುವ, ನೆಚ್ಚಿನ ನಾಯಕರಿಗೆ ಜನ್ಮದಿನದ ಶುಭಾಶಯ ತಿಳಿಸುವ ಆಳೆತ್ತರದ ಫ್ಲೆಕ್ಸ್, ಫಲಕಗಳು ಅಲ್ಲಲ್ಲಿ ನಿಂತಿದ್ದರೆ, ಜಾಹೀರಾತು ಪೋಸ್ಟರ್, ಫಲಕಗಳು ನಗರದ ಮುಖ್ಯ ರಸ್ತೆಯ ವಿದ್ಯುತ್ ಕಂಬಕ್ಕೆ ತೂಗಿ ಬೀಳುತ್ತಿವೆ. ಇಂತಹವುಗಳಲ್ಲಿ ಎಷ್ಟು ಅಧಿಕೃತ ಎಂಬುದು ಮಾತ್ರ ಗೊತ್ತಿಲ್ಲ. ಬಹುತೇಕ ಸಂದರ್ಭದಲ್ಲಿ ಪಾಲಿಕೆಯಿಂದ ಅನುಮತಿ ಪಡೆಯದೇ ಹೀಗೆ ತೂಗು ಹಾಕುವುದೇ ಹೆಚ್ಚು ಎನ್ನುತ್ತವೆ ಮೂಲಗಳು. ಆ ಮೂಲಕ ಪಾಲಿಕೆಗೆ ಪಾವತಿಸಬೇಕಾದ ಶುಲ್ಕ ವಂಚಿಸುವುದಲ್ಲದೇ ನಗರದ ಸೌಂದರ್ಯಕ್ಕೂ ಧಕ್ಕೆ ಉಂಟು ಮಾಡಲಾಗುತ್ತದೆ ಎಂಬ ಆರೋಪ ಸಾರ್ವಜನಿಕರಿಂದ ಕೇಳಿ ಬರುತ್ತಿದೆ.

ಯಾವುದೇ ವ್ಯಕ್ತಿ ಅಥವಾ ಸಂಸ್ಥೆ ಇಲ್ಲವೇ ಸಂಘಗಳು ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪೋಸ್ಟರ್, ಬಂಟಿಂಗ್ಸ್, ಭಿತ್ತಿಪತ್ರಗಳನ್ನು ಅನಧಿಕೃತವಾಗಿ ಪ್ರದರ್ಶಿಸುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ ಎಂದು ನಗರ ಪಾಲಿಕೆಯ ಉಪವಿಧಿಯಲ್ಲಿ ಉಲ್ಲೇಖಿಸಲಾಗಿದೆ. ಆದರೆ ಇದು ಎಷ್ಟರ ಮಟ್ಟಿಗೆ ಪಾಲನೆಯಾಗುತ್ತಿದೆ ಎಂದು ಅವಲೋಕಿಸಿದರೆ ತೀರ ವಿರಳವೇ ಎನ್ನಬಹುದು. ಎಷ್ಟೋ ಅಂಗಡಿ ಮುಂಗಟ್ಟುಗಳ ಮುಂದೆ ಅವುಗಳ ಜಾಹೀರಾತು ಫಲಕಗಳು ಫುಟ್‌ಪಾತ್ ಮತ್ತು ರಸ್ತೆಯನ್ನೇ ಆಕ್ರಮಿಸಿದ್ದು, ಪಾದಚಾರಿಗಳು ಹಾಗೂ ವಾಹನ ಸವಾರರು ಇದರಿಂದ ಪರದಾಡುವ ಪರಿಸ್ಥಿತಿ ನಗರದ ಹಲವು ಭಾಗಗಳಲ್ಲಿ ಉದ್ಭವಿಸಿದೆ. ನಗರದಲ್ಲಿ ಅನಧಿಕೃತ ಜಾಹೀರಾತು ಫಲಕ, ಫ್ಲೆಕ್ಸ್, ಬ್ಯಾನರ್, ಕಟೌಟ್, ಬಂಟಿಂಗ್ಸ್ ಅಳವಡಿಕೆ ವಿರುದ್ಧ ಕಟ್ಟುನಿಟ್ಟಿನ ಕ್ರಮ ಅಗತ್ಯವಿದ್ದು, ಸಾಕಷ್ಟು ಬೀಗಿ ನಿಯಮಾವಳಿ ರೂಪಿಸುವುದು ನಗರದ ಸಹಜ ಸೌಂದರ್ಯ ಕಾಪಾಡುವ ದೃಷ್ಟಿಯಲ್ಲಿ ಅತ್ಯಗತ್ಯ ಎನ್ನುತ್ತದೆ ಪ್ರಜ್ಞಾವಂತ ವಲಯ.

ನಗರದ ವಿವಿಧ ಭಾಗಗಳಲ್ಲಿ ಹಲವು ವಿದ್ಯುತ್ ಕಂಬಗಳಲ್ಲಿ ವಾಣಿಜ್ಯ ಉದ್ದೇಶದ ಜಾಹೀರಾತು ಪೋಸ್ಟರ್, ಫಲಕಗಳು ರಾರಾಜಿಸುತ್ತಿವೆ. ಜ್ಯೋತಿಷ್ಯ, ಔಷಧಿ, ಉದ್ಯೋಗ, ಶಿಕ್ಷಣ ಸೇರಿದಂತೆ ವೊದಲಾದ ವಾಣಿಜ್ಯ ಉದ್ದೇಶಿತ ಜಾಹೀರಾತು ಫಲಕಗಳು ಕಂಡು ಬರುತ್ತಿವೆ. ಒಟ್ಟಾರೆ ಇವುಗಳಿಂದ ನಗರದ ಅಂದಕ್ಕೂ ಕುತ್ತು ಮತ್ತು ಎಚ್ಚರ ತಪ್ಪಿದರೆ ಪಾದಚಾರಿಗಳು ಹಾಗೂ ವಾಹನ ಸವಾರರಿಗೂ ದಾರಿ ಕಾಣಿಸದೇ ಅನಾಹುತಕ್ಕೂ ಆಸ್ಪದ ನೀಡುವಂತಹ ಸನ್ನಿವೇಶವೂ ಇದೆ ಎನ್ನುವುದು ಸುಳ್ಳಲ್ಲ.


ನಗರದ ವಿವಿಧೆಡೆ ಶ್ರದ್ಧಾಂಜಲಿ ವೇದಿಕೆಗಳಾಗುತ್ತಿವೆ ಸರ್ಕಲ್‌ಗಳು

ಮೈಸೂರು,ಜ.10(ಪಿಎಂ)– ನಗರದ ಸರ್ಕಲ್, ರಸ್ತೆ ಮತ್ತು ಇಕ್ಕೆಲಗಳು ಶ್ರದ್ಧಾಂಜಲಿ ವೇದಿಕೆಗಳಾಗುತ್ತಿವೆ! ಹೌದು, ನಗರದ ವಿವಿಧ ಭಾಗಗಳಲ್ಲಿ ಕಣ್ಣಾಡಿಸಿದರೆ ಹೀಗನ್ನಿಸುತ್ತದೆ. ಏಕೆಂದರೆ ಇಲ್ಲೆಲ್ಲಾ ನಿಧನ ಹೊಂದಿದವರ ಸ್ಮರಿಸುವ ಭಾವಚಿತ್ರ, ಫಲಕ, ಪೋಸ್ಟರ್‌ಗಳು ತೂಗಾಡುತ್ತಿವೆ.

ಅವುಗಳನ್ನು ಅಳವಡಿಸಿ ಎಷ್ಟೋ ದಿನಗಳಾದರೂ ತೆರವು ಮಾಡದ ಹಿನ್ನೆಲೆಯಲ್ಲಿ ಗಾಳಿಗೆ ತೂಗುತ್ತಿವೆ. ಯಾವುದೇ ಸಾವು ಅವರ ಕುಟುಂಬಸ್ಥರ, ಬಂಧು–ಬಾಂಧವರಲ್ಲಿ ಅಪಾರ ನೋವು ತರಲಿದೆ. ಈ ವಿಷಯದಲ್ಲಿ ಎಲ್ಲರ ಸಾಂತ್ವನವೂ ಇದೆ. ಆದರೆ ಈ ಸಂಬಂಧಿತ ಫ್ಲೆಕ್ಸ್‌ಗಳನ್ನು ಎಲ್ಲೆಂದರಲ್ಲಿ ಹಾಕುವುದು ಸರಿಯೇ? ಎಂದು ಕೆಲವರು ಪ್ರಶ್ನಿಸಿದ್ದಾರೆ.

ಹಾಗಾಗಿ ಅಗಲಿದವರ ಸ್ಮರಣೆ ತಪ್ಪಲ್ಲ. ಆದರೆ ಕಂಡ ಕಂಡಲ್ಲಿ ಪೋಸ್ಟರ್ ಹಾಕಿ ಮರೆತರೆ ಅಗಲಿದವರಿಗೆ ಅದು ಗೌರವವೂ ಅಲ್ಲ ಎಂಬುದನ್ನು ಸಂಬಂಧಿಸಿದವರು ಮರೆಯಬಾರದು ಎನ್ನುತ್ತಾರೆ ಪ್ರಜ್ಞಾವಂತ ನಾಗರಿಕರು. ಹಾಗಾಗಿ ಹೀಗೆ ಹಾಕುವವರು ಇದರಿಂದ ಆಗುವ ಸಮಸ್ಯೆಗಳನ್ನು ಅರಿಯಬೇಕು. ಪಾಲಿಕೆಯೂ ಇದರತ್ತ ಗಮನಹರಿಸಿ ಸೂಕ್ತ ಕ್ರಮ ವಹಿಸಬೇಕೆಂಬುದು ಅವರ ಆಗ್ರಹವಾಗಿದೆ.

ಮೂರು ಪ್ರಕರಣಗಳಲ್ಲಿ ಆಂಧ್ರದ ಮಾಜಿ ಸಿಎಂ ಚಂದ್ರಬಾಬು ನಾಯ್ಡುಗೆ ಜಾಮೀನು ಮಂಜೂರು



ಅಮರಾವತಿ: ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ, ತೆಲುಗು ದೇಶಂ ಪಕ್ಷದ (ಟಿಡಿಪಿ) ಮುಖ್ಯಸ್ಥ ಎನ್.ಚಂದ್ರಬಾಬು ನಾಯ್ಡು ಅವರಿಗೆ 3 ಪ್ರಕರಣಗಳಲ್ಲಿ ಆಂಧ್ರಪ್ರದೇಶ ಹೈಕೋರ್ಟ್ ಜಾಮೀನು ಮಂಜೂರು ಮಾಡಿದೆ.

ಒಳವರ್ತುಲ ರಸ್ತೆ, ಮದ್ಯ ಮತ್ತು ಮರಳು ನೀತಿ ಪ್ರಕರಣಗಳಲ್ಲಿ ನಾಯ್ಡು ಹೆಸರು ಕೇಳಿಬಂದಿದೆ. ಪ್ರಕರಣ ಸಂಬಂಧ ವಿಚಾರಣೆ ನಡೆಸಿದ ಹೈಕೋರ್ಟ್, ತನಿಖೆಗೆ ಸಹಕರಿಸುವಂತೆ ಸೂಚನೆ ನೀಡಿದೆ.

ಸಾರ್ವಜನಿಕ ಸಭೆಗಳು ಮತ್ತು ಮಾಧ್ಯಮಗಳಲ್ಲಿ ಪ್ರಕರಣಗಳಿಗೆ ಸಂಬಂಧಿಸಿದ ವಿಷಯಗಳನ್ನು ಪ್ರಸ್ತಾಪಿಸದಂತೆ ಹೈಕೋರ್ಟ್ ತಾಕೀತು ಮಾಡಿದೆ. ಕೌಶಲ ಅಭಿವೃದ್ಧಿ ನಿಗಮದ ಹಗರಣದಲ್ಲಿ ಚಂದ್ರಬಾಬು ನಾಯ್ಡು ಅವರು ಜಾಮೀನು ಪಡೆದು ಇತ್ತೀಚೆಗೆ ಜೈಲಿನಿಂದ ಬಿಡುಗಡೆಯಾಗಿದ್ದರು.

ನಾಯ್ಡು ಅವರನ್ನು ಸೆ.9ರಂದು ಬಂಧಿಸಲಾಗಿತ್ತು. ಅವರನ್ನು ಅ.31ರಂದು ಮಧ್ಯಂತರ ವೈದ್ಯಕೀಯ ಜಾಮೀನಿನ ಅಡಿಯಲ್ಲಿ ಬಿಡುಗಡೆ ಮಾಡಲಾಗಿದ್ದು, ಆ ಜಾಮೀನನ್ನು ನಂತರ ನಿಯಮಿತ ಜಾಮೀನಾಗಿ ಪರಿವರ್ತಿಸಲಾಗಿತ್ತು.

ಯೋಗೇಂದ್ರಗೆ 2 ಚಿನ್ನದ ಪದಕ

ಮೈಸೂರು,ಜ.10(ಆರ್‌ಕೆ)–ಹೊಸಕೋಟೆಯ ಬಿ.ಚೆನ್ನೇಗೌಡ ಕ್ರೀಡಾಂಗಣದಲ್ಲಿ ಜನವರಿ 6 ಮತ್ತು 7ರಂದು ನಡೆದ ಕರ್ನಾಟಕ ರಾಜ್ಯ ಮಾಸ್ಟರ್ಸ್ ಅಥ್ಲೆಟಿಕ್ ಚಾಂಪಿಯನ್‌ಶಿಪ್‌ನಲ್ಲಿ ಮೈಸೂರಿನ ಖ್ಯಾತ ಅಥ್ಲೆಟ್ ಮಾದಪ್ಪ ಯೋಗೇಂದ್ರ 2 ಚಿನ್ನದ ಪದಕ ಗಳಿಸಿದ್ದಾರೆ. 5000 ಮೀಟರ್ ಮತ್ತು 10,000 ಓಟದಲ್ಲಿ ಪಾಲ್ಗೊಂಡ ಮೈಸೂರು ಅಥ್ಲೆಟಿಕ್ಸ್ ಕ್ಲಬ್ ಕಾರ್ಯದರ್ಶಿಯೂ ಆದ ಯೋಗೇಂದ್ರ ವಿಜೇತರಾಗಿದ್ದು, 2 ಚಿನ್ನದ ಪದಕಗಳನ್ನು ಪಡೆದುಕೊಂಡರು. ಫೆಬ್ರವರಿ ಮಾಹೆಯಲ್ಲಿ ಪುಣೆಯಲ್ಲಿ ನಡೆಯಲಿರುವ ನ್ಯಾಷನಲ್ ಮಾಸ್ಟರ್ಸ್ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲೂ ಪಾಲ್ಗೊಳ್ಳಲು ಕರ್ನಾಟಕದಿಂದ ಯೋಗೇಂದ್ರ ಆಯ್ಕೆಯಾಗಿದ್ದಾರೆ.

ನಿಧನ

ಎಸ್.ಎ.ಸುಧೀರ್‌ಕುಮಾರ್



ಮೈಸೂರು, ಜ.10–ರಾಮಕೃಷ್ಣನಗರದ ನಿವಾಸಿ, ಪಿಡಬ್ಲ್ಯೂಡಿ ನಿವೃತ್ತ ಕಾರ್ಯ ನಿರ್ವಾಹಕ ಅಭಿಯಂತರರಾದ ಎಸ್.ಎ.ಸುಧೀರ್ ಕುಮಾರ್(72) ಬುಧವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಮಕ್ಕಳು, ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಗುರುವಾರ ಬೆಳಗ್ಗೆ 10:30ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ವಿದ್ಯುತ್ ಚಿತಾಗಾರದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಂತಾರಾಷ್ಟ್ರೀಯ ಪಂಜಕುಸ್ತಿ ಸಾಧಕರಿಗೆ 'ಕ್ರೀಡಾ ರತ್ನ' ಪ್ರಶಸ್ತಿ



ಮೈಸೂರು,ಜ.10(ಎಂಕೆ)–ನಗರದ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾಮಂಟಪದಲ್ಲಿ ಸುವರ್ಣ ಬೆಳಕು ಫೌಂಡೇಷನ್ ವತಿಯಿಂದ ಅಂತರರಾಷ್ಟ್ರೀಯ ಪಂಜಕುಸ್ತಿ ಸಾಧಕರಿಗೆ 'ಕ್ರೀಡಾ ರತ್ನ' ಪ್ರಶಸ್ತಿ ನೀಡಿ ಬುಧವಾರ ಗೌರವಿಸಲಾಯಿತು.

ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿದ ಸಂಸ್ಕೃತ ವಿದ್ವಾಂಸರಾದ ಡಾ.ಕೆ.ಲೀಲಾವತಿ, ಪಂಜಕುಸ್ತಿ ಸಾಧಕರಾದ ಎಂ.ರಾಜು, ಮಹದೇವ್, ಧನುಷ್, ಅನಾಬಸಿಲಿಕಾ ಹಾಗೂ ಹಂಸ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಬಳಿಕ ಫೌಂಡೇಷನ್‌ನ ನೂತನ ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಿದರಲ್ಲದೆ, ಕ್ರೀಡಾಪಟುಗಳು ಮನಸ್ಸಿನ ಸಮತೋಲನ ಕಾಪಾಡಿಕೊಳ್ಳಬೇಕೆಂದು ಸಲಹೆ ನೀಡಿದರು.

ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ ಮಾತನಾಡಿ, ಕ್ರೀಡೆಯಿಂದ ನಮ್ಮ ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯ ವೃದ್ಧಿಸುತ್ತದೆ. ಯುವ ಸಮುದಾಯ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಮತ್ತೆ ಮತ್ತೆ ಪ್ರಯತ್ನಿಸಿದರಷ್ಟೇ ಯಶಸ್ವಿಯಾಗಲು ಸಾಧ್ಯ. ಸೋಲು–ಗೆಲುವನ್ನು ಸಮಾನವಾಗಿ ಸ್ವೀಕರಿಸಬೇಕು ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ನಮ್ಮಲ್ಲಿ ಕ್ರೀಡೆಗೆ ಸರಿಯಾದ ಉತ್ತೇಜನ ದೊರಕುತ್ತಿಲ್ಲ. ಕಲಾವಿದರು, ಕ್ರೀಡಾಪಟುಗಳಿಗೆ ಸೂಕ್ತ ಸಂಭಾವನೆ ಹಾಗೂ ಪ್ರೋತ್ಸಾಹ ದೊರಕಬೇಕು ಎಂದು ಒತ್ತಾಯಿಸಿದರು. ಸುವರ್ಣ ಬೆಳಕು ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ಮಹೇಶ್, ಯೋಗ ಶಿಕ್ಷಕ ಅನಂತ್, ಮುಖಂಡರಾದ ಕೆ.ಟಿ.ಬಲರಾಮೇಗೌಡ, ಶ್ರೀಧರ್ ದೀಕ್ಷಿತ್, ಅಶ್ವಥ್ ಉಪಸ್ಥಿತರಿದ್ದರು.

ಶೀಘ್ರವೇ ಮೈಸೂರು–ಹೆಚ್.ಡಿ.ಕೋಟೆ ರಾಜ್ಯ ಹೆದ್ದಾರಿ ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಣೆ



ಮೈಸೂರು,ಜ.10(ಎಸ್‌ಪಿಎನ್)–ಹೆಚ್.ಡಿ.ಕೋಟೆ ರಾಜ್ಯ ಹೆದ್ದಾರಿಯನ್ನು ಅತೀ ಶೀಘ್ರದಲ್ಲೇ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಘೋಷಿಸಿ, ನಾಲ್ಕು ಪಥದ ರಸ್ತೆ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ಸಂಸದ ಪ್ರತಾಪ ಸಿಂಹ ತಿಳಿಸಿದರು.

ಮೈಸೂರು ತಾಲೂಕಿನ ದಾರಿಪುರ ಮತ್ತು ಯಡಹಳ್ಳಿ ಗ್ರಾಮದಲ್ಲಿ ಶ್ರೀರಾಮ ಮಂದಿರದ ಪವಿತ್ರ ಮಂತ್ರಾಕ್ಷತೆಯ ಹಂಚಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಂಡ ವೇಳೆ ದಾರಿಪುರ ಮತ್ತು ಯಡಹಳ್ಳಿ ಗ್ರಾಮಸ್ಥರ ಮನವಿಗೆ ಸಂಸದರು ಪ್ರತಿಕ್ರಿಯಿಸಿದ್ದಾರೆ. ಮೈಸೂರು–ಹೆಚ್.ಡಿ.ಕೋಟೆ ರಾಜ್ಯ ಹೆದ್ದಾರಿ ಅಭಿವೃದ್ಧಿ ಸಂಬಂಧ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಪತ್ರ ವ್ಯವಹಾರ ನಡೆಸಿದ್ದು, ಅತೀ ಶೀಘ್ರದಲ್ಲೇ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ರಸ್ತೆ ಸಂಖ್ಯೆ ಅಧಿಕೃತಗೊಂಡ ತಕ್ಷಣ 4 ಪಥದ ರಸ್ತೆ ಕಾಮಗಾರಿಗೆ ಚಾಲನೆ ನೀಡಲಾಗುವುದು. ಅಲ್ಲದೆ, ಮೈಸೂರಿಂದ ಜಯಪುರದವರೆಗೆ ಸರ್ವಿಸ್ ರಸ್ತೆಗೂ ಚಾಲನೆ ನೀಡಲಾಗುವುದು ಎಂದರು.

ಲಕ್ಷಾಂತರ ಕರಸೇವಕರ ಹೋರಾಟದ ಫಲವಾಗಿ ಅಯೋಧ್ಯೆಯಲ್ಲಿ ಭವ್ಯ ಶ್ರೀರಾಮ ಮಂದಿರ ನಿರ್ಮಾಣಗೊಂಡು, ಜ.22ರಂದು ಉದ್ಘಾಟನೆಗೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯ ಪ್ರತಿಯೊಂದು ಹಳ್ಳಿಗೂ ಶ್ರೀರಾಮಭಕ್ತರು ಭೇಟಿ ನೀಡಿ, ಪವಿತ್ರ ಮಂತ್ರಾಕ್ಷತೆ ವಿತರಿಸುತ್ತಿದ್ದು, ಅದರಂತೆ ಯಡಹಳ್ಳಿ ಮತ್ತು ದಾರಿಪುರ ಗ್ರಾಮಸ್ಥರಿಗೆ ವಿತರಿಸಲಾಗುತ್ತಿದೆ ಎಂದರು. ಈ ವೇಳೆ ಬಿಜೆಪಿ ಚಾಮುಂಡೇಶ್ವರಿ ಮಂಡಲ ಅಧ್ಯಕ್ಷ ಜಿ.ಎಂ.ಮಹೇಶ್, ತಾಲೂಕು ಕಾರ್ಯದರ್ಶಿ ದಾರಿಪುರ ಸುನಿಲ್ ಕುಮಾರ್, ಯಡಹಳ್ಳಿ ಮುಖಂಡರಾದ ಷಣ್ಮುಖ ಸೇರಿದಂತೆ ಇತರೆ ಮುಖಂಡರು ಇದ್ದರು.



ಮೈಸೂರಿನ ಅಗ್ರಹಾರದ ಶಂಕರಮಠ ಸುತ್ತಮುತ್ತಲ ಮನೆಗಳಿಗೆ ತೆರಳಿ ಮಂತ್ರಾಕ್ಷತೆ, ಶ್ರೀರಾಮಮಂದಿರ ಫೋಟೋ ಹಾಗೂ ಕರಪತ್ರ ವಿತರಿಸಲಾಯಿತು. ಈ ವೇಳೆ ನಗರಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್, ನೈರುತ್ಯ ರೈಲ್ವೆ ಸದಸ್ಯ ಶಿವರಾಜ್, ವಾರ್ಡ್ ಅಧ್ಯಕ್ಷ ಮಂಜುನಾಥ್, ವಾದಿರಾಜ, ಬಳ್ಳಾ ಶಿವ, ಪ್ರೇರಣ, ಚಂದ್ರಪ್ರಕಾಶ್, ವೆಂಕಟೇಶ್, ಮಮತಾ, ಚಂದ್ರು, ರವಿಕುಮಾರ್ ಇನ್ನಿತರರಿದ್ದರು.

ನಕಲಿ ಇನ್‌ವಾಯ್ಸ್ ಸೃಷ್ಟಿಸಿ 14 ಕೋಟಿ ತೆರಿಗೆ ವಂಚನೆ



ಇಮ್ರಾನ್ ಪಾಷನನ್ನು ಅಧಿಕಾರಿಗಳು ಬಂಧಿಸಿದ್ದಾರೆ.

ಮೈಸೂರು, ಜ.10(ಎಸ್‌ಪಿಎನ್)–ನಕಲಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಸಿ ಸರಕಾರಕ್ಕೆ 14 ಕೋಟಿ ರೂ. ತೆರಿಗೆ ವಂಚಿಸಿದ್ದ ಜಾಲವನ್ನು ಮೈಸೂರು ಸಿದ್ದಾರ್ಥ ನಗರದಲ್ಲಿರುವ ಕೇಂದ್ರೀಯ ತೆರಿಗೆ ಜಿಎಸ್‌ಟಿ ಪ್ರಧಾನ ಕಚೇರಿಯ ಜಾಗೃತ ದಳದ ಅಧಿಕಾರಿಗಳು ಭೇದಿಸಿ, ಓರ್ವನನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಮೈಸೂರಿನ ರಬ್ ಟ್ರೇಡರ್ಸ್ ಮಾಲೀಕ ಇಮ್ರಾನ್ ಪಾಷಾ ಬಂಧಿತ ವ್ಯಕ್ತಿ. ಹೊರ ರಾಜ್ಯಗಳಿಂದ ಮೈಸೂರಿಗೆ ತರಿಸುವ ಸರಕು ಹಾಗೂ ಮೈಸೂರಿನಿಂದ ಹೊರ ರಾಜ್ಯಗಳಿಗೆ ಕಳುಹಿಸುವ ಸರಕುಗಳನ್ನು ಹೊರ ರಾಜ್ಯಗಳಲ್ಲಿ ನಕಲಿ ಘಟಕಗಳನ್ನು ಸ್ಥಾಪಿಸಿದಂತೆ ತೋರಿಸಿ, 60 ಕೋಟಿ ರೂ. ಮೌಲ್ಯದ ನಕಲಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಸಿ, ವಹಿವಾಟು ನಡೆಸಿದಂತೆ ತೋರಿಸಿದ್ದರು. ಇದರಿಂದ ಸರಕಾರಕ್ಕೆ 14 ಕೋಟಿಗೂ ಹೆಚ್ಚು ತೆರಿಗೆ ವಂಚಿಸಿರುವುದು ಜ.8 ರಂದು ನಡೆದ ಕಾರ್ಯಾಚರಣೆಯಿಂದ ಬಯಲಿಗೆ ಬಂದಿದೆ. ಯಾವುದೇ ಅಧಿಕೃತ ರಶೀದಿ ಇಲ್ಲದೇ, ಮಂಗಳೂರು ಮತ್ತು ಕೇರಳದಲ್ಲಿ ನಕಲಿ ಘಟಕಗಳಿಗೆ ಸರಕು ಸಾಗಣೆ ಮಾಡಿರುವಂತೆ ತೋರಿಸಿರುವ ಇಮ್ರಾನ್ ಪಾಷ, 60 ಕೋಟಿಗೂ ಅಧಿಕ ವಹಿವಾಟು ನಡೆದಿರುವುದನ್ನು ದಾಖಲೆಗಳಲ್ಲಿ ತೋರಿಸಿದ್ದರು. ಇದರಿಂದ ಸರಕಾರದ ಬೊಕ್ಕಸಕ್ಕೆ ಭಾರೀ ನಷ್ಟ ಉಂಟಾಗಿದೆ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಮೈಸೂರಿನ ಕೇಂದ್ರೀಯ ಜಿಎಸ್‌ಟಿ ಆಯುಕ್ತಾಲಯದ ಜಾಗೃತ ದಳದ ಅಧಿಕಾರಿಗಳು ವಂಚನೆ ಜಾಲವನ್ನು ಭೇದಿಸಿದ್ದಾರೆ ಎಂದು ಕೇಂದ್ರಿಯ ತೆರಿಗೆ ಜಿಎಸ್‌ಟಿ ಕಚೇರಿಯ ಅಧೀಕ್ಷಕ ಜಿ.ಎನ್.ಶಶಿಧರ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು. ಈ ಕಾರ್ಯಾಚರಣೆಯು ಜಿಎಸ್‌ಟಿ ಆಯುಕ್ತಾಲಯದ ಪ್ರಧಾನ ಆಯುಕ್ತ ಪಿ.ವಿ.ಎನ್. ಸುರೇಶ್ ಬಾಬು, ಹೆಚ್ಚುವರಿ ಆಯುಕ್ತ ಎಸ್.ಪಿ.ಪಾಂಡು ಹಾಗೂ ಸಹಾಯಕ ಆಯುಕ್ತ ಕೆ.ಬಿ. ನಾಣಯ್ಯ ಮಾರ್ಗದರ್ಶನದಲ್ಲಿ ನಡೆದಿದೆ.

ಚಿರತೆ, ಆನೆ ಕಾರ್ಯಪಡೆ ಕಾರ್ಯಾಗಾರ



ಮೈಸೂರು, ಜ.10 (ಎಂಕೆ)–ಮೈಸೂರಿನ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ ಆವರಣದಲ್ಲಿ ವನ್ಯಪ್ರಾಣಿಗಳ ಹಾವಳಿ ನಿಯಂತ್ರಣಕ್ಕಾಗಿ ರಚಿಸಲಾಗಿರುವ ಚಿರತೆ ಹಾಗೂ ಆನೆ ಕಾರ್ಯಪಡೆಯ ಕಾರ್ಯಾಗಾರವನ್ನು ಬುಧವಾರ ನಡೆಸಲಾಯಿತು.

ಕಾರ್ಯಾಗಾರದಲ್ಲಿ ಚಿರತೆ ಕಾರ್ಯ ಪಡೆಯ 45 ಮಂದಿ ಹಾಗೂ ಆನೆ ಕಾರ್ಯಪಡೆಯ 32 ಮಂದಿ ಹೊರಗುತ್ತಿಗೆ ನೌಕರರು ಸೇರಿದಂತೆ 20 ಮಂದಿ ಮಂಚೂಣಿ ಸಿಬ್ಬಂದಿ ಹಾಗೂ ಬೀದರ್ ವಿಭಾಗದಿಂದ ಇಬ್ಬರು ಉಪ ವಲಯ ಅರಣ್ಯಾಧಿಕಾರಿಗಳು ಭಾಗವಹಿಸಿದ್ದರು.

ಕಾರ್ಯಾಗಾರವನ್ನು ಮೈಸೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ಡಾ.ಎಂ.ಮಾಲತಿ ಪ್ರಿಯಾ ಉದ್ಘಾಟಿಸಿದರು. ಅಧ್ಯಕ್ಷತೆ ವಹಿಸಿದ್ದ ಉಪ ಸಂರಕ್ಷಣಾಧಿಕಾರಿ ಡಾ.ಕೆ.ಎನ್.ಬಸವರಾಜ್, ಚಿರತೆ ಹಾವಳಿ ನಿಯಂತ್ರಿಸುವ ಕುರಿತು ತಿಳಿಸಿಕೊಟ್ಟರು. ಹುಣಸೂರು ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಪಿ.ಎ.ಸೀಮಾ, ವನ್ಯಜೀವಿ ರಕ್ಷಣಾ ಕಾರ್ಯದ ಕುರಿತು ಮಾಹಿತಿ ನೀಡಿದರು. ಪಶುವೈದ್ಯಾಧಿಕಾರಿ ಡಾ.ಮದನ್ ಕೊಂಪಾಲ್, ಡಾ.ಎಸ್.ನಿಶಾಂತ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾದ ಎನ್.ಲಕ್ಷ್ಮಿಕಾಂತ್, ಮಹಾದೇವಯ್ಯ ಮತ್ತಿತರರು ಉಪಸ್ಥಿತರಿದ್ದರು.

7 ತಿಂಗಳ ಆಡಳಿತ ವೈಫಲ್ಯ ಮುಚ್ಚಿಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಕೇಂದ್ರದ ವಿರುದ್ಧ ಇಲ್ಲಸಲ್ಲದ ಆರೋಪ

ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಎದಿರೇಟು



ಮೈಸೂರು,ಜ.10(ಪಿಎಂ)– ಜನವರಿ 26ರಂದು ಹೊಸದಿಲ್ಲಿಯಲ್ಲಿ ನಡೆಯಲಿರುವ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ರಾಜ್ಯದ ಸ್ತಬ್ಧಚಿತ್ರ ಪ್ರದರ್ಶನಕ್ಕೆ ಕೇಂದ್ರ ಸರ್ಕಾರ ಅವಕಾಶ ನೀಡದೇ ತಾರತಮ್ಯ ನೀತಿ ಅನುಸರಿಸಿದೆ ಎಂಬ ಸಿದ್ದರಾಮಯ್ಯರ ಹೇಳಿಕೆ ದುರುದ್ದೇಶಪೂರಕ. ತಮ್ಮ 7 ತಿಂಗಳ ಆಡಳಿತದ ವೈಫಲ್ಯ ಮುಚ್ಚಿಕೊಳ್ಳಲು ಹಾಗೂ ಜನರ ಗಮನ ಬೇರೆಡೆ ಸೆಳೆಯಲು ಈ ರೀತಿ ಹೇಳಿಕೆ ಕೊಟ್ಟಿದ್ದಾರೆ ಎಂದು ಸಂಸದ ಪ್ರತಾಪ್ ಸಿಂಹ ದೂರಿದರು.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ರಾಜ್ಯದ ಮುಖ್ಯಮಂತ್ರಿಯಾಗಿ ಈ ಆಯ್ಕೆ ಪ್ರಕ್ರಿಯೆ ಯಾವ ರೀತಿ ನಡೆಯುತ್ತದೆ ಎಂಬ ಅರಿವು ಇಲ್ಲವೆ. ಈ ಹಿಂದೆ ಐದು ವರ್ಷಗಳು ಮುಖ್ಯಮಂತ್ರಿ ಆಗಿದ್ದ ಅನುಭವ ಇಟ್ಟುಕೊಂಡು ಈ ರೀತಿ ದಾರಿತಪ್ಪಿಸುವ ಹೇಳಿಕೆ ಕೊಟ್ಟಿದ್ದಾರೆ. ಅಂದರೆ ಸಿದ್ದರಾಮಯ್ಯನವರು ದುರುದ್ದೇಶ ಪೂರಿತ ಹೇಳಿಕೆ ಕೊಟ್ಟಿದ್ದಾರೆ ಹೊರತು ಅದರ ಹಿಂದೆ ಯಾವ ಸತ್ಯವೂ ಅಡಗಿಲ್ಲ ಎಂದು ಹೇಳಿದರು.

ಸ್ವಾಮಿ ಸಿದ್ದರಾಮಯ್ಯನವರೇ, ಪ್ರತಿ ವರ್ಷ ಕೇಂದ್ರ ಸರ್ಕಾರ, ಅದರಲ್ಲೂ ರಕ್ಷಣಾ ಸಚಿವಾಲಯವು ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಸ್ತಬ್ಧಚಿತ್ರಗಳ ಆಯ್ಕೆಗಾಗಿ ತಜ್ಞರ ಸಮಿತಿ ರಚನೆ ಮಾಡುತ್ತದೆ. ಸಮಿತಿಯೊಳಗೆ ಕಲೆ, ಸಾಂಸ್ಕೃತಿಕ, ಸಂಗೀತ, ತತ್ವಶಾಸ್ತ್ರ, ಚಿತ್ರಕಲೆ ಮೊದಲಾದ ಎಲ್ಲಾ ಕ್ಷೇತ್ರಗಳ ತಜ್ಞರು ಇರುತ್ತಾರೆ. ಈ ಸಮಿತಿಗೆ ಆಯಾಯ ವರ್ಷಕ್ಕೆ ಒಂದು ಥೀಮ್ ಸಹ ನೀಡಲಾಗುತ್ತದೆ. 2022ರಲ್ಲಿ 'ಇಂಡಿಯಾ@75', 2023 ರಲ್ಲಿ 'ಪ್ರವಾಸೋದ್ಯಮ' ಎಂದಿತ್ತು. ಈ ವರ್ಷ 'ಇಂಡಿಯಾ ಮದರ್ ಆಫ್ ಡೆಮಾಕ್ರಸಿ' ಥೀಮ್ ಕೊಟ್ಟಿದ್ದಾರೆ. ಇದಕ್ಕೆ ಅನುಗುಣವಾಗಿ ದೇಶದಲ್ಲಿರುವ 29 ರಾಜ್ಯಗಳು, 7 ಕೇಂದ್ರಾಡಳಿತ ಪ್ರದೇಶಗಳು ಹಾಗೂ ಕೇಂದ್ರ ಸರ್ಕಾರ ವಿವಿಧ ಇಲಾಖೆಗಳಿಗೆ ಪ್ರಸ್ತಾವನೆ ಸಲ್ಲಿಸುವಂತಹ ಅವಕಾಶ ನೀಡಲಾಗುತ್ತದೆ ಎಂದರು.

ಥೀಮ್‌ಗೆ ಅನುಗುಣವಾಗಿ ಪ್ರಸ್ತಾವನೆ ಸಲ್ಲಿಸಿರುವ ಸಂಬಂಧ ತಜ್ಞರ ಸಮಿತಿ ಪರಾಮರ್ಶಿಸಿ ತೀರ್ಮಾನ ತೆಗೆದುಕೊಳ್ಳಲಿದೆ. ಇಲ್ಲಿ ಯಾವುದೇ ರಾಜಕಾರಣ ಇರುವುದಿಲ್ಲ. 2022ರಲ್ಲಿ 21 ಸ್ತಬ್ಧಚಿತ್ರಗಳಿಗೆ ಅವಕಾಶ ನೀಡಲಾಗಿತ್ತು. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಒಟ್ಟು 36 ಸ್ತಬ್ಧಚಿತ್ರಗಳಲ್ಲಿ ಅವಕಾಶ ಸಿಕ್ಕಿದ್ದು 21 ಸ್ತಬ್ಧಚಿತ್ರಗಳಿಗೆ ಮಾತ್ರ. ಅಂತೆಯೇ 2023ರಲ್ಲಿ 23 ಸ್ತಬ್ಧಚಿತ್ರಗಳಿಗೆ ಅವಕಾಶ ದೊರೆತ್ತಿತ್ತು. ಈ ಬಾರಿ 25ಕ್ಕಿಂತ ಹೆಚ್ಚು ಸ್ತಬ್ಧಚಿತ್ರಗಳಿಗೆ ಅವಕಾಶ ನೀಡಿಲ್ಲ ಎಂದು ತಿಳಿಸಿದರು.

ಹಾಗಾಗಿ ಒಂದಷ್ಟು ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಬಿಟ್ಟು ಹೋಗುವುದು ಸಹಜ. ಅಷ್ಟೇ ಅಲ್ಲ, ಕೇಂದ್ರ ಸರ್ಕಾರದ ಕೆಲ ಇಲಾಖೆಗಳ ಸ್ತಬ್ಧಚಿತ್ರಗಳು ಆಯ್ಕೆಯಾಗುವುದಿಲ್ಲ. ಈ ಪ್ರಕ್ರಿಯೆಯಲ್ಲಿ ಥೀಮ್‌ಗೆ ಅನುಗುಣವಾಗಿ ಸ್ತಬ್ಧಚಿತ್ರ ಇರುವ ಮಾನದಂಡದಡಿ ತಜ್ಞರ ಸಮಿತಿ ತೀರ್ಮಾನಿಸಿ, ಆಯ್ಕೆ ಮಾಡಲಿದೆಯೇ ಹೊರತು ಇಲ್ಲಿ ಯಾವುದೇ ರಾಜಕಾರಣ ಇರುವುದಿಲ್ಲ. ಇದರ ಬಗ್ಗೆ ಜ್ಞಾನ ಇದ್ದೂ ಈ ರೀತಿ ಹೇಳಿಕೆ ಕೊಟ್ಟಿದ್ದೀರಿ. ತಮ್ಮ 7 ತಿಂಗಳ ಆಡಳಿತದ ವೈಫಲ್ಯ ಮುಚ್ಚಿಕೊಳ್ಳಲು ಹಾಗೂ ಜನರ ಗಮನ ಬೇರೆಡೆ ಸೆಳೆಯಲು ಈ ರೀತಿ ಹೇಳಿಕೆ ಕೊಟ್ಟಿದ್ದಾರೆ ಎಂದು ದೂರಿದರು.

ನಿಮ್ಮ 7 ತಿಂಗಳ ಆಡಳಿತದಲ್ಲಿ ಯಾವುದೇ ಸಾಧನೆಗಳು ಇಲ್ಲ. ಹಾಗಾಗಿ ಪ್ರತಿಯೊಂದು ವಿಚಾರಕ್ಕೂ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸುವುದನ್ನು ರೂಢಿ ಮಾಡಿಕೊಂಡಿದ್ದೀರಾ. 'ಅನಿಷ್ಟಕ್ಕೆಲ್ಲಾ ಶನೇಶ್ವರ ಕಾರಣ' ಎಂಬ ಮಾತಿದೆ. ಅದರಂತೆ ನಿಮ್ಮಲ್ಲಿರುವ ಅನಿಷ್ಟಗಳಿಗೆಲ್ಲಾ ಕೇಂದ್ರ ಸರ್ಕಾರ ಕಾರಣವೆಂದು ಹೇಳುವ ಪ್ರವೃತ್ತಿ ರೂಢಿಸಿಕೊಂಡಿದ್ದೀರಾ. ಇದನ್ನು ದಯವಿಟ್ಟು ಬಿಡಬೇಕು. ಇದು ಶೋಭೆ ತರುವುದಿಲ್ಲ. ಎಷ್ಟೊ ರಾಜ್ಯಗಳಿಗೆ ಅವಕಾಶ ಸಿಕ್ಕಿಲ್ಲ. ಅವರೆಲ್ಲಾ ನಿಮ್ಮ ರೀತಿ ಕೇಂದ್ರ ಸರ್ಕಾರವನ್ನು ದೂರುತ್ತಿಲ್ಲ. ಎರಡನೇ ಬಾರಿ ಮುಖ್ಯಮಂತ್ರಿ ಆಗಿರುವವರು, ಗುರುತರವಾದ ಜವಾಬ್ದಾರಿ ಸ್ಥಾನದಲ್ಲಿರುವವರು ಜವಾಬ್ದಾರಿಯಿಂದ ಮಾತನಾಡಿ ಎಂದು ಕುಟುಕಿದರು.

ನಕ್ಕರೆ ಅದೇ ಸ್ವರ್ಗ

ತರುಣಿ : (ಕಿಕ್ಕಿರಿದು ತುಂಬಿದ್ದ ಸಿಟಿ ಬಸ್‌ವೊಂದರಲ್ಲಿ ತನ್ನ ಕೊಡೆಯಿಂದ ಪಕ್ಕದಲ್ಲಿದ್ದವನನ್ನು ಮೃದುವಾಗಿ ತಿವಿದು) "ಏನ್ರಿ ದೊಡ್ಡ ಮಾರ್ಕೆಟ್ ಬಸ್ ಸ್ಟಾಪ್ ಇದೇನಾ?"

ಯುವಕ : "ಅಲ್ಲಾ ಇದು ನನ್ನ ಪಕ್ಕೆಲುಬು"

ಮೈಸೂರು ಮಿತ್ರ

ಗುರುವಾರ, 11 ಜನವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಒಳ್ಳೆಯ ಕೆಲಸವನ್ನು ಮಾಡುವವನು ಯಾವನೂ ದುರ್ಗತಿಯನ್ನು ಹೊಂದುವುದಿಲ್ಲ. –ಭಗವದ್ಗೀತೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆರು ಯತ್ನ ನನ್ನದು, ಏಳನೇದು ದೇವರಿಚ್ಛೆ

ನಿಮ್ಮ ಪತ್ರಗಳು

ಇಂತಹ ಬರ್ಬರ ಕೃತ್ಯಗಳಿಗೆ ಕೊನೆ ಮೊದಲಿಲ್ಲವೇ?

ಮಾನ್ಯರೆ,

ತನ್ನ ನಾಲ್ಕು ವರ್ಷದ ಮಗನನ್ನು ಕೊಲೆ ಮಾಡಿ ಮೃತದೇಹವನ್ನು ಬ್ಯಾಗಿನಲ್ಲಿಟ್ಟುಕೊಂಡು ಕಾರಿನಲ್ಲಿ ಸಾಗಣೆ ಮಾಡುತ್ತಿದ್ದ ಖಾಸಗಿ ಸ್ಟಾರ್ಟ್ ಅಪ್ ಕಂಪನಿಯ ಮಹಿಳಾ ಸಿಇಒ ಒಬ್ಬರನ್ನು ಐಮಂಗಲ ಠಾಣೆಯ ಪೊಲೀಸರು ಬಂಧಿಸಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಸಮಾಜದಲ್ಲಿ ಇಂತಹ ಪಾಶವಿ ಕೃತ್ಯಗಳು ಹೆಚ್ಚುತ್ತಿರುವುದು ತೀವ್ರ ಆತಂಕಕಾರಿಯಾಗಿದೆ. ಖಾಸಗಿ ಕಂಪನಿಯಲ್ಲಿ ಉನ್ನತ ಹುದ್ದೆಯಲ್ಲಿದ್ದ ಈ ಮಹಿಳೆ, ಇಂತಹ ಹೀನ ಕೃತ್ಯ ಎಸಗಲು ಏನೇ ವೈಯಕ್ತಿಕ ಕಾರಣಗಳಿದ್ದರೂ ಸಹ ಇಂತಹ ಅಮಾನವೀಯ ಕೃತ್ಯ ಎಸಗುವ ಮೂಲಕ ತನ್ನ ಕ್ರೂರತೆಯನ್ನು ಮೆರೆದಿದ್ದಾಳೆ. ಇಂತಹ ಪಾತಕಿಗಳನ್ನು ಆ ದೇವರು ಕೂಡ ಕ್ಷಮಿಸಲಾರ.

ತಾಯಿ ಎಂಬ ಪದಕ್ಕೆ ಅತ್ಯಂತ ಹೆಚ್ಚಿನ ಗೌರವ ಮತ್ತು ಪೂಜ್ಯ ಭಾವನೆಯಿದೆ. ತಾಯಿಯನ್ನು ಕಣ್ಣಿಗೆ ಕಾಣುವ ದೇವರು ಎಂದು ಭಾವಿಸಲಾಗಿದೆ. ಎಲ್ಲಾ ದೇವರು ಕೈಬಿಟ್ಟರೂ ಸಹ, ತಾಯಿ ದೇವರು ಮಕ್ಕಳನ್ನು ರಕ್ಷಿಸಿ ಕಾಪಾಡುವ ಕಾಮಧೇನುವಾಗಿದ್ದಾಳೆ. ಆದರೆ, ಇಂತಹ ತಾಯಿಯೇ, ತಾನೇ ಜನ್ಮ ಕೊಟ್ಟ ಮಗುವನ್ನು ಎಳ್ಳಷ್ಟು ಕರುಣೆಯಿಲ್ಲದೇ ಕೊಲ್ಲುವುದು ಮಹಾಪಾಪವಾಗಿದೆ. ಪಾಪಕ್ಕಿಂತ ಹೆಚ್ಚಾಗಿ ಅನಾಗರಿಕ ಕೃತ್ಯವಾಗಿದೆ. ಐಷಾರಾಮಿ ಜೀವನ ಶೈಲಿಗೆ ಮಾರುಹೋಗಿ, ಕೆಲವು ಹೆಂಗಸರು ಮಾಡಬಾರದ ಕೆಲಸಗಳನ್ನೆಲ್ಲಾ ಮಾಡುತ್ತಿದ್ದಾರೆ. ತಮ್ಮ ತೀಟೆಗಳನ್ನು ತೀರಿಸಿಕೊಳ್ಳಲು ತಮ್ಮ ಸ್ವಂತ ಮಕ್ಕಳನ್ನೇ ರಕ್ಕಸಿಯರಂತೆ ಬಲಿ ಪಡೆಯುತ್ತಿದ್ದಾರೆ. ಇಂತಹವರಿಗೆ ಕಾನೂನು ಅತ್ಯಂತ ಗರಿಷ್ಟ ಶಿಕ್ಷೆಯಾದ ಮರಣ ದಂಡನೆಯನ್ನು ವಿಧಿಸುವುದು ಅಗತ್ಯವಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ರಸ್ತೆಯಲ್ಲಿನ ಧಾನ್ಯದ ಒಕ್ಕಣೆಗೆ ಕಡಿವಾಣ ಹಾಕಿ

ಮಾನ್ಯರೆ,

ಮಾಗಿಕಾಲದ ಚಳಿಗಾಲದಲ್ಲಿ ಕೆಲ ರೈತರು ದವಸ ಧಾನ್ಯಗಳನ್ನು ತಮ್ಮ ಜಮೀನಿನಲ್ಲಿ ಕಣ ಸಿದ್ಧಮಾಡಿ ಅಲ್ಲಿಗೆ ತಂದು ಸಂಗ್ರಹ ಮಾಡಿ ಶುದ್ಧ ದವಸ ಧಾನ್ಯಗಳನ್ನು ಮನೆಗೆ ತರುವುದು ಮಾಮೂಲಿ. ಇದರಿಂದ ಯಾವುದೇ ತರಹದ ಹಾನಿ ಉಂಟಾಗುವುದಿಲ್ಲ. ಆದರೆ ಕೆಲವರು ಮಾತ್ರ ನೀವೇನಾದರೂ ಹೇಳಿಕೊಳ್ಳಿ, ನಾವು ಮಾತ್ರ ಮಾಡೋದೇ ಮಾಡೋದು ಎಂದು ರಸ್ತೆಯಲ್ಲಿಯೇ ತಂದು ಒಕ್ಕಣೆ ಮಾಡುವರು. ಇದರಿಂದ ರಸ್ತೆಯಲ್ಲಿ ಓಡಾಡುವ ಜನರಿಗೆ, ವಾಹನಗಳಿಗೆ ತುಂಬಾ ತೊಂದರೆಯಾಗುತ್ತಿದೆ. ಹೀಗೆ ಒಕ್ಕಣೆ ಕೆಲಸ ಮಾಡುವುದರಿಂದ ಅವರಿಗೆ ಯಾವ ಸಂತೋಷ ನಾ ಕಾಣೆ. ಈಗಾಗಲೇ ಈ ಬಗ್ಗೆ ಹಲವಾರು ದುರ್ಘಟನೆಗಳು ಜರುಗಿರುವ ಉದಾಹರಣೆಗಳು ಇವೆ. ಇನ್ನು ಮುಂದಾದರು ರೈತಬಂಧುಗಳು ಎಚ್ಚೆತ್ತುಕೊಂಡು ಹೀಗಾಗದಂತೆ ತಡೆಯಬೇಕಾಗಿದೆ.

– ಎ.ಎಸ್.ಗೋವಿಂದೇಗೌಡ, ಕನ್ನಡ ಉಪನ್ಯಾಸಕರು, ಮೈಸೂರು.

ಕಾವೇರಿ ನದಿ ಜೋಡಣೆ ಚಕಾರ ಎತ್ತದ ಕರ್ನಾಟಕ

ಮಾನ್ಯರೆ,

ತಮಿಳುನಾಡಿನಲ್ಲಿ ಕಾವೇರಿ–ವೈಗೈ–ಗುಂಡಾರ್ ನದಿ ಜೋಡಣೆ ಯೋಜನೆಯನ್ನು ಕೈಗೆತ್ತಿಕೊಂಡು ತಮಿಳುನಾಡು ಸರ್ಕಾರ ಸರಾಗವಾಗಿ ಕೆಲಸ ಮಾಡುತ್ತಿರುವುದು ನಮ್ಮ ರಾಜ್ಯವನ್ನಾಳುವ ಸರ್ಕಾರಗಳ ಗಮನಕ್ಕೆ ಬಂದರೂ ಚಕಾರ ಎತ್ತದೆ ಸುಮ್ಮನಿರುವುದು ತುಂಬಾ ಬೇಸರದ ಸಂಗತಿ. ಈ ವಿಷಯವಾಗಿ ನೀರಾವರಿ ತಜ್ಞರಾದ ಅರ್ಜುನಹಳ್ಳಿ ಪ್ರಸನ್ನಕುಮಾರ್ ಅವರು 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ತಮ್ಮ ಮನದಾಳದ ಮಾತುಗಳನ್ನು ತುಂಬಾ ವಿವರವಾಗಿ ತಿಳಿಸಿದ್ದಾರೆ. ಇದನ್ನು ಓದಿದ ಪ್ರತಿಯೊಬ್ಬರಿಗೂ ನಮ್ಮ ಸರ್ಕಾರಗಳ ಬಗ್ಗೆ ಬೇಸರವಾಗದೆ ಇರುವುದಿಲ್ಲ. ಇನ್ನು ಮುಂದಾದರು ರಾಜ್ಯ ಸರ್ಕಾರ ಚಿಂತನೆ ಮಾಡಿ ಮೇಕೆದಾಟು ಯೋಜನೆಯನ್ನು ಆದಷ್ಟು ಬೇಗ ಅನುಷ್ಠಾನಗೊಳಿಸಲು ಕಾರ್ಯಪ್ರವೃತ್ತರಾಗುವುದು ಮತ್ತು ತಮಿಳುನಾಡಿನಲ್ಲಿ ನಡೆಯುತ್ತಿರುವ ಕಾವೇರಿ ನದಿ ಜೋಡಣೆ ಕೆಲಸವು, ಕಾವೇರಿ ನ್ಯಾಯಾಧೀಕರಣದ ಐತೀರ್ಪಿನ ಸ್ಪಷ್ಟ ಉಲ್ಲಂಘನೆಯಾಗಿರುವುದರಿಂದ ಇದರ ಬಗ್ಗೆ ನ್ಯಾಯಾಧೀಕರಣಕ್ಕೆ ಮಾಹಿತಿ ನೀಡುವ ಮೂಲಕ ಆಕ್ಷೇಪ ಎತ್ತುವುದು ಸೂಕ್ತ.

– ಬೆಸಗರಹಳ್ಳಿ ರವಿಪ್ರಸಾದ್, ಕೆ.ಸಿ.ನಗರ, ಮೈಸೂರು.

ಮೀಮಾಂಸೆ

ಮಾನ್ಯರೆ,

"ಕಾಲಾಯ ತಸ್ಮೈ ನಮಃ" ಎಂಬುದು ಪ್ರಸಿದ್ಧವಾದ ಮಾತು : ಮೂಲತಃ ಭರ್ತೃ ಹರಿಯದು. "ಸರ್ವಂ ಯಸ್ಯ ವಶಾದಗೌತ್ ಸ್ಮೃತಿಪಥಂ..." (ಯಾರಿಂದಾಗಿ ಎಲ್ಲವೂ ನೆನಪಿನ ಹಾದಿ ಹಿಡಿಯಿತೋ– ಆ ಕಾಲಕ್ಕೆ ನಮಸ್ಕಾರ) ಎನ್ನುತ್ತಾನೆ, ಕವಿ. 'ಕಾಲ' ಎಂದರೆ ಯಮ ಎಂದೂ ಅರ್ಥ.

"ಕಾಲೋ ಹ್ಯಯಂ ನಿರವಧಿಃ, ವಿಪುಲಾ ಚ ಪೃಥ್ವೀ" (ಕಾಲಕ್ಕೆ ಕೊನೆಯಿಲ್ಲ. ಜಗತ್ತು ವಿಶಾಲ) ಎಂಬುದು ಭವಭೂತಿಯ ಉಕ್ತಿ. ಅವನಿಗೆ ಸಮಕಾಲೀನರು ತಕ್ಕ ಮನ್ನಣೆ ಕೊಡಲಿಲ್ಲ ಎಂದು ತೋರುತ್ತದೆ. ಆದ್ದರಿಂದಲೇ "ಮುಂದೆ ನನ್ನ ಸಮಾನ ಧರ್ಮಿ ಯಾವನೋ ಹುಟ್ಟುತ್ತಾನೆ" ಎಂದು ಸಮಾಧಾನ ಮಾಡಿಕೊಳ್ಳುತ್ತಾನೆ. ಭವಿಷ್ಯವಾಣಿ ದಿಟವಾಯಿತು: ಇಂದು ಭವಭೂತಿಯೊಬ್ಬ ಶ್ರೇಷ್ಠ ಕವಿಯೆನಿಸಿದ್ದಾನೆ!

"ಕಾಲ ಪುರುಷಂಗೆ ಗುಣಮಣಮಿಲ್ಲಂ ಗಡ!" ಎಂಬುದು ಕನ್ನಡ ಕವಿ ಮುದ್ದಣನ ಉದ್ಗಾರ (ಅಣಂ=ಸ್ವಲ್ಪವೂ). ಇದು ಆಂಗ್ಲ ಕವಿ ಲಾಂಗ್‌ಫೆಲೋ ಹೇಳಿಕೆ : "ಕಲೆ ಶಾಶ್ವತ, ಕಾಲ ನಶ್ವರ!" ತಾತ್ಪರ್ಯವಿಷ್ಟು : ಕಲೆ, ಸಾಹಿತ್ಯ ಕಾಲ ದೇಶಾತೀತ!

"ಕಾಲ ಕಳೆಯಿತು, ಹೋಯಿತು" ಎನ್ನುತ್ತೇವಲ್ಲವೆ? ಆದರೆ "ಕಳೆದು ಹೋಗುವುದು ಕಾಲವಲ್ಲ; ನಾವೇ!" (ಕಾಲೋ ನ ಯಾತಃ: ವಯಮೇವ ಯಾತಾ) ಎಂಬ ಸೂಕ್ತಿಯೂ ಉಂಟು.

"ಕಾಲನ ಕಾಲು ಕುಲಗಿರಿಯ ಭಾರ!" ಎಂಬುದು ರಾಘವಾಂಕನ ವರ್ಣನೆ, ಹರಿಶ್ಚಂದ್ರ ಕಾವ್ಯದಲ್ಲಿ.

ಲೀಲಾ!

ಮಾನ್ಯರೆ,
ಹಿರಿಯ ವರನಟಿ ಲೀಲ
ಮರಣ(ವೆ) ಮರಳಿನಲ್ಲಿ,
ಮರಳಿ ಮಣ್ಣಿನಲ್ಲಿ
ಲೀನ, ವಿಲೀನ!
ಸುಡಲಿಲ್ಲ ಅನಲ,
ಒಣಗಿಸಲಿಲ್ಲ ಅನಿಲ!
(ಎಲ್ಲ ವಿಧಿಲೀಲಾ)

ಧ್ರುವಂ?– "ಜಾತಸ್ಯ ಮರಣಂ ಧ್ರುವಂ" (ಹುಟ್ಟಿದವರಿಗೆ ಸಾವು ತಪ್ಪದು). ಹುಟ್ಟಿದವರಿಗೂ ಅನೇಕರಿಗೆ ತಪ್ಪದು: ಭ್ರೂಣಹತ್ಯೆಯ ಬಗೆಗೆ ಏನು ಹೇಳೋಣ?

–ಸಿಪಿಕೆ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಸ್ವಾಮಿ ವಿವೇಕಾನಂದರ ಸ್ಮರಣೆ

ಹೊಸ ವರ್ಷ ಹುಟ್ಟಿತು, ಜನವರಿ ತಿಂಗಳು ಎಂದಾಗ ಥಟ್ಟನೆ ನೆನಪಾಗುವುದು ವಿವೇಕಾನಂದರ ಜಯಂತಿ. ಜನವರಿ ಹನ್ನೆರಡು ಆ ಶುಭ ದಿನ. ಚೈತ್ರಮಾಸದ ಶುಕ್ಲ ಪಕ್ಷ ನವಮಿಯು ಶ್ರೀರಾಮನನ್ನು ನೆನಪಿಸಿಕೊಳ್ಳುವಂತೆ ಮಾಡುತ್ತದೆ. ಶ್ರಾವಣ ಮಾಸದ ಕೃಷ್ಣ ಪಕ್ಷದ ಅಷ್ಟಮಿಯು ಶ್ರೀ ಕೃಷ್ಣನ ಸ್ಮರಣೆಯನ್ನು ತರುತ್ತದೆ. ಭಗವಂತನ ಆ ರೂಪಗಳಂತೆ ಅವನ ಜ್ಞಾನಾವತಾರ ವಿವೇಕಾನಂದರ ಜನ್ಮದಿನವೂ ನಮಗೆ ಅಷ್ಟೇ ಮುಖ್ಯ. ರಾಮಾಯಣವೂ ಭಗವದ್ಗೀತೆಯೂ ನಮ್ಮ ಬದುಕಿನ ಮೇಲೆ ಪರಿಣಾಮವನ್ನು ಬೀರಿರುವಂತೆ ವಿವೇಕಾನಂದರ ಭಾಷಣಗಳೂ, ಲೇಖನಗಳೂ, ಪುಸ್ತಕಗಳೂ ಗಾಢವಾದ, ನೇರವಾದ ಪರಿಣಾಮವನ್ನು ಬೀರಿವೆ. ಶ್ರೀರಾಮ–ಶ್ರೀಕೃಷ್ಣ ತ್ರೇತಾಯುಗದಲ್ಲಿ ಮತ್ತು ದ್ವಾಪರಯುಗದಲ್ಲಿದ್ದವರು. ನಾವಿರುವ ಕಲಿಯುಗದಲ್ಲೇ ಇದ್ದ ವಿವೇಕಾನಂದರು ಮಾನವತ್ವದಿಂದ ದೇವತ್ವಕ್ಕೆ ಏರಿ ಗೌರವಕ್ಕೆ ಪಾತ್ರರಾಗಿದ್ದಾರೆ.

ವಿವೇಕಾನಂದ ಎಂಬ ಹೆಸರು ಬಂದಿದ್ದು, ಅವರು ಸಂನ್ಯಾಸಾಶ್ರಮವನ್ನು ಸ್ವೀಕರಿಸಿದಾಗ ತಂದೆ ಇಟ್ಟ ಹೆಸರು ನರೇಂದ್ರ. ಬಾಲ್ಯದಿಂದಲೇ ನರೇಂದ್ರ ನಾಯಕತ್ವದ ಗುಣಗಳಿಂದ ತುಂಬಿದ್ದವನು. ವಿದ್ಯಾರ್ಥಿಯಾಗಿದ್ದಾಗಲೇ ಅವನು ಇಂಗ್ಲಿಷ್ ಮತ್ತು ಬಂಗಾಳಿ ಭಾಷೆಯ ಗಂಭೀರ ಗ್ರಂಥಗಳನ್ನೋದಿ ಅಪಾರ ಜ್ಞಾನವನ್ನು ಗಳಿಸಿದ್ದನು. ವಿದ್ಯಾರ್ಥಿ ದಶೆಯಲ್ಲಿಯೇ ನರೇಂದ್ರನ ವಾಗ್ಮಿತ್ವ ಮನೆ ಮಾತಾಗಿತ್ತು. ಕಾಲೇಜಿನಲ್ಲಿದ್ದಾಗ ಸುರೇಂದ್ರನಾಥ ಬ್ಯಾನರ್ಜಿಯಂತಹ ದೊಡ್ಡ ಭಾಷಣಕಾರರ ಮುಂದೆ ನಿರರ್ಗಳವಾಗಿ ಮಾತನಾಡಿದ ನರೇಂದ್ರ ಎಲ್ಲರ ಪ್ರಶಂಸೆಗೆ ಪಾತ್ರನಾದನು.

19ನೆಯ ಶತಮಾನದಲ್ಲಿ ಭಾರತದಲ್ಲಿ ಪರಧರ್ಮೀಯರ ಅಟ್ಟಹಾಸ ಜೋರಾಗಿತ್ತು. ಈ ದೇಶದ ಜನರು ಕೇವಲ ವಿಗ್ರಹಾರಾಧಕರು. ಇವರ ಧರ್ಮ ಮೂಢನಂಬಿಕೆಗಳ ಮೂಟೆ ಎಂದು ಅವರು ಹಾಸ್ಯ ಮಾಡುತ್ತಿದ್ದರು. ಆಗ ಬುದ್ಧಿಜೀವಿಗಳಾಗಿದ್ದ ರಾಜಾರಾಮ ಮೋಹನರಾಯ್ ಮುಂತಾದವರು ನಿರಾಕಾರವಾದ ಪರಮಾತ್ಮನನ್ನು ಮಾತ್ರ ಪೂಜಿಸುವ ಬ್ರಹ್ಮಸಮಾಜವನ್ನು ಪ್ರತಿಷ್ಠಾಪಿಸಿದರು. ನರೇಂದ್ರನೂ ಇದರ ಪ್ರಭಾವಕ್ಕೆ ಒಳಗಾಗಿದ್ದನು. ಆದರೆ ಅವನ ಆಧ್ಯಾತ್ಮಿಕ ತೃಷೆ ಬ್ರಹ್ಮ ಸಮಾಜದ ಪ್ರಾರ್ಥನೆಗಳಿಂದ ಇಂಗಲಿಲ್ಲ. ಅಲ್ಲಿ ಚರ್ಚಾಪಟುಗಳಿದ್ದರು. ಆದರೆ ದೈವಾನುಭವವನ್ನು ಪಡೆದವರಿರಲಿಲ್ಲ. ಕೇವಲ ಮಾತಿನಿಂದ ಫಲವೇನು? ಶ್ರೇಷ್ಠ ಅಧ್ಯಾತ್ಮ ಜೀವಿಗಳೆಂದು ಖ್ಯಾತರಾಗಿದ್ದ ದೇವೇಂದ್ರನಾಥ ಠಾಕೂರರ ಬಳಿ ಹೋದಾಗ 'ನೀವು ದೇವರನ್ನು ಕಂಡಿದ್ದೀರಾ?' ಎಂದು ಧೈರ್ಯದಿಂದ ಪ್ರಶ್ನಿಸಿದ ನರೇಂದ್ರ. 'ನಾನು ಕಂಡಿಲ್ಲ, ನೀನು ಕಾಣಬಹುದು. ನಿನಗೆ ಯೋಗಿಯ ಕಣ್ಣುಗಳಿವೆ' ಎಂದು ಅವರು ಹೇಳಿದರು.

ನರೇಂದ್ರನು ಪ್ರವೃತ್ತಿ ಧರ್ಮವನ್ನೂ ನಿವೃತ್ತಿ ಧರ್ಮವನ್ನೂ ನೋಡಿದನು. ಪ್ರವೃತ್ತಿ ಧರ್ಮದಲ್ಲಿ ವೃತ್ತಿಯಿಂದಲೋ, ಉದ್ಯೋಗದಿಂದಲೋ, ವ್ಯಾಪಾರದಿಂದಲೋ ಹಣವನ್ನು ಗಳಿಸಿ ಸುಖ ವಿಲಾಸಗಳಿಂದ ಜೀವನವನ್ನು ಕಳೆಯುವುದು, ಹೆಂಡತಿ, ಮಕ್ಕಳು, ಆಸ್ತಿ ಎಂದು ಆನಂದಪಡುತ್ತಿರುವುದು. ನಿವೃತ್ತಿ ಧರ್ಮ ಎಂದರೆ ಭಗವಂತನ ಧ್ಯಾನದಿಂದ ಶಾಂತಿ, ನೆಮ್ಮದಿಗಳನ್ನು ಪಡೆಯುವುದು. ವೈರಾಗ್ಯಮೇವಾಭಯಂ ಎಂಬ ಭಾವನೆಗೆ ಅವನು ಆದರವನ್ನು ತೋರಿಸುತ್ತಿದ್ದನು.

ಆ ಕಾಲದಲ್ಲಿ ರಾಣಿ ರಾಸಮಣಿ ಎಂಬಾಕೆಯು ಗಂಗಾ ತೀರದಲ್ಲಿ ಕಾಳೀ ದೇವಾಲಯವನ್ನು ನಿರ್ಮಿಸಿದ್ದಳು. ಅಲ್ಲಿ ಅರ್ಚಕರಾಗಿ ಬಂದ ಶ್ರೀ ರಾಮಕೃಷ್ಣರು ಅವತಾರ ಪುರುಷರಾಗಿದ್ದರು. ನರೇಂದ್ರ ಅವರನ್ನು ನೋಡಲು ಹೋದನು. ಅವನನ್ನು ನೋಡುತ್ತಿದ್ದಂತೆಯೇ ತಾವು ಹುಡುಕುತ್ತಿದ್ದ ದಿವ್ಯವ್ಯಕ್ತಿ ಇವನೇ ಎಂದು ರಾಮಕೃಷ್ಣರಿಗೆ ತಿಳಿಯಿತು. ಒಂದು



ಹಾಡನ್ನು ಹಾಡು ಎಂದು ಅವರು ಹೇಳಿದರು. ನರೇಂದ್ರ ಹಾಡಿದಾಗ ಕೇಳಿ ಅವರು ಭಾವಸಮಾಧಿಗೆ ಹೋದರು. ಆಮೇಲೆ ಹೇಳಿದರು. 'ಮಾನವ ಕುಲದ ದುಃಖವನ್ನು ನಿವಾರಿಸುವುದಕ್ಕಾಗಿ ನೀನು ಅವತರಿಸಿರುವೆ'.

ಇದು ನರೇಂದ್ರನಿಗೆ ಆಗ ಅರ್ಥವಾಗಲಿಲ್ಲ. ಇವರು ಹುಚ್ಚರಾಗಿರಬೇಕೋ ಏನೋ. ನಾನು ವಿಶ್ವನಾಥದತ್ತರ ಮಗ. ಇವರೇಕೆ ಏನೇನೋ ಹೇಳುತ್ತಾರೆ' ಎಂದು ಅವನು ಚಿಂತಿಸಿದನು. ಆದರೆ ಅವರ ಶಿಷ್ಯತ್ವವನ್ನು ಅವನ ಹೃದಯ ಒಪ್ಪಿಕೊಂಡಿತು. ಶ್ರೀ ರಾಮಕೃಷ್ಣರು ಕಾಳಿಯ ವಿಗ್ರಹವನ್ನು ಪೂಜಿಸುತ್ತಿದ್ದರು. ಬ್ರಹ್ಮ ಸಮಾಜದ ಗಾಢ ಪ್ರಭಾವಕ್ಕೆ ಒಳಗಾಗಿದ್ದ ನರೇಂದ್ರ ಸಾಕಾರೋಪಾಸನೆಯನ್ನು ಒಪ್ಪುತ್ತಿರಲಿಲ್ಲ. ಅದ್ವೈತ ಸಿದ್ಧಾಂತವನ್ನು ಅವರು ವಿವರಿಸಿದಾಗ ಅದು ಹಾಸ್ಯಾಸ್ಪದವೆಂದು ಅವನು ವಾದಿಸಿದನಂತೆ. ಆದರೆ ಅವರು ಅವನಿಗೆ ಭಗವದನುಭವವನ್ನು ನೀಡಿದ ಕ್ಷಣದಲ್ಲಿ ಎಲ್ಲವೂ ಆ ಭಗವಂತನೇ ಎಂಬ ಭಾವನೆ ಉದಯಿಸಿತು. ದೇವರೇ ಇಲ್ಲ ಎನ್ನುತ್ತಿದ್ದವನು ದೇವರಲ್ಲದುದು ಏನೂ ಇಲ್ಲ ಎನ್ನುವ ಅನುಭವವನ್ನು ಪಡೆದುಕೊಂಡನು. ಅದು ಪರಿವರ್ತನಾ ಕ್ಷಣವಾಗಿತ್ತು.

ಆಮೇಲೆ ನರೇಂದ್ರನ ಜೀವನದಲ್ಲೊಂದು ದೊಡ್ಡ ಆಘಾತದ ಘಟನೆ. ಅವನ ತಂದೆ ವಿಶ್ವನಾಥದತ್ತ ಇದ್ದಕ್ಕಿದ್ದಂತೆ ಮೃತ್ಯುವಿಗೆ ಈಡಾದನು. ಮನೆಯಲ್ಲಿ ಹಣ ಸಂಪಾದನೆ ಮಾಡುವವರಿಲ್ಲದೆ ಬಡತನ ಬಂದಿತು. ನರೇಂದ್ರ ಯಾವುದೋ ಕೆಲಸಗಳನ್ನು ಮಾಡಬೇಕಾಯಿತು. ಅವನನ್ನು ನಿಂದಿಸಿದರು. ಆದರೆ ಅವನು 'ತುಲ್ಯನಿಂದಾಸ್ತುತಿರ್ಮೌನೀ' ಆಗಿದ್ದನು. ಶ್ರೀರಾಮಕೃಷ್ಣರನ್ನು ಕಂಡಾಗ ಅವರು ಹೇಳಿದರು. 'ನೀನು ಈ ಲೋಕಕ್ಕೆ ಬಂದಿರುವುದು ಜಗನ್ಮಾತೆಯ ಕೆಲಸಕ್ಕಾಗಿ. ನಾನು ಈ ಲೋಕದಲ್ಲಿರುವವರೆಗೂ ಮಾತ್ರ ಸಂಸಾರದಲ್ಲಿರು'. ಈ ಮಾತು ನರೇಂದ್ರನ ಬದುಕಿನ ಹಾದಿಯನ್ನು ನಿರ್ಧರಿಸಿತು.

ತನ್ನ ಮನೆಯ ಕಷ್ಟಗಳನ್ನು ಪರಿಹರಿಸಲು ಕಾಳಿಯನ್ನು ಕೇಳಿಕೊಳ್ಳಬೇಕೆಂದು ನರೇಂದ್ರನು ಹೋದರೂ ಅವನು ವಸ್ತುತಃ ಕೇಳಿದ್ದು 'ತಾಯಿ ನನಗೆ ತ್ಯಾಗ, ಭಕ್ತಿ, ವೈರಾಗ್ಯಗಳನ್ನು ಕೊಡು' ಎಂದು ಮಾತ್ರ. ಶ್ರೀರಾಮಕೃಷ್ಣರ ಮಾರ್ಗದರ್ಶನದಲ್ಲಿ ನರೇಂದ್ರ ತೀವ್ರ ಸಾಧನೆಯನ್ನು ಮಾಡತೊಡಗಿದನು. ಅವರ ಅನುಗ್ರಹದಿಂದ ಸಿದ್ಧಿ ದೊರೆಯಿತು.

ಪ್ರಾರಬ್ಧಕರ್ಮಾನುಸಾರವಾಗಿ ಶ್ರೀರಾಮಕೃಷ್ಣರು ಗಂಟಲಿನ ಕ್ಯಾನ್ಸರ್ ರೋಗಕ್ಕೆ ತುತ್ತಾದರು. ಅವರು ನರೇಂದ್ರನಿಗೆ ರಾಮಮಂತ್ರವನ್ನು ಉಪದೇಶಿಸಿ ಅನುಗ್ರಹಿಸಿದರು. ಅನಂತರ ಕೆಲವು ದಿನಗಳಲ್ಲಿ ಅನಂತದಲ್ಲಿ ಲೀನರಾದರು.

ಆಮೇಲೆ 1887ರ ಜನವರಿ ಮೂರನೆಯ ತಾರೀಖು ನರೇಂದ್ರನೂ ಅವನ ಗುರುಭಾಯಿಗಳೂ ಸಂನ್ಯಾಸವನ್ನು ಸ್ವೀಕರಿಸಿದರು. ಆಗ ನರೇಂದ್ರನು ವಿವೇಕಾನಂದ ಎಂಬ ಹೆಸರನ್ನು ಸ್ವೀಕರಿಸಿದನು. ಹೀಗೆ ಸ್ವಾಮಿ ವಿವೇಕಾನಂದರು ಉದಯಿಸಿದರು. ಜಗತ್ತಿನ ಬೆಳಕಾದರು. ಹಿಂದೂ ಧರ್ಮದ ಉದ್ಧಾರಕರಾದರು.

ಸ್ವಾಮಿ ವಿವೇಕಾನಂದರು ಭಾರತದಲ್ಲೆಲ್ಲ ಸಂಚಾರವನ್ನು ಮಾಡಿ ಅದರ ನಾಡಿಯ ಮಿಡಿತವನ್ನರಿತರು. ಅನೇಕ ಪಂಡಿತರನ್ನೂ ಭಕ್ತರನ್ನೂ ಕಂಡರು. ಹಲವು ಕಷ್ಟಗಳನ್ನನುಭವಿಸಿದರು. ಪಾಣಿನಿಯ ವ್ಯಾಕರಣವನ್ನು ಓದಿದರು. ಗೀತೆ, ಉಪನಿಷತ್ತು, ಬ್ರಹ್ಮಸೂತ್ರ ಮುಂತಾದ ಗ್ರಂಥಗಳ ಸಾರವು ಭಾರತದ ಪ್ರತಿಯೊಬ್ಬ ವ್ಯಕ್ತಿಗೂ ತಿಳಿಯುವಂತಾಗಬೇಕು ಎಂಬುದು ಅವರ ಆಶಯವಾಗಿತ್ತು.

ವಿವೇಕಾನಂದರು ಭಾರತಕ್ಕೆ ಸೀಮಿತರಾಗದೆ ವಿಶ್ವಪ್ರಜೆಯಾಗಿ ಪ್ರಪಂಚದಲ್ಲಿ ಪ್ರಖ್ಯಾತರಾದುದು 1893 ಸೆಪ್ಟೆಂಬರ್ 11 ರಂದು ಚಿಕಾಗೋ ನಗರದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ; ಅವರು 'ಅಮೇರಿಕದ ನನ್ನ ಸಹೋದರರೆ, ಸಹೋದರಿಯರೆ, ಎಂದು ಮಾಡಿದ ಸಂಬೋಧನೆಯೇ ಸಭೆಗೆ ರೋಮಾಂಚನವನ್ನು ತಂದು ಅಭೂತಪೂರ್ವ ಚಪ್ಪಾಳೆಗಳ ಘೋಷಕ್ಕೆ ಕಾರಣವಾಯಿತು. ವಿವೇಕಾನಂದರ ಭಾಷಣ ವೇದವಾಣಿಯಂತೆ ಶಾಶ್ವತ ದೈವ ಸಂದೇಶವಾಯಿತು. ಅವರ ಕಂಚಿನ ಕಂಠ, ನಿರರ್ಗಲವಾಗ್‌ಝರಿ ಶ್ರೋತೃಗಳನ್ನು ಮುಗ್ಧಗೊಳಿಸಿತು. ಶಿವಮಹಿಮ್ನಃ ಸ್ತೋತ್ರದ ಒಂದು ಪದ್ಯವನ್ನು ಅವರು ಉದಾಹರಿಸಿದರು–

**ತ್ರಯೀ ಸಾಂಖ್ಯಂ ಯೋಗಃ ಪಶುಪತಿಮತಂ ವೈಷ್ಣವಮಿತಿ
ಪ್ರಭಿನ್ನೇ ಪ್ರಸ್ಥಾನೇ ಪರಮಿದಮದಃ ಪಥ್ಯಮಿತಿ ಚ ।
ರುಚೀನಾಂ ವೈಚಿತ್ರ್ಯಾದ್ ಋಜುಕುಟಿಲನಾನಾಪಥಜುಷಾಂ
ನೃಣಾಮೇಕೋ ಗಮ್ಯಸ್ತ್ವಮಸಿ ಪಯಸಾಮರ್ಣವ ಇವ॥**

(ವೇದಗಳು, ಸಾಂಖ್ಯ, ಯೋಗ, ಪಾಶುಪತ, ವೈಷ್ಣವ ಇತ್ಯಾದಿ ನಾನಾ ಮಾರ್ಗಗಳಿವೆ. ಅವುಗಳಲ್ಲಿ ಇದು ಸರಿ, ಅದೇ ನನಗೆ ಯೋಗ್ಯ ಎಂದು ರುಚಿಭೇದದಿಂದ ಕೆಲವರು ನೇರವಾದ, ಮತ್ತೆ ಕೆಲವರು ವಕ್ರವಾದ ನಾನಾ ಮಾರ್ಗಗಳನ್ನು ಅನುಸರಿಸಿ ಭಗವಂತನನ್ನು ತಲುಪುತ್ತಾರೆ. ಎಲ್ಲ ಹೊಳೆಗಳಿಗೂ ಕಡಲೊಂದೇ ಗುರಿ ಆಗಿರುವಂತೆ ಎಲ್ಲ ಜನರಿಗೂ ಒಬ್ಬನೇ ದೇವರು ಧ್ಯೇಯನಾಗಿದ್ದಾನೆ). ಅಂದಿನಿಂದ ವಿವೇಕಾನಂದರು ಭಾರತೀಯ ಸಂಸ್ಕೃತಿಯ ಪ್ರಧಾನ ಪ್ರತಿನಿಧಿಯಾದರು. ನಾನಾ ದೇಶಗಳಲ್ಲಿ ಅವರಿಗೆ ಆಹ್ವಾನ. ಅವರು ಭಾರತಕ್ಕೆ ಹಿಂದಿರುಗಿದಾಗ ಅವರಿಗೆ ಐತಿಹಾಸಿಕ ಸ್ವಾಗತ ದೊರಕಿತು. ಹಿಂದೂ ಧರ್ಮಕ್ಕೆ ದಿಗ್ದರ್ಶನ ಲಭಿಸಿತು. ವಿವೇಕಾನಂದರ ದಕ್ಷ ಸಾರಥ್ಯದಲ್ಲಿ ಜ್ಞಾನರಥವು ಜೋರಾಗಿ ಮುನ್ನಡೆಯಿತು. ಶ್ರೀರಾಮಕೃಷ್ಣ ಮಠಗಳು ಭಾರತೀಯ ಸಂಸ್ಕೃತಿಯ ಪ್ರಸಾರಕ್ಕಾಗಿ ವಿಶ್ವದಲ್ಲೆಲ್ಲ ಸ್ಥಾಪಿತವಾದವು. ಅವು ಇಂದೂ ನೂರಾರು ನಿಸ್ವಾರ್ಥ ಸಂನ್ಯಾಸಿಗಳ ತ್ಯಾಗಮಯ ಸೇವೆಯಿಂದ ಜಗತ್ತನ್ನು ಪವಿತ್ರತೆಯ ಕಡೆಗೆ ಕೊಂಡೊಯ್ಯುತ್ತಿವೆ.

ವಿವೇಕಾನಂದ ಜಯಂತಿಯ ಸಂದರ್ಭದಲ್ಲಿ ಆ ಮಹಾಮಾನವನ ಅಥವಾ ದಿವ್ಯ ಪುರುಷನ ನೆನಪು ನಮ್ಮೆಲ್ಲರನ್ನು ಶ್ರೀರಾಮಕೃಷ್ಣರ ದಿವ್ಯೋಪದೇಶ ಪ್ರಾಪ್ತಿಗೆ ಪ್ರೇರಿಸಲಿ, **ಆತ್ಮನೋ ಮೋಕ್ಷಾಯ ಜಗ್‌ದ್ಧಿತಾಯ ಚ** ಎಂಬ ಸಂದೇಶ ನಮ್ಮ ಕಿವಿಗಳಲ್ಲಿ ಮೊಳಗಲಿ, ಸಕಲರ ಹಿತಕ್ಕಾಗಿ ತ್ಯಾಗದ ಮಂತ್ರ ನಮ್ಮಲ್ಲಿ ಬೇರೂರಲಿ ಎಂದು ಆಶಿಸೋಣ.

ಶಿಂಧೆ ಬಣವೇ ನಿಜವಾದ ಶಿವಸೇನಾ

ಮಹಾರಾಷ್ಟ್ರ ವಿಧಾನಸಭೆ ಸ್ಪೀಕರ್ ರಾಹುಲ್ ನಾರ್ವೇಕರ್ ತೀರ್ಪು

ಮುಂಬೈ: ಏಕನಾಥ ಶಿಂಧೆ ಮತ್ತು ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ ಬಣಗಳು ಪರಸ್ಪರರ ವಿರುದ್ಧ ಸಲ್ಲಿಸಿರುವ ಶಾಸಕರ ಅನರ್ಹತೆ ಕುರಿತ ಅರ್ಜಿಗಳಿಗೆ ಸಂಬಂಧಿಸಿದ ಆದೇಶವನ್ನು ಮಹಾರಾಷ್ಟ್ರ ವಿಧಾನಸಭೆ ಸ್ಪೀಕರ್ ರಾಹುಲ್ ನಾರ್ವೇಕರ್ ಬುಧವಾರ ಸಂಜೆ ಪ್ರಕಟಿಸಿದರು.

ಶಿವಸೇನಾದ 55 ಶಾಸಕರ ಪೈಕಿ 37 ಶಾಸಕರ ಬೆಂಬಲ ಮುಖ್ಯಮಂತ್ರಿ ಏಕನಾಥ ಶಿಂಧೆ ಬಣಕ್ಕೆ ಇದ್ದು, ಶಿಂಧೆ ಬಣವೇ ನಿಜವಾದ ಶಿವಸೇನಾ ಎಂದು ಸ್ಪೀಕರ್ ತೀರ್ಪು ನೀಡಿದರು. ಇದರಿಂದ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ ಬಣಕ್ಕೆ ಭಾರಿ ಹಿನ್ನಡೆ ಉಂಟಾಗಿದೆ. ಶಿವಸೇನಾದ ಎರಡೂ ಬಣಗಳು ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ತಮ್ಮ ಸಂಘಟನೆಯ ವಿಧಾನದಲ್ಲಿ ಯಾವುದೇ ಒಮ್ಮತವಿಲ್ಲ. ನಾಯಕತ್ವ ರಚನೆಯ ಬಗ್ಗೆ ಎರಡು ಪಕ್ಷಗಳು ವಿಭಿನ್ನ ದೃಷ್ಟಿಕೋನಗಳನ್ನು ಹೊಂದಿವೆ. ಪರಿಗಣಿಸಬೇಕಾದ ಏಕೈಕ ಅಂಶವೆಂದರೆ ಶಾಸಕಾಂಗ ಪಕ್ಷದ ಬಹುಮತ ಎಂದು ನಾರ್ವೇಕರ್ ತೀರ್ಪಿನಲ್ಲಿ ಹೇಳಿದ್ದಾರೆ.

ಮುಖ್ಯಮಂತ್ರಿ ಏಕನಾಥ ಶಿಂಧೆ ನೇತೃತ್ವದ ಬಣವೇ ನಿಜವಾದ ಶಿವಸೇನಾ ಎಂದು ನಾರ್ವೇಕರ್ ಹೇಳಿದ್ದಾರೆ. ನಾನು ಸುಪ್ರೀಂ ಕೋರ್ಟ್‌ಗೆ ಕೃತಜ್ಞತೆಯನ್ನು ವ್ಯಕ್ತಪಡಿಸಲು ಬಯಸುತ್ತೇನೆ. ಜತೆಗೆ ನನಗೆ ಸಹಾಯ ಮಾಡಿದ ರಾಜ್ಯ ವಿಧಾನಮಂಡಲದ ಸಿಬ್ಬಂದಿಗೆ ಧನ್ಯವಾದ ಸಲ್ಲಿಸುತ್ತೇನೆ. ಎರಡೂ ಕಡೆಯ ವಕೀಲರ ಸಹಕಾರವನ್ನು ನಾನು ಪ್ರಶಂಸಿಸುತ್ತೇನೆ ಎಂದು ತಿಳಿಸಿದ್ದಾರೆ.

ನಾರ್ವೇಕರ್ ಅವರಿಗೆ ಆದೇಶ ಪ್ರಕಟಿಸುವುದಕ್ಕೆ ಸುಪ್ರೀಂ ಕೋರ್ಟ್ ಜ.10ರ ಗಡುವು ನೀಡಿತ್ತು. ಆದೇಶ ತಮ್ಮ ವಿರುದ್ಧವಾಗಿ ಬಂದಲ್ಲಿ, ಸುಪ್ರೀಂಕೋರ್ಟ್ ಮೆಟ್ಟಿಲೇರಲು ಎರಡೂ ಬಣಗಳು ಸಿದ್ಧತೆ ನಡೆಸಿದ್ದವು. ನಾರ್ವೇಕರ್ ಅವರು 34 ಅರ್ಜಿಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಿದ್ದು, ಎರಡೂ ಬಣಗಳು ಒಟ್ಟು 2.5 ಲಕ್ಷ ಪುಟಗಳಷ್ಟು ದಾಖಲೆಗಳನ್ನು ಸಲ್ಲಿಸಿದ್ದವು.

ಆದೇಶ ನೀಡುವ ಮೊದಲು ನಾರ್ವೇಕರ್ ಅವರು ಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರನ್ನು ಭೇಟಿ ಮಾಡಿದ್ದು ಎಷ್ಟು ಸರಿ ಎಂದು ಉದ್ಧವ್ ಠಾಕ್ರೆ ಪ್ರಶ್ನಿಸಿದ್ದಾರೆ.



ನಾವು ಯಾವ ನ್ಯಾಯ ನಿರೀಕ್ಷಿಸಬಹುದು. ಸ್ಪೀಕರ್ ಅವರು ಮುಖ್ಯಮಂತ್ರಿ ಜೊತೆ ಎರಡು ಬಾರಿ ಸಭೆ ನಡೆಸಿದ್ದಾರೆ. ನಾನೂ ಮುಖ್ಯಮಂತ್ರಿ ಆಗಿದ್ದೆ. ಭೇಟಿಯಾಗಬೇಕು ಎಂದಿದ್ದರೆ, ಸ್ಪೀಕರ್ ಬಳಿ ಮುಖ್ಯಮಂತ್ರಿ ಹೋಗಬೇಕೇ ವಿನಾ ಮುಖ್ಯಮಂತ್ರಿ ಇದ್ದಲ್ಲಿ ಸ್ಪೀಕರ್ ಹೋಗಬಾರದು. ಆದರೆ ಇಲ್ಲಿ ಸ್ಪೀಕರ್ ಅವರೇ ಮುಖ್ಯಮಂತ್ರಿ ಇದ್ದಲ್ಲಿಗೆ ತೆರಳಿ ಸಭೆ ನಡೆಸುತ್ತಾರೆ ಎಂದು ಠಾಕ್ರೆ ಅವರು ಸುದ್ದಿಗೋಷ್ಠಿಯಲ್ಲಿ ಹರಿಹಾಯ್ದರು.

ನಾರ್ವೇಕರ್ ಅವರು ಶಿಂಧೆ ಅವರನ್ನು ಭೇಟಿ ಮಾಡುವುದು ನ್ಯಾಯಾಧೀಶರೊಬ್ಬರು ಕ್ರಿಮಿನಲ್ ಅಪರಾಧ ಎಸಗಿದವನನ್ನು ಭೇಟಿಯಾಗುವುದಕ್ಕೆ ಸಮ ಎಂದು ಠಾಕ್ರೆ ಹೇಳಿದರು.

ಸ್ಪೀಕರ್ ಅವರು ನ್ಯಾಯಮಂಡಳಿ ಮುಖ್ಯಸ್ಥ ಇದ್ದಂತೆ... ನ್ಯಾಯಾಧೀಶನ ಸ್ಥಾನದಲ್ಲಿ ಇರುವವರು ಆದೇಶಕ್ಕೆ ಮೊದಲು ಅರ್ಜಿದಾರರೊಬ್ಬರನ್ನು ಭೇಟಿ ಮಾಡುವುದು ಎಷ್ಟು ಸರಿ... ಸಂವಿಧಾನದ ಹತ್ತನೆಯ ಪರಿಚ್ಛೇದದ ಅಡಿಯಲ್ಲಿ ನ್ಯಾಯ ನಿರ್ಣಯದ ಕೆಲಸ ಮಾಡುವ ಸ್ಪೀಕರ್ ನಿಷ್ಪಕ್ಷಪಾತದಿಂದ, ನ್ಯಾಯಸಮ್ಮತವಾಗಿ ನಡೆದುಕೊಳ್ಳಬೇಕು ಎಂದು ಶಿವಸೇನಾ (ಯುಬಿಟಿ) ಶಾಸಕ ಅನಿಲ್ ಪರಬ್ ಹೇಳಿದರು.

ಶಿಂಧೆ ಮತ್ತು ಇತರ ಶಾಸಕರ ಬಂಡಾಯದ ನಂತರ ಮಹಾರಾಷ್ಟ್ರದ ಮಹಾ ವಿಕಾಸ ಅಘಾಡಿ ಮೈತ್ರಿಕೂಟ ಸರ್ಕಾರವು ಉರುಳಿತ್ತು. ನಂತರ ಬಿಜೆಪಿ ಬೆಂಬಲದೊಂದಿಗೆ ಏಕನಾಥ್ ಶಿಂಧೆ ನೇತೃತ್ವದಲ್ಲಿ ಸರ್ಕಾರ ರಚನೆ ಆಯಿತು.

ಪ್ರಥಮ ದರ್ಜೆ ಕಂದಾಯ ನಿರೀಕ್ಷಕರಿಗೆ 45 ದಿನಗಳ ಸಾಮಾನ್ಯ ಬುನಾದಿ ತರಬೇತಿ

ಮೈಸೂರು,ಜ.10(ಎಸ್‌ಪಿಎನ್)–ರಾಜ್ಯ ನಗರಾಭಿವೃದ್ಧಿ ಸಂಸ್ಥೆಗೆ ಹೊಸದಾಗಿ ಆಯ್ಕೆಗೊಂಡಿರುವ ಪ್ರಥಮ ದರ್ಜೆ ಕಂದಾಯ ನಿರೀಕ್ಷಕರಿಗೆ ಮೈಸೂರು ಆಡಳಿತ ತರಬೇತಿ ಸಂಸ್ಥೆಯಲ್ಲಿ 45 ದಿನಗಳ ಸಾಮಾನ್ಯ ಬುನಾದಿ ತರಬೇತಿಗೆ ಇಲಾಖೆ ನಿರ್ದೇಶಕ ಜಿ.ವೆಂಕಟೇಶ್ ಕಡಗದ ಕೈ ಚಾಲನೆ ನೀಡಿದರು.

ಪಟ್ಟಣ ಪಂಚಾಯ್ತಿ, ಪುರಸಭೆ ಮತ್ತು ನಗರಸಭೆಗಳಿಗೆ ಕರ್ನಾಟಕ ಲೋಕ ಸೇವಾ ಆಯೋಗ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ 60 ಮಂದಿ ಪ್ರಥಮ ದರ್ಜೆ ಸಹಾಯಕ ಕಂದಾಯ ನಿರೀಕ್ಷಕರು ಆಯ್ಕೆಯಾಗಿದ್ದಾರೆ. ಈ ತರಬೇತಿಯಲ್ಲಿ ವೃತ್ತಿಗೆ ಅನ್ವಯಿಸುವ ಅಂಶಗಳನ್ನೊಳಗೊಂಡಂತೆ ಎಲ್ಲಾ ಆಯಾಮಗಳಿಂದಲೂ ಸ್ವ ವಿವರವಾದ ವಿಷಯ ಕುರಿತು ತರಬೇತಿ ನೀಡಲಾಗುವುದು. ನೂತನ ಕಂದಾಯ ನಿರೀಕ್ಷಕರಿಗೆ ಈ ತರಬೇತಿ ಅತೀ ಮುಖ್ಯವಾಗಿದೆ ಎಂದು ಹೇಳಿದರು.

ಉಪನಿರ್ದೇಶಕ ಸಿ.ರಾಜು ಮಾತನಾಡಿ, ಈ ಸಂಸ್ಥೆ ವತಿಯಿಂದ ವೃತ್ತಿಗೆ ಬೇಕಾದ ಎಲ್ಲಾ ವಿಚಾರಗಳನ್ನು ವಿವಿಧ ಆಯಾಮಗಳಲ್ಲಿ ಕಲಿಸುವ ಪ್ರಯತ್ನ ಮಾಡಲಾಗುವುದು. ಈ ತರಬೇತಿಯಲ್ಲಿ ಕಾನೂನು ಅಂಶಗಳು, ಸರ್ಕಾರದ ಬೊಕ್ಕಸಕ್ಕೆ ಸಂದಾಯವಾಗಬೇಕಾದ ವಿವಿಧ ರೀತಿ ಕಂದಾಯ ವಸೂಲಾತಿ ಸೇರಿದಂತೆ ಇತರೆ ಎಲ್ಲಾ ಅಂಶಗಳನ್ನು ಒಳಗೊಂಡಂತೆ ಬೋಧಿಸಲಾಗುವುದು ಎಂದು ಭರವಸೆ ನೀಡಿದರು.

ಈ ತರಬೇತಿಯಲ್ಲಿ ತಿಳಿದುಕೊಳ್ಳುವ ಎಲ್ಲಾ ಅಂಶಗಳು ಜನಸಾಮಾನ್ಯರ ಕೆಲಸಗಳನ್ನು ತ್ವರಿತವಾಗಿ ನೀಡಲು ಉಪಯೋಗವಾಗಲಿದೆ ಎಂದರು. ವೇದಿಕೆಯಲ್ಲಿ ತರಬೇತಿ ಶಿಬಿರದ ಸಂಯೋಜಕ ಬಿ.ವಿ.ವೆಂಕಟೇಶ್, ಸಹ ಸಂಯೋಜಕಿ ಕೆ ತೇಜಸ್ವಿನಿ, ಯಾದವಕುಮಾರ್, ಜಿ ಶ್ರೀನಿವಾಸ್ ಮತ್ತು ಸಂಸ್ಥೆಯ ಬೋಧಕರು, ಬೋಧಕೇತರ ಸಿಬ್ಬಂದಿ ಹಾಜರಿದ್ದರು.



ರಾಜ್ಯ ನಗರಾಭಿವೃದ್ಧಿ ಸಂಸ್ಥೆಗೆ ಆಯ್ಕೆಗೊಂಡಿರುವ ನೂತನ ಪ್ರಥಮ ದರ್ಜೆ ಕಂದಾಯ ನಿರೀಕ್ಷಕರಿಗೆ ಮೈಸೂರು ಆಡಳಿತ ತರಬೇತಿ ಸಂಸ್ಥೆಯಲ್ಲಿ ಸಾಮಾನ್ಯ ಬುನಾದಿ ತರಬೇತಿಗೆ ಇಲಾಖೆ ನಿರ್ದೇಶಕ ಜಿ.ವೆಂಕಟೇಶ್ ಕಡಗದ ಕೈ ಚಾಲನೆ ನೀಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ರಾಷ್ಟ್ರೀಯ ಹಬ್ಬಗಳ ಘನತೆ ಹೆಚ್ಚಾಗಬೇಕು

ಗಣರಾಜ್ಯೋತ್ಸವ ಪೂರ್ವಭಾವಿ ಸಭೆಯಲ್ಲಿ ಡಿಸಿ ರಾಜೇಂದ್ರ



ಮೈಸೂರು, ಜ.10–ದೇಶದ ಬಗೆಗೆ ಅಭಿಮಾನ ಹೆಚ್ಚಿಸುವ ರಾಷ್ಟ್ರೀಯ ಹಬ್ಬಗಳ ಘನತೆ ಹೆಚ್ಚಾಗುವಂತೆ ಶ್ರದ್ಧಾ ಭಕ್ತಿಯಿಂದ ಗಣರಾಜ್ಯೋತ್ಸವವನ್ನು ಆಚರಿಸೋಣ ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಹೇಳಿದರು.

ಜಿಲ್ಲಾಡಳಿತ ಭವನದಲ್ಲಿ ಇಂದು ನಡೆದ ಗಣರಾಜ್ಯೋತ್ಸವ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಜ.26ರಂದು ಗಣರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಬೇಕಿದೆ ಸಂವಿಧಾನ, ಸಂವಿಧಾನದ ಪೀಠಿಕೆ ಕುರಿತು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಲ್ಲಿ ಅರಿವು ಮತ್ತು ಜಾಗೃತಿ ಮೂಡಿಸುವುದರ ಜೊತೆಗೆ ರಾಷ್ಟ್ರ ಕಟ್ಟುವ ಸಂಕಲ್ಪ ಮಾಡುವಂತೆ ಗಣರಾಜ್ಯೋತ್ಸವ ಆಚರಣೆಯಾಗಲಿ ಎಂದು ಹೇಳಿದರು.

ಜ.26ರ ಸಂಜೆಯ ಕಾರ್ಯಕ್ರಮಗಳು ಕಲಾಮಂದಿರದಲ್ಲಿ ನಡೆಯಲಿದ್ದು, ಈ ಬಾರಿ ಸಾಂಸ್ಕೃತಿಕ ಸೌರಭ, ಸರ್ಕಾರಿ ನೌಕರರ ಸಂಘದಿಂದ ಕಾರ್ಯಕ್ರಮ ಇರಲಿವೆ ಎಂದು ಕನ್ನಡ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸುದರ್ಶನ್ ಹೇಳಿದರು. ಸಭೆಯಲ್ಲಿ ಎಡಿಸಿ ಲೋಕನಾಥ್, ಅಡಿಷನಲ್ ಎಸ್ಪಿ ನಂದಿನಿ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಗೋವಿಂದರಾಜು, ಜಿಲ್ಲಾಮಟ್ಟದ ಅಧಿಕಾರಿಗಳು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಜರಿದ್ದರು.

ಜ.26ರ ಬೆಳಗ್ಗೆ 9 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವರು ಬನ್ನಿಮಂಟಪ ಆವರಣದಲ್ಲಿ ಧ್ವಜಾರೋಹಣ ನೆರವೇರಿಸಲಿದ್ದು, ನಗರಪಾಲಿಕೆಯವರು ವೇದಿಕೆ, ಸ್ವಚ್ಛತೆ, ಸಾರ್ವಜನಿಕರು ಹಾಗೂ ಶಾಲಾ ಮಕ್ಕಳಿಗೆ ಕುಡಿಯುವ ನೀರಿನ ವ್ಯವಸ್ಥೆ ನೋಡಿಕೊಳ್ಳಬೇಕು. ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಇರಲಿದೆ. ಈ ಬಾರಿ ಅಂಧ ಶಾಲಾ ಮಕ್ಕಳಿಂದ ಪೆರೇಡ್ ಮಾಡಿಸಿ. –ಡಾ.ಕೆ.ವಿ.ರಾಜೇಂದ್ರ, ಡಿಸಿ.

ಮುಕ್ತ ವಿವಿ ಅಧ್ಯಯನ ಅವಕಾಶಗಳ ಪ್ರಾಯೋಜಿತ ಬಾನುಲಿ ಸರಣಿ ಮುಕ್ತವಾಣಿ; ನಾಳೆಯಿಂದ ಒಂದು ವರ್ಷ ಕಾಲ ಪ್ರಸಾರ

ದೂರ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಸುಲಭ, ಶೀಘ್ರ ಮಾಹಿತಿ ರವಾನೆ ಮಹದುದ್ದೇಶ

ಮೈಸೂರು,ಜ.10(ಎಂಟಿವೈ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಅಧ್ಯಯನ ಅವಕಾಶಗಳ ಕುರಿತ ಪ್ರಾಯೋಜಿತ ಬಾನುಲಿ ಸರಣಿ 'ಮುಕ್ತವಾಣಿ' ಕಾರ್ಯಕ್ರಮ ಜ.12ರಿಂದ 2025ರ ಜ.3 ರವರೆಗೆ ಪ್ರತಿ ಶುಕ್ರವಾರ ಬೆಳಗ್ಗೆ 6.40 ರಿಂದ 6.50 ಹಾಗೂ ಅದೇ ದಿನ ಸಂಜೆ 5.45 ರಿಂದ 5.55 ರವರೆಗೆ ಮೈಸೂರು ಆಕಾಶವಾಣಿ ಮೂಲಕ 52 ವಾರ ಪ್ರಸಾರವಾಗಲಿದೆ ಎಂದು ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ತಿಳಿಸಿದ್ದಾರೆ.



ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಮಾತನಾಡಿದರು.

ಮೈಸೂರಿನ ಮುಕ್ತ ಗಂಗೋತ್ರಿ ಸಭಾಂಗಣದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ದೂರ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ನೆರವಾಗುವ ನಿಟ್ಟಿನಲ್ಲಿ ಕೆಎಸ್‌ಓಯು ಮೈಸೂರು ಆಕಾಶವಾಣಿ ಪ್ರಾಯೋಜಿತ ಸರಣಿ ಕಾರ್ಯಕ್ರಮ ಆರಂಭಿಸುತ್ತಿದೆ. ಈ ಬಾನುಲಿ ಸರಣಿ ಮುಕ್ತವಾಣಿ ಕಾರ್ಯಕ್ರಮ ಅಪಾರ ಸಂಖ್ಯೆಯ ವಿದ್ಯಾರ್ಥಿಗಳಿಗೆ ವರದಾನವಾಗಿ ಪರಿಣಮಿಸಲಿದೆ ಎಂದರು.

ಮುಕ್ತವಾಣಿ ಬಾನುಲಿ ಸರಣಿ ಕಾರ್ಯಕ್ರಮವನ್ನು 52 ವಾರ ನಡೆಸಲು ಉದ್ದೇಶಿಸಲಾಗಿದ್ದು, ಒಂದು ವರ್ಷ(2025ರ ಜ.3) ಕಾಲ ಪ್ರತಿ ಶುಕ್ರವಾರ ಬೆಳಗ್ಗೆ 6.40ರಿಂದ 6.50ರವರೆಗೆ ಪ್ರಸಾರವಾದರೆ, ಅದೇ ದಿನ ಸಂಜೆ 5.45ರಿಂದ 5.55 ರವರೆಗೆ ಮರು ಪ್ರಸಾರವಾಗಲಿದೆ. ಮೊದಲ ಕಾರ್ಯಕ್ರಮದಲ್ಲಿ ಮುಕ್ತ ವಿವಿ ಕುಲಪತಿ, ಕುಲಸಚಿವರು, ಡೀನ್, ಮುಖ್ಯಸ್ಥರು ಪಾಲ್ಗೊಳ್ಳುವರು. ಶೈಕ್ಷಣಿಕ ಚಟುವಟಿಕೆಯ ಜತೆಗೆ ಕೇಳುಗರೊಂದಿಗೆ ಮುಕ್ತವಾಗಿ ವಿಚಾರ ವಿನಿಮಯಕ್ಕೆ ಅವಕಾಶವಿದೆ. ಈ ಮೂಲಕ ಆಧುನಿಕ ತಂತ್ರಜ್ಞಾನದೊಂದಿಗೆ ಸಮಕಾಲೀನ, ಸ್ಪರ್ಧಾತ್ಮಕ ಮತ್ತು ಗುಣಮಟ್ಟದ ವಿವಿಧ ಪದವಿಯನ್ನು ಮನೆ ಮನೆಗೆ ತಲುಪಿಸುವ ಧ್ಯೇಯೋದ್ದೇಶಕ್ಕೆ ಪೂರಕವಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ವಿವರಿಸಿದರು.

ಮುಕ್ತ ವಿವಿಯ ಇತಿಹಾಸದಲ್ಲಿ ಈ ಬಾರಿ ಅತೀ ಹೆಚ್ಚು ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ಪ್ರತಿ ಜಿಲ್ಲೆಯಲ್ಲೂ ಸುದ್ದಿಗೋಷ್ಠಿ ನಡೆಸಿ ವಿದ್ಯಾರ್ಥಿಗಳನ್ನು ಸೆಳೆಯಲಾಗಿತ್ತು. ಅಲ್ಲದೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಪ್ರಾದೇಶಿಕ ಕೇಂದ್ರ ಮತ್ತು ಸಂಪರ್ಕ ತರಗತಿ ನಡೆಸಲು ಸ್ಥಳಾವಕಾಶ ನೀಡುವಂತೆ ಕೋರಲಾಗಿತ್ತು. ಯಾದಗಿರಿಯಲ್ಲಿ 2 ಎಕರೆ ಜಾಗ, ವಿಜಯಪುರದಲ್ಲಿ 3 ಎಕರೆ, ಉಡುಪಿಯಲ್ಲಿ 1.5 ಎಕರೆ ಜಾಗ ಮುಕ್ತ ವಿವಿಗೆ ನೀಡಲಾಗಿದೆ. ರಾಜ್ಯದ ಪ್ರಮುಖ ಕಾಲೇಜುಗಳಲ್ಲಿ ಎರಡೆರಡು ಕೊಠಡಿ ನೀಡಿದರೆ ಮುಕ್ತ ವಿವಿ ಕಾರ್ಯಕ್ರಮವನ್ನು ತಾಲೂಕು ಕೇಂದ್ರಕ್ಕೂ ವಿಸ್ತರಿಸಲಾಗುವುದು. ಅವಕಾಶ ಇರುವ ಕಡೆ ಪರಿಶೀಲಿಸಿ ಕೊಠಡಿ ನೀಡುವುದಾಗಿ ಉನ್ನತ ಶಿಕ್ಷಣ ಸಚಿವರು ಭರವಸೆ ನೀಡಿದ್ದಾರೆ ಎಂದು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಕ್ತ ವಿವಿಯ ಕುಲಸಚಿವ (ಆಡಳಿತ) ಪ್ರೊ.ಕೆ.ಎಲ್.ಎನ್. ಮೂರ್ತಿ, ಡೀನ್ ಪ್ರೊ.ಎನ್.ಲಕ್ಷ್ಮೀ, ಕುಲಸಚಿವ (ಪರೀಕ್ಷಾಂಗ), ಪ್ರೊ.ಕೆ.ಬಿ.ಪ್ರವೀಣ ಇನ್ನಿತರರು ಉಪಸ್ಥಿತರಿದ್ದರು.

ದಾಖಲಾತಿ ಆರಂಭ

ಮುಕ್ತ ವಿವಿಯಲ್ಲಿ ಜನವರಿಯಿಂದ ಮಾರ್ಚ್ 31ರವರೆಗೆ ದಾಖಲಾತಿ ಆರಂಭವಾಗಿದೆ. 64 ಕಾರ್ಯಕ್ರಮಗಳನ್ನು ನೀಡುತ್ತಿದೆ. ಅದರಲ್ಲಿ 53 ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮಾ ವಿಷಯ ಒಳಗೊಂಡಿದ್ದರೆ, 10 ಕಾರ್ಯಕ್ರಮ ಎಂಎಸ್‌ಡಬ್ಲ್ಯೂ, ಆಸ್ಪತ್ರೆ, ಆರೋಗ್ಯ ಕಾಳಜಿ ನಿರ್ವಹಣೆ ಎಂಬಿಎ, ಎಂಸಿಎಗೆ ಸಂಬಂಧಿಸಿದ ಕೋರ್ಸ್‌ಗಳಾಗಿವೆ.

–ಪ್ರೊ. ಶರಣಪ್ಪ ವಿ. ಹಲಸೆ

ಪೋಸ್ಟ್ ಕಾರ್ಡ್ ಹಂಚಿ ಸರ್ವೆಗೆ ಮುಂದಾದ ಮೈಸೂರು–ಕೊಡಗು ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಜೆ.ಜೆ.ಆನಂದ್



ಮೈಸೂರು ನಗರ ಬಸ್ ನಿಲ್ದಾಣದಲ್ಲಿ ಕೊಡಗು–ಮೈಸೂರು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಆಕಾಂಕ್ಷಿ ಜೆ.ಜೆ.ಆನಂದ್ ಪೋಸ್ಟ್ ಕಾರ್ಡ್ ನೀಡುವ ಮೂಲಕ ಬುಧವಾರ ಪ್ರೀ ಪೋಲಿಂಗ್ ಓಟಿಂಗ್ ಸರ್ವೆ ನಡೆಸಿದರು.

ಮೈಸೂರು,ಜ.10(ಜಿಎ)–ಪೋಸ್ಟ್ ಕಾರ್ಡ್ ಮೂಲಕ ಪ್ರೀ ಪೋಲಿಂಗ್ ಓಟಿಂಗ್ ಸರ್ವೆ ನಡೆಸಿ ಮತದಾರರ ಒಲವು ಅರಿಯುವ ವಿನೂತನ ಕಾರ್ಯಕ್ರಮಕ್ಕೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಜೆ.ಜೆ ಆನಂದ್ ಮುಂದಾಗಿದ್ದಾರೆ.

ಮೈಸೂರಿನ ನಗರ ಬಸ್ ನಿಲ್ದಾಣದ ಆವರಣದಲ್ಲಿ ಬಸ್ ನಿಲ್ದಾಣಕ್ಕೆ ಆಗಮಿಸಿದ ಪ್ರಯಾಣಿಕರಿಗೆ ಪೋಸ್ಟ್ ಕಾರ್ಡ್ ನೀಡಿ ಜೆ.ಜೆ. ಆನಂದ್ ಕಾಂಗ್ರೆಸ್ ಹಾಗೂ ತಮ್ಮ ಮೇಲೆ ಮತದಾರರ ಒಲವು ಇದೇಯಾ ಎಂದು ಸರ್ವೆ ನಡೆಸಿದ್ದಾರೆ.

ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸುಮಾರು 2 ಲಕ್ಷಕ್ಕೂ ಅಧಿಕ ಪೋಸ್ಟ್ ಕಾರ್ಡ್ ಹಂಚಿ ಮತದಾರರ ಮನಸ್ಥಿತಿಯನ್ನು ಅರಿತುಕೊಳ್ಳಲಾಗುತ್ತಿದ್ದು, ಕಾರ್ಡ್‌ನ ಮುಂಭಾಗ ನನ್ನ ವಿಳಾಸವಿದೆ. ಹಿಂಬದಿಯಲ್ಲಿ ಈ 'ಮೈಸೂರು–ಕೊಡಗು ಲೋಕಸಭಾ ಚುನಾವಣೆಯಲ್ಲಿ ಗೆಲುತ್ತೀರಾ' ಎಂದು ಬ್ಲಾಕ್ ಬಿಟ್ಟಿದ್ದು, ಅದರಲ್ಲಿ ಜನರು ಎಸ್ ಅಥವಾ ನೋ ಎಂದು ಬರೆದು ಪೋಸ್ಟ್ ಮಾಡಲು ಅವಕಾಶ ನೀಡಲಾಗಿದೆ ಎಂದರು.

ಈ ಪ್ರಕ್ರಿಯೆಯಲ್ಲಿ ಭಾಗವಹಿಸುವ ಮತದಾರರಲ್ಲಿ ಅದೃಷ್ಟವುಳ್ಳ ಮೂರು ಮತದಾರರಿಗೆ ಲಕ್ಕಿ ಡಿಪ್ ಮೂಲಕ ವಿಶೇಷ ನಗದು ಬಹುಮಾನ ನೀಡಲಾಗುತ್ತದೆ. ನನ್ನ ಪ್ರಚಾರದ ವಿನೂತನ ಪ್ರಯತ್ನಕ್ಕೆ ಪಕ್ಷದ ಹಿರಿಯ ಮುಖಂಡರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದ ಅವರು, ಈ ಬಾರಿ ಕೊಡಗು–ಮೈಸೂರು ಲೋಕಸಭಾ ಕ್ಷೇತ್ರಕ್ಕೆ ಟಿಕೆಟ್ ನೀಡಿದರೆ, ಕಾಂಗ್ರೆಸ್ ಗೆದ್ದೆ ಗೆಲ್ಲುತ್ತೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿಯೊಂದಿಗಿನ ಮೈತ್ರಿ ಬಗ್ಗೆ ಸ್ಥಳೀಯ ಜೆಡಿಎಸ್ ಮುಖಂಡರಿಗೆ ಮಾಹಿತಿ ಇಲ್ಲ



ಮೈಸೂರಿನ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ಜೆಡಿಎಸ್ ಕಚೇರಿಯಲ್ಲಿ ಬುಧವಾರ ಜೆಡಿಎಸ್ ಕೋರ್ ಕಮಿಟಿ ಸಭೆ ನಡೆಸಲಾಯಿತು.

ಮೈಸೂರು, ಜ.10(ಜಿಎ)–ಮೈಸೂರು ನಗರ ಜಿಲ್ಲಾ ಜೆಡಿಎಸ್ ಕೋರ್ ಕಮಿಟಿ ಸಭೆಯಲ್ಲಿ ಬಿಜೆಪಿಯೊಟ್ಟಿಗೆ ಹೊಂದಾಣಿಕೆಯೊಂದಿಗೆ ಲೋಕಸಭಾ ಚುನಾವಣೆಯ ಸಿದ್ಧತೆ ಮಾಡಬೇಕೇ, ಬೇಡವೇ ಎಂಬ ಗೊಂದಲ ಉದ್ಭವವಾಯಿತು.

ನಗರದ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ಜೆಡಿಎಸ್ ಕಚೇರಿಯಲ್ಲಿ ಬುಧವಾರ ನಡೆದ ಕೋರ್ ಕಮಿಟಿ ಸಭೆಯಲ್ಲಿ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪಕ್ಷ ಸಂಘಟನೆ ಕುರಿತು ಮುಖಂಡರು ಚರ್ಚಿಸಿದರು.

ಈ ವೇಳೆ ಕೆಲವು ಮುಖಂಡರು ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಜೊತೆ ಹೊಂದಾಣಿಕೆ ಮಾಡಿಕೊಂಡು ಪಕ್ಷ ಸಂಘಟನೆ ಮಾಡೋಣ ಎಂದು ಹೇಳುತ್ತಿದ್ದಂತೆಯೇ ಮತ್ತೆ ಕೆಲ ಮುಖಂಡರು ಪಕ್ಷದ ವರಿಷ್ಠರಾದ ಹೆಚ್.ಡಿ. ದೇವೇಗೌಡರು, ಕುಮಾರಸ್ವಾಮಿ ಅವರು ಹೊಂದಾಣಿಕೆಯ ಬಗ್ಗೆ ಯಾವುದೇ ಆದೇಶವನ್ನು ನೀಡಿಲ್ಲ. ಅವರು ಆದೇಶಿಸುವವರೆಗೂ ಯಾವುದೇ ಹೊಂದಾಣಿಕೆ ಇಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಸಭೆ ಕರೆದಿರುವುದು ಕೇವಲ ಜೆಡಿಎಸ್ ಪಕ್ಷ ಮೈಸೂರಿನಲ್ಲಿ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಹೇಗೆ ಸಂಘಟಿಸಬೇಕು ಎಂದು ಚರ್ಚಿಸಲು ಅಷ್ಟೇ ಎಂದರು. ಸಭೆಯಲ್ಲಿ ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚಲುವೇಗೌಡ, ಮಾಜಿ ಮೇಯರ್‌ಗಳಾದ ಆರ್.ಲಿಂಗಪ್ಪ, ರವಿ, ಪಾಲಿಕೆ ಮಾಜಿ ಸದಸ್ಯರಾದ ಎಸ್‌ಬಿಎಂ ಮಂಜು, ಎಂ.ಶಿವಣ್ಣ ಮುಂಡರಾದ ರಮೇಶ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಭಾರತ ಈಗ ವಿಶ್ವ ಮಿತ್ರ, ಸ್ಥಿರತೆಯ ಆಧಾರಸ್ತಂಭ: ಪ್ರಧಾನಿ ಮೋದಿ



ಗಾಂಧಿನಗರ: ಜಾಗತಿಕ ಬೆಳವಣಿಗೆಯ ಎಂಜಿನ್ ಆಗಿರುವ ಭಾರತವನ್ನು ವಿಶ್ವಾಸಾರ್ಹ ಸ್ನೇಹಿತನಾಗಿ ಮತ್ತು ಸ್ಥಿರತೆಯ ಆಧಾರಸ್ತಂಭವಾಗಿ ಪರಿಗಣಿಸಲಾಗುತ್ತಿದೆ. ತಂತ್ರಜ್ಞಾನದ ಕೇಂದ್ರ ಹಾಗೂ ಪ್ರತಿಭಾವಂತ ಯುವ ಸಮೂಹದ ಶಕ್ತಿ ಕೇಂದ್ರವಾಗಿಯೂ ಭಾರತ ಹೊರಹೊಮ್ಮಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ವೈಬ್ರೆಂಟ್ ಗುಜರಾತ್ ಜಾಗತಿಕ ಸಮಾವೇಶದ 10ನೇ ಆವೃತ್ತಿಯನ್ನು ಉದ್ಘಾಟಿಸಿ ಮಾತನಾಡಿದರು. ಈಗ ಭಾರತ ವಿಶ್ವ ಮಿತ್ರನಾಗಿ ಮುಂಚೂಣಿಗೆ ಬರುತ್ತಿದೆ. ಇನ್ನು ಕೆಲವೇ ವರ್ಷಗಳಲ್ಲಿ ಅತೀ ದೊಡ್ಡ ಆರ್ಥಿಕತೆಯ ವಿಶ್ವದ ಮೂರು ಪ್ರಮುಖ ರಾಷ್ಟ್ರಗಳ ಸ್ಥಾನಕ್ಕೇರಲಿದೆ ಎಂದು ಪ್ರಮುಖ ಸಂಸ್ಥೆಗಳು ಹೇಳುತ್ತಿವೆ ಎಂದಿದ್ದಾರೆ.

ಇಡೀ ಜಗತ್ತು ಒಂದೇ ಗುರಿಯತ್ತ ಸಾಗುತ್ತಿರುವ ಹಾಗೂ ಅದನ್ನು ಸಾಕಾರಗೊಳಿಸುವ ಭರವಸೆಯನ್ನು ವಿಶ್ವಮಿತ್ರನಾಗಿರುವ ಭಾರತ ನೀಡುತ್ತಿದೆ. ಉತ್ತಮ ಸ್ನೇಹಿತ ಹಾಗೂ ಪ್ರಮುಖ ಆಧಾರಸ್ತಂಭವಾಗಿರುವ ಭಾರತವು ಜಗತ್ತಿನ ಹಿತದೃಷ್ಟಿಯಿಂದ ಜನಕೇಂದ್ರಿತ ಅಭಿವೃದ್ಧಿಯತ್ತ ತನ್ನ ಗಮನ ಹರಿಸಿದೆ ಎಂದು ಹೇಳಿದ್ದಾರೆ.

ಭಾರತ ಸ್ವಾತಂತ್ರ್ಯ ಪಡೆದ 75ನೇ ವರ್ಷಾಚರಣೆಯನ್ನು ಇತ್ತೀಚೆಗೆ ಆಚರಿಸಿದ್ದೇವೆ. ಮುಂದಿನ 25 ವರ್ಷಗಳಲ್ಲಿ ನಾವು 100 ವರ್ಷ ಪೂರೈಸಲಿದ್ದೇವೆ. ಮುಂದಿನ 25 ವರ್ಷಗಳು ಭಾರತದ ಪಾಲಿಗೆ ಅಮೃತ ಕಾಲ. ಈ ಅವಧಿಯಲ್ಲಿ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವ ಗುರಿಯನ್ನು ಹೊಂದಲಾಗಿದೆ ಎಂದರು. ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಝಾಯೆದ್ ಅಲ್ ನಹ್ಯಾನ್ ಸಮಾವೇಶದ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು.



ಜೆಸಿಓಎಂ ಮೈಸೂರು ಟೇಬಲ್ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು. ಚಿತ್ರದಲ್ಲಿ (ಎಡದಿಂದ) ಜೆಸಿಓಎಂ ಕೋಚ್ ಜೆ.ಸಿ.ಪ್ರೀತಂ ಶೆಣೈ, ಜೆಸಿಐ ಡೈರೆಕ್ಟರ್ ಬ್ಯುಸಿನೆಸ್ ಜೆ.ಸಿ.ಪ್ರಶಾಂತ್, ಜೆಸಿಐ ಜೋನ್ ಪ್ರೆಸಿಡೆಂಟ್ ಜೆಎಫ್‌ಎಂ ಆಶಾ ಜೈನ್, ಜೆಸಿಓಎಂ ಮೈಸೂರ್ ಟೇಬಲ್ 1.0 ಛೇರ್ಮನ್ ಹೆಚ್‌ಜಿಎಫ್ ಆರ್.ಅಶ್ವತ್ ಕುಮಾರ್, ನ್ಯಾಷನಲ್ ವೈಸ್ ಟ್ರೈನರ್ ಎಸ್‌ಎಂಎ ಕುಮಾರ್, ಜೆಸಿಐ ಇಂಡಿಯಾ ಸೆಕ್ರೆಟರಿ ಹೆಚ್‌ಜಿಎಫ್ ಕಾರ್ತಿಕ್ ಗಣಪತಿ, ಜೋನ್ ಛೇರ್ಮನ್ ಹೆಚ್‌ಜಿಎಫ್ ಉಲ್ಲಾಸ್ ಶಂಕರ್, ಪಾಸ್ಟ್ ಛೇರ್ಮನ್ ಹೆಚ್‌ಜಿಎಫ್ ಎಂ.ಎಲ್.ನಾಗೇಶ್, ಪಾಸ್ಟ್ ಸೆಕ್ರೆಟರಿ ಹೆಚ್‌ಜಿಎಫ್ ರವಿಕುಶಲ್ ಇದ್ದಾರೆ.

ಮೈಸೂರಲ್ಲಿ ಜ.16ರಂದು 'ಕುಕ್ಕರಹಳ್ಳಿ ಕೆರೆಗೆ ನೀರು' ಸಂವಾದ ಕಾರ್ಯಕ್ರಮ



ಮೈಸೂರು,ಜ.10(ಎಂಟಿವೈ)– ಮೈಸೂರಿನ ಕುಕ್ಕರಹಳ್ಳಿ ಕೆರೆಗೆ ಶುದ್ಧ ಮಳೆ ನೀರು ಹರಿದು ಬರಲು ಕೈಗೊಳ್ಳಬೇಕಾದ ಕ್ರಮ ಕುರಿತಂತೆ ಚರ್ಚಿಸಲು ಜ.16ರಂದು ಸಂಜೆ 4ರಿಂದ 6ರವರೆಗೆ ತಜ್ಞರೊಂದಿಗೆ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜಲತಜ್ಞ ಪ್ರೊ. ಯು.ಎನ್.ರವಿಕುಮಾರ್ ತಿಳಿಸಿದ್ದಾರೆ.

ಮಹಾರಾಜರ ಕಾಲದಲ್ಲಿ ಮೈಸೂರಿನ ಕೆರೆಗಳಿಗೆ ಶುದ್ಧ ಮಳೆ ನೀರು ಹರಿದು ಬರಲೆಂದು ಪೂರ್ಣಯ್ಯ ನಾಲೆಯನ್ನು ನಿರ್ಮಿಸಲಾಗಿತ್ತು ಆದರೆ, ಇತ್ತೀಚಿನ ವರ್ಷಗಳಲ್ಲಿ ಪೂರ್ಣಯ್ಯ ನಾಲೆಯನ್ನು ಒತ್ತುವರಿ ಮಾಡಿಕೊಳ್ಳಲಾಗಿದ್ದು, ಕೆರೆ ಗಳಿಗೆ ಮಳೆ ನೀರು ಸೇರದಂತಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನ ಜನತೆಗೆ ಪೂರ್ಣಯ್ಯ ನಾಲೆ 'ಅಂದು–ಇಂದು' ವಾಸ್ತವ ಸ್ಥಿತಿಯನ್ನು ತಿಳಿಸುವ ನಿಟ್ಟಿನಲ್ಲಿ ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ಜ.16ರಂದು ಸಂಜೆ 4ರಿಂದ 6ರವರೆಗೆ ಈ ಸಂವಾದ ನಡೆಯಲಿದೆ. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಗ್ರಾಹಕರ ಪರಿಷತ್, ವಾಟರ್ ಫೋರಂ ಮೈಸೂರು, ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್ ಸಂಸ್ಥೆಯ ಸಹಯೋಗದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಹಸಿರು ಪ್ರಾಧಿಕಾರದ ಅಧ್ಯಕ್ಷರು, ನ್ಯಾ.ಸುಭಾಷ್ ಬಿ.ಆಡಿ, ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಲತಜ್ಞ ಪ್ರೊ.ಯು. ಎನ್.ರವಿಕುಮಾರ್ ಸೇರಿದಂತೆ ತಜ್ಞರು ಪಾಲ್ಗೊಂಡು, ರಾಜಕಾಲುವೆ ರಕ್ಷಣೆಗೆ, ಒತ್ತುವರಿ ತೆರವು ಹಾಗೂ ಕುಕ್ಕರಹಳ್ಳಿ ಕೆರೆಗೆ ಮಳೆ ನೀರು ಹರಿದು ಬರಲು ಏನು ಮಾಡಬೇಕು ಎಂಬ ವಿಷಯದ ಬಗ್ಗೆ ಚರ್ಚಿಸಲಿದ್ದಾರೆ ಎಂದು ವಿವರಿಸಿದರು.

ನಾಳೆ ರಾಜ್ಯಮಟ್ಟದ ಸ್ಕೂಲ್ ಬ್ಯಾಂಡ್ ಸ್ಪರ್ಧೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಕ್ರೀಡಾ ಭಾರತಿ ಸಂಸ್ಥೆಯ ದಕ್ಷಿಣ ಭಾರತ ವಿಭಾಗದ ಕಾರ್ಯದರ್ಶಿ ಮಹೇಂದ್ರ ಪ್ರಸಾದ್ ಮಾತನಾಡಿದರು.

ಮೈಸೂರು,ಜ10(ಎಂಟಿವೈ)– ಮೈಸೂರಿನ ಯಾದವಗಿರಿಯಲ್ಲಿರುವ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಜ.12ರಂದು ಬೆಳಿಗ್ಗೆ 9ಕ್ಕೆ ಕ್ರೀಡಾ ಭಾರತಿ ಸಂಸ್ಥೆಯಿಂದ ರಾಜ್ಯಮಟ್ಟದ ಸ್ಕೂಲ್ ಬ್ಯಾಂಡ್ ಸ್ಪರ್ಧಾಕೂಟ ಆಯೋಜಿಸಲಾಗಿದೆ ಎಂದು ಸಂಸ್ಥೆಯ ದಕ್ಷಿಣ ಭಾರತ ವಿಭಾಗದ ಕಾರ್ಯದರ್ಶಿ ಮಹೇಂದ್ರ ಪ್ರಸಾದ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ರೀಡಾ ಭಾರತಿ ಸಂಸ್ಥೆಯಿಂದ ಆಯೋಜಿಸಿರುವ ಈ ಸ್ಕೂಲ್ ಬ್ಯಾಂಡ್ ಸ್ಪರ್ಧಾಕೂಟಕ್ಕೆ ರಾಜ್ಯದ ವಿವಿಧ ಭಾಗಗಳಿಂದ ಜಿಲ್ಲಾಮಟ್ಟದಲ್ಲಿ ವಿಜೇತರಾದ 15 ತಂಡಗಳು ಆಗಮಿಸಲಿವೆ. ಈ ಸ್ಪರ್ಧೆಯ ಸಾನಿಧ್ಯವನ್ನು ವಿದ್ಯಾಶಾಲೆಯ ಕರೆಸ್ಪಾಂಡೆಂಟ್ ಯುಕ್ತೇಶಾನಂದ ಸ್ವಾಮೀಜಿ ವಹಿಸಲಿದ್ದು, ಕ್ರೀಡಾ ಭಾರತಿ ಸಂಸ್ಥೆಯ ಕ್ಷೇತ್ರೀಯ ಸಂಯೋಜಕ ಎ.ಎನ್.ಅಶೋಕ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಎನ್‌ಸಿಸಿ 13ನೇ ಕರ್ನಾಟಕ ಬೆಟಾಲಿಯನ್ ಕಮಾಂಡಿಂಗ್ ಆಫೀಸರ್ ಕರ್ನಲ್ ಎಸ್.ಜೆ.ಎಸ್. ಸಾಂಧ್ರ, ಕರ್ನಾಟಕ ಪೊಲೀಸ್ ಬ್ಯಾಂಡ್ ತಂಡದ ಉಪಾಧ್ಯಾಯ ಆರ್.ಮೋಹನ್, ಸಂಸದ ಪ್ರತಾಪ ಸಿಂಹ ಇತರರು ಪಾಲ್ಗೊಳ್ಳಲಿದ್ದಾರೆ. ಸ್ಪರ್ಧೆಯಲ್ಲಿ ಉತ್ತಮ ಹತ್ತು ತಂಡಗಳಿಗೆ ಒಟ್ಟು 55 ಸಾವಿರ ರೂ. ನಗದು ಬಹುಮಾನ ನೀಡಲಾಗುತ್ತದೆ. ಪ್ರಥಮ ಸ್ಥಾನಕ್ಕೆ 10 ಸಾವಿರ ರೂ. ನಗದು ಹಾಗೂ ಟ್ರೋಫಿ ನೀಡಲಾಗುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಜಿಲ್ಲಾಧ್ಯಕ್ಷ ಅಮೃತ ಪುರೋಹಿತ್, ಕಾರ್ಯದರ್ಶಿ ಪ್ರಶಾಂತ್, ಮಹಿಳಾ ಘಟಕದ ಕಾರ್ಯದರ್ಶಿ ಕಾವ್ಯ, ಸದಸ್ಯ ಆನಂದ್ ಇದ್ದರು.

ಶ್ರೀ ಮಹಾಯೋಗಿ ವೇಮನ, ಶ್ರೀ ಅಂಬಿಗರ ಚೌಡಯ್ಯ ಜಯಂತಿಯ ಪೂರ್ವಭಾವಿ ಸಭೆ

ಮೈಸೂರು,ಜ.10–ಜ.19ರಂದು ಶ್ರೀ ಮಹಾಯೋಗಿ ವೇಮನ ಜಯಂತಿ ಹಾಗೂ ಜ.21ರಂದು ಶ್ರೀ ಅಂಬಿಗರ ಚೌಡಯ್ಯ ಜಯಂತಿಗಳನ್ನು ಆಚರಿಸಬೇಕಾಗಿದ್ದು, ಈ ಸಂಬಂಧ ಜ. 11ರಂದು ಸಂಜೆ 4.30 ಗಂಟೆಗೆ ಶ್ರೀ ಮಹಾಯೋಗಿ ವೇಮನ ಜಯಂತಿ ಹಾಗೂ ಸಂಜೆ 4.45 ಗಂಟೆಗೆ ಶ್ರೀ ಅಂಬಿಗರ ಚೌಡಯ್ಯ ಜಯಂತಿ ಪೂರ್ವಭಾವಿ ಸಭೆಯನ್ನು ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಿದ್ಧಾರ್ಥನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕರೆಯಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುದರ್ಶನ ಕ್ರಿಯೆ

ಮೈಸೂರು,ಜ.10–ಮೈಸೂರಿನ ಆರ್ಟ್ ಆಫ್ ಲಿವಿಂಗ್ ವತಿಯಿಂದ ಜ.16ರಿಂದ 20ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರವು ಬೆಳಗ್ಗೆ 6ರಿಂದ 8.30 ಹಾಗೂ ಸಂಜೆ 6ರಿಂದ 8.30ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ 9480476825 ಸಂಪರ್ಕಿಸಬಹುದು.

ಐಪಿಎಲ್ 2024 ಮಾರ್ಚ್ 22ರಿಂದ ಆರಂಭ!



ಮುಂಬೈ: ಕ್ರಿಕೆಟ್ ಪ್ರೇಮಿಗಳು ಕಾತರದಿಂದ ಕಾಯುತ್ತಿರುವ ಐಪಿಎಲ್ 2024 ಇನ್ನು ಕೆಲವೇ ದಿನಗಳಲ್ಲಿ ಆರಂಭವಾಗಲಿದೆ. ಟಾಟಾ ಐಪೆಲ್ 2024 ಮಾ.22 ರಿಂದ ಆರಂಭವಾಗಲಿದೆ ಎಂಬ ಮಾಹಿತಿ ಲಭ್ಯವಾಗಿದೆ. ದೈನಿಕ್ ಜಾಗರಣ್ ಪ್ರಕಾರ, ಮಾರ್ಚ್ 22ನ್ನು IPL 2024ರ ಆರಂಭದ ದಿನಾಂಕವಾಗಿ ನಿಗದಿಪಡಿಸಲಾಗಿದೆ. ಇದು ಮೇ ಅಂತ್ಯದವರೆಗೆ ವಿಸ್ತರಿಸುತ್ತದೆ ಎಂದು ತಿಳಿದುಬಂದಿದೆ. ಏಕಕಾಲೀನ ಸಾರ್ವತ್ರಿಕ ಚುನಾವಣೆಗಳಿಂದ ಐಪಿಎಲ್–2024 ವೇಳಾಪಟ್ಟಿಯ ಜಟಿಲತೆಗಳು ಹೆಚ್ಚಾಗುತ್ತವೆ. ಕಾರ್ಯದರ್ಶಿ ಜಯ್ ಶಾ ನೇತೃತ್ವದ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ, ಸಂಭಾವ್ಯ ಸವಾಲುಗಳನ್ನು ಎದುರಿಸಲು ಮತ್ತು ಪಂದ್ಯಾವಳಿಯನ್ನು ಸುಗಮವಾಗಿ ನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳಲು ಸರ್ಕಾರಿ ಘಟಕಗಳೊಂದಿಗೆ, ವಿಶೇಷವಾಗಿ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುತ್ತಿದೆ. ಕಳೆದ ತಿಂಗಳು ದುಬೈನಲ್ಲಿ ಆಯೋಜಿಸಲಾಗಿದ್ದ ಐಪಿಎಲ್ 2024ರ ಹರಾಜು ಪ್ರಕ್ರಿಯೆಯಲ್ಲಿ ದಾಖಲೆಯ ಮೊತ್ತಕ್ಕೆ ಆಟಗಾರರು ಬಿಕರಿಯಾಗಿದ್ದಾರೆ. ಆಸ್ಟ್ರೇಲಿಯಾದ ವೇಗಿ ಮಿಚೆಲ್ ಸ್ಟಾರ್ಕ್, ಐಪಿಎಲ್ ಇತಿಹಾಸದಲ್ಲಿ ಅತ್ಯಂತ ದುಬಾರಿ ಆಟಗಾರನಾಗುವ ಮೂಲಕ ಗಮನ ಸೆಳೆದರು.

ಸಾಧಕರಿಗಿಂತ ಲಾಬಿ ನಡೆಸುವವರಿಗೆ ಪ್ರಶಸ್ತಿಗಳು ಸಿಗುತ್ತಿವೆ!

ಹಿರಿಯ ಸಾಹಿತಿ ಬನ್ನೂರು ರಾಜು ಸತ್ಯ ವಾಕ್ಯ

ಮೈಸೂರು,ಜ.10(ಎಂಟಿವೈ)– ಪ್ರಸ್ತುತ ಸಂದರ್ಭದಲ್ಲಿ ಯಾವುದೇ ಪ್ರಶಸ್ತಿ ಪಡೆದುಕೊಳ್ಳಬೇಕಾದರೂ ಲಾಭಿ ನಡೆಸಬೇಕಾದ ದುಸ್ಥಿತಿ ಬಂದಿದ್ದು, ನಿದ್ರಾವಸ್ಥೆಗೆ ಜಾರಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಾಯಕಲ್ಪ ನೀಡಬೇಕಾಗಿದೆ ಎಂದು ಸಾಹಿತಿ ಬನ್ನೂರು ಕೆ.ರಾಜು ಅಸಮಾದಾನ ವ್ಯಕ್ತಪಡಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಕ್ಯಾಲೆಂಡರ್ ಬಿಡುಗಡೆ ಮತ್ತು ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಲಾಭಿಯಿಂದಾಗಿ ಇಂದು ಪ್ರಶಸ್ತಿಗಳು ಮೌಲ್ಯ ಕಳೆದುಕೊಳ್ಳುತ್ತಿವೆ. ಸಾಧಕರಿಗಿಂತ ಲಾಭಿ ಮಾಡುವವರಿಗೆ ಪ್ರಶಸ್ತಿ ಲಭಿಸುವಂತಾಗಿದೆ. ಇದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೇರಿದಂತೆ ಸರ್ಕಾರ ನೀಡುವ ಪ್ರಶಸ್ತಿಗಳು ಲಾಭಿದಾರರ ಪಾಲಾಗುತ್ತಿವೆ. ಈ ಕಾರಣದಿಂದ ಸರ್ಕಾರಿ ಪ್ರಶಸ್ತಿಗಳ ಮೌಲ್ಯಕ್ಕೆ ಧಕ್ಕೆಯಾಗುತ್ತಿದೆ. ಪ್ರಶಸ್ತಿ ಪಡೆಯಲು ಅರ್ಜಿ ಕರೆದು ಪ್ರಶಸ್ತಿಯ ಅರ್ಥವನ್ನೆ ಹಾಳು ಮಾಡಲಾಗಿದೆ. ಇಂತಹ ಸಂದರ್ಭದಲ್ಲಿ ಖಾಸಗಿ ಸಂಸ್ಥೆಗಳು ಪ್ರಾಮಾಣಿಕವಾಗಿ ಸಾಧಕರನ್ನು ಗುರುತಿಸಿ ಗೌರವಿಸುತ್ತಿರುವುದು ಶ್ಲಾಘನೀಯ ಎಂದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಬುಧವಾರ ನಡೆದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಬಸವ ಸೇವಾ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಡೆಯುವ ವಿವಿಧ ಮಹನೀಯರ ಜಯಂತಿ ಕಾರ್ಯಕ್ರಮವನ್ನು ಅಧಿಕಾರಿಗಳು ಭ್ರಷ್ಟಾಚಾರ ನಡೆಸುವುದಕ್ಕೆ ವೇದಿಕೆಯಾಗಿ ಮಾಡಿಕೊಂಡಿದ್ದಾರೆ. ಇಲಾಖೆಯಿಂದ ನಡೆಯುವ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಕಲಾವಿದರು, ಮುಖ್ಯ ಭಾಷಣಕಾರರಿಗೆ ನೀಡಬೇಕಾದ ಗೌರವ ಸಂಭಾವನೆ ಸರಿಯಾಗಿ ನೀಡುತ್ತಿಲ್ಲ. ಕಾರ್ಯಕ್ರಮದ ನಂತರ ಗೌರವ ಸಂಭಾವನೆ ಕೊಡುವುದಾಗಿ ನಿಗದಿತ ನಮೂನೆಯಲ್ಲಿ ಸಹಿ ಹಾಕಿಸಿಕೊಳ್ಳುತ್ತಾರೆ. ಆ ನಂತರ ಗೌರವಧನ ನೀಡದೆ ವಂಚಿಸಲಾಗುತ್ತಿದೆ. ನಾನು ಕೆಂಪೇಗೌಡ ಜಯಂತಿಯಲ್ಲಿ ಪ್ರಧಾನ ಭಾಷಣ ಮಾಡಿ 8 ತಿಂಗಳಾಯಿತು, ಇಂದಿಗೂ ಸಂಭಾವನೆ ನೀಡಿಲ್ಲ ಎಂದು ಆರೋಪಿಸಿದರು.

ಪ್ರಶಸ್ತಿ ಪ್ರಧಾನ: ಇದೇ ವೇಳೆ ಸಮಾಜ ಸೇವೆ ಪರಿಗಣಿಸಿ ಎಂ.ಪ್ರದೀಪ್ ಕುಮಾರ್, ಎಂ.ಪೂರ್ಣಿಮಾ, ಪ್ರಜ್ವಲ್ ರಾಮಣ್ಣ, ಜಿ.ಗೋಪಾಲ್, ಷಡಕ್ಷರಿ ಅವರಿಗೆ ಬಸವ ಸೇವಾ ಪ್ರಶಸ್ತಿ ಹಾಗೂ ಕೆ.ಲೀಲಾ ಪ್ರಕಾಶ್ ಮತ್ತು ಕೇಶವ್ ಪ್ರಕಾಶ್ ದಂಪತಿಗೆ ಸಾರ್ಥಕ ಶರಣ ದಂಪತಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದ ಸಾನ್ನಿಧ್ಯವನ್ನು ವಿಷ್ಣು ಸಾಲಿಗ್ರಾಮ ಗುರೂಜಿ ವಹಿಸಿದ್ದರು. ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಸಮಾಜ ಸೇವಕ ರಘುರಾಂ ವಾಜಪೇಯಿ, ಕನ್ನಡ ಸಾಹಿತ್ಯ ಕಲಾ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಚಿತ್ರನಟ ಸುಪ್ರೀತ್, ಚಿನ್ನಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಂಘದ ಟಿ.ಸುರೇಶ್ ಗೋಲ್ಡ್, ವಕೀಲ ಎಂ.ಸುನೀಲ್, ಪ್ರತಿಷ್ಠಾನದ ಸ್ಥಾಪಕ ಬಸವರಾಜೇಂದ್ರ ಸ್ವಾಮಿ ಪಾಲ್ಗೊಂಡಿದ್ದರು.

ಜಿಲ್ಲೆಯ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಪರಿಣತರಿಂದ ಅಭಿಪ್ರಾಯ ಸಂಗ್ರಹ: ಡಿಸಿ



ಮಂಡ್ಯ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಂಬಂಧ ಜಿಲ್ಲಾಧಿಕಾರಿ ಡಾ. ಕುಮಾರ್ ಸಭೆ ನಡೆಸಿದರು.

ಮಂಡ್ಯ, ಜ.10– ಜಿಲ್ಲೆಯಲ್ಲಿರುವ ಅನೇಕ ಪಾರಂಪರಿಕ, ಐತಿಹಾಸಿಕ, ಸಾಂಸ್ಕೃತಿಕ ತಾಣಗಳನ್ನು ಗುರುತಿಸಿ ಅಭಿವೃದ್ಧಿ ಪಡಿಸಲು ಜಿಲ್ಲಾಡಳಿತದಿಂದ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವ ಪರಿಣತರಿಂದ ವಿವರ ಪಡೆಯಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಅವರು ತಿಳಿಸಿದ್ದರು.

ಅವರು ಇಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಮಂಡ್ಯ ಜಿಲ್ಲೆಯ ಸಮಗ್ರ ಪ್ರವಾಸೋದ್ಯಮ ಅಭಿವೃದ್ಧಿ ಕುರಿತು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಾರ್ವಜನಿಕರನ್ನು ಆಕರ್ಷಣೆ ಮಾಡಲು ಪ್ರೇಕ್ಷಣೀಯ ಸ್ಥಳಗಳಲ್ಲಿ ಮೂಲ ಸೌಕರ್ಯಗಳನ್ನು ಒದಗಿಸಬೇಕು. ಸಾರಿಗೆ ವ್ಯವಸ್ಥೆ ಕಲ್ಪಿಸಬೇಕು. ಲಭ್ಯವಿರುವ ಅನುದಾನದಲ್ಲಿ ಉತ್ತಮ ರೀತಿಯಲ್ಲಿ ಅಭಿವೃದ್ಧಿ ಪಡಿಸಲು ಚಿಂತಿಸಲಾಗುತ್ತಿದೆ ಎಂದರು.

ಜಿಲ್ಲೆಯಲ್ಲಿರುವ ಪ್ರೇಕ್ಷಣೀಯ ಸ್ಥಳಗಳನ್ನೊಳಗೊಂಡ ವೆಬ್ ಸೈಟ್, ಭೂಪಟ, ಟೂರಿಸ್ಟ್ ಮಾಹಿತಿಯ ಪಾಕೆಟ್ ಡೈರಿ, ಪ್ರವಾಸಿ ತಾಣದ ಒಂದು ನಿಮಿಷದ ವಿಡಿಯೋ, ಬೆಂಗಳೂರು – ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಡ್ಯ ಪ್ರೇಕ್ಷಣೀಯ ಸ್ಥಳಗಳ ಫಲಕಗಳ ಅಳವಡಿಕೆಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ನಾಲ್ವಡಿ ಕೃಷ್ಣರಾಜ ಒಡೆಯರ್, ಚೋಳರು, ಹೊಯ್ಸಳರು, ಗಂಗರು ಹೀಗೆ ಅನೇಕ ಅರಸರುಗಳು ಕಟ್ಟಿದ ಪ್ರೇಕ್ಷಣೀಯ ಸ್ಥಳಗಳಿದ್ದು, ಅವುಗಳನ್ನು ಪುನಶ್ಚೇತನ ಮಾಡಿದರೆ ಜಿಲ್ಲೆಯ ಸಮಗ್ರ ಪ್ರವಾಸೋದ್ಯಮ ಅಭಿವೃದ್ಧಿ ಮಾಡಲು ನೆರವಾಗುತ್ತದೆ ಎಂದರು. ಜಿಪಂ ಸಿಇಒ ಶೇಖ್ ತನ್ವೀರ್ ಆಸಿಫ್ ಮಾತನಾಡಿ, ಪ್ರವಾಸೋದ್ಯಮ ಅಭಿವೃದ್ಧಿಗೆ ಸಂಬಂಧಿಸಿದಂತೆ ನರೇಗಾ ಯೋಜನೆಯಲ್ಲಿ ಸೇರಿಸಬಹುದಾದ ಕಾಮಗಾರಿಗಳ ಬಗ್ಗೆ ಚಿಂತಿಸಲಾಗುವುದು ಎಂದರು.

ಪ್ರವಾಸಿ ಸ್ಥಳಗಳಲ್ಲಿ ಉತ್ತಮ ಮಾಹಿತಿವುಳ್ಳ ಗೈಡ್‌ಗಳ ಅವಶ್ಯಕತೆ ಇದೆ. ಅವರಿಗೆ ಇಂಗ್ಲೀಷ್ ಸೇರಿದಂತೆ ವಿವಿಧ ಭಾಷೆಗಳ ಬಗ್ಗೆ ತಿಳಿದಿರಬೇಕು. ಮಂಡ್ಯ ಜಿಲ್ಲೆ ಕೃಷಿ ಆಧಾರಿತ ಜಿಲ್ಲೆಯಾಗಿದ್ದು, ಅಗ್ರಿ ಟೂರಿಸಂಗೆ ಚಿಂತಿಸಬಹುದು ಎಂದು ಮಳವಳ್ಳಿ ತಾಲೂಕು ಚುಕ್ಕಿಮನೆ ಹೋಂಸ್ಟೇ ಮಾಲೀಕರಾದ ಸಂಜಯ್ ಶಂಕರಪ್ಪ ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ಪ್ರವಾಸಿಗರನ್ನು ಆಕರ್ಷಿಸುವ ರೀತಿ ಭಾವಚಿತ್ರ ಹಾಗೂ ವಿಡಿಯೋಗಳನ್ನು ಸಾಮಾಜಿಕ ಜಾಲ ತಾಣಗಳಲ್ಲಿ ಅಪ್‌ಲೋಡ್ ಮಾಡಬೇಕು ಎಂದು ಪಾರಂಪರಿಕ ಸಂರಕ್ಷಣಾ ಉತ್ಸಾಹಿ ಸ್ವಾಮಿನಾಥನ್ ನಟರಾಜನ್ ಅವರು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ಇತಿಹಾಸ ಸಂಶೋಧಕ ಮಹಮ್ಮದ್ ಖಲೀಂ ಉಲ್ಲಾ ಅವರು, ಜಿಲ್ಲೆಯಲ್ಲಿ ವಿದ್ಯಾರ್ಥಿಗಳು ಪಠ್ಯದಲ್ಲಿ ಓದುವ ಚೋಳರು, ಹೊಯ್ಸಳರ ಕಾಲದ ಸ್ಮಾರಕಗಳಿವೆ. ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರವಾಸ ಕೈಗೊಳ್ಳುವಾಗ ಮೊದಲು ಜಿಲ್ಲೆಯ ಪ್ರವಾಸ ಕೈಗೊಳ್ಳಬೇಕು ಎಂದರು.

ಶ್ರೀರಂಗಪಟ್ಟಣದ ಗಣಂಗೂರು ನಂಜೇಗೌಡ ಮಾತನಾಡಿ, ಶ್ರೀರಂಗಪಟ್ಟಣದಲ್ಲಿ ಧಾರ್ಮಿಕ, ಪಾರಂಪರಿಕ ಹಾಗೂ ನೈಸರ್ಗಿಕವಾಗಿ ಆಕರ್ಷಿಸುವ ಸ್ಥಳಗಳಿವೆ. ಇಲ್ಲಿ ಒಂದು ದಿನದ ಪ್ರವಾಸ ಕೈಗೊಳ್ಳುವ ಬಗ್ಗೆ ಪ್ರವಾಸಿಗರಿಗೆ ಮಾಹಿತಿ ನೀಡಿ ಒಂದು ದಿನದ ಟೂರ್ ಪ್ಯಾಕೇಜ್ ನೀಡಬಹುದು. ಬಹಳಷ್ಟು ಪಾರಂಪರಿಕ ಸ್ಥಳಗಳು ನಶಿಸಿ ಹೋಗುವ ಹಂತ ತಲುಪಿದ್ದು, ಅವುಗಳ ಸಂರಕ್ಷಣೆಯಾಗಬೇಕು ಎಂದು ಭಾವಚಿತ್ರ ಸಮೇತ ವಿವರಿಸಿದರು.

ಸಭೆಯಲ್ಲಿ ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ಎಚ್.ಬಿ.ರಾಘವೇಂದ್ರ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕಿ ಎಚ್.ಎಸ್ ನಿರ್ಮಲಾ, ಹಿರಿಯ ಸಾಹಿತಿಗಳಾದ ತೈಲೂರು ವೆಂಕಟಕೃಷ್ಣ, ಪ್ರೊ. ಶಿವರಾಮ್, ಮೈಸೂರು ವಿಶ್ವವಿದ್ಯಾನಿಲಯದ ಪ್ರೊ. ಡಾ. ಪುಷ್ಪಾ ಹಾಗೂ ಇನ್ನಿತರು ಉಪಸ್ಥಿತರಿದ್ದರು.

ಸರ್ಕಾರಿ ಭೂಮಿ ಅಕ್ರಮ ಪರಬಾರೆ ಖಂಡಿಸಿ ಜೆಡಿಎಸ್, ಬಿಜೆಪಿ ಜಂಟಿ ಪ್ರತಿಭಟನೆ



ಮಳವಳ್ಳಿಯಲ್ಲಿ ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮಳವಳ್ಳಿ, ಜ.10– ತಾಲೂಕಿನಲ್ಲಿ ಸರ್ಕಾರಿ ಭೂಮಿ ಅಕ್ರಮ ಪರಭಾರೆ ಮಾಡಲಾಗಿದೆ ಎಂದು ಆರೋಪಿಸಿ ಜೆಡಿಎಸ್ ಹಾಗೂ ಬಿಜೆಪಿ ವತಿಯಿಂದ ಪಟ್ಟಣದ ತಾಲೂಕು ಕಚೇರಿ ಮುಂದೆ ಬುಧವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಮಾಜಿ ಶಾಸಕ ಡಾ.ಕೆ.ಅನ್ನದಾನಿ, ಈ ಅಕ್ರಮದಲ್ಲಿ ರಾಜಕಾರಣಿಗಳಿಂದ ಹಿಡಿದು ಅಧಿಕಾರಿಯವರೆಗೂ ಕೈವಾಡವಿದ್ದು ಸಮಗ್ರ ತನಿಖೆಯಾಗಬೇಕು. ಕೂಡಲೇ ಸಿಬಿಐಗೆ ಪ್ರಕರಣವನ್ನು ವಹಿಸಬೇಕು. ಮಳವಳ್ಳಿ ತಾಲೂಕಿನಾದ್ಯಂತ ವಿವಿಧ ಹೋಬಳಿಗಳ ಸರ್ವೆ ನಂಬರುಗಳಲ್ಲಿ ಸರ್ಕಾರಿ ಖರಾಬು, ಗೋಮಾಳ ಮುಂತಾದ ಸರ್ಕಾರಿ ಒಡೆತನದಲ್ಲಿರುವ ಆಸ್ತಿಯನ್ನು ಕರ್ನಾಟಕ ಸರ್ಕಾರದ ಭೂ ಕಂದಾಯ ನೀತಿ ನಿಯಮಗಳನ್ನು ಉಲ್ಲಂಘಿಸಿ ತಾಲೂಕು ಆಡಳಿತ ಕೆಲವು ಪ್ರಭಾವಿ ವ್ಯಕ್ತಿಗಳಿಗೆ ಖಾತೆ ಮಾಡಿದ್ದಾರೆ ಎಂದು ಆರೋಪಿಸಿದರು.

ಇಡೀ ತಾಲೂಕಿನಲ್ಲಿ ಭೂರಹಿತ ಕೃಷಿ ಕಾರ್ಮಿಕರು, ಅಲ್ಪ ಸ್ವಲ್ಪ ಜಮೀನು ಹೊಂದಿರುವ ಸಾವಿರಾರು ಬಡ ರೈತರು ಫಾರಂ ನಂ 53, 57ರಲ್ಲಿ ಅರ್ಜಿ ಸಲ್ಲಿಸಿ ಭೂಮಿಗಾಗಿ ಕಾಯುತ್ತಿದ್ದರೂ ತಾಲೂಕು ಆಡಳಿತ ಕ್ಯಾರೆ ಎನ್ನುತ್ತಿಲ್ಲ. ಬಡರೈತರ ಹಿತವನ್ನು ಕಾಯುವ ಬದಲು ತಾಲೂಕು ಆಡಳಿತ ಸ್ವ-ಹಿತಾಸಕ್ತಿ ಈಡೇರಿಕೆಗಾಗಿ ವಾಮಮಾರ್ಗ ಅನುಸರಿಸಿ ಪ್ರಭಾವಿಗಳಿಗೆ ಅಕ್ರಮ ಖಾತೆ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ಮಂಡ್ಯ ಉಪ ವಿಭಾಗಾಧಿಕಾರಿ ಶಿವಮೂರ್ತಿ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ತಾಲೂಕು ಜೆಡಿಎಸ್ ಅಧ್ಯಕ್ಷ ಹಾಗೂ ಕೆಎಂಎಫ್ ನಿರ್ದೇಶಕ ವಿಶ್ವನಾಥ್, ಜಿಲ್ಲಾ ಜೆಡಿಎಸ್ ಯುವ ಘಟಕದ ಅಧ್ಯಕ್ಷ ಕಂಸಾಗರ ರವಿ, ಬಿಜೆಪಿ ಹಿರಿಯ ಮುಖಂಡ ಯಮದೂರು ಸಿದ್ದರಾಜು, ಜೆಡಿಎಸ್ ಹಾಗೂ ಬಿಜೆಪಿ ಮುಖಂಡರಾದ ಕೃಷ್ಣ, ನಂದ ಕುಮಾರ್, ಪ್ರಶಾಂತ್, ನಾಗೇಶ್, ನೂರ್ ಉಲ್ಲಾ ಕುಮಾರ್, ಕಾಂತರಾಜು, ನಾಗರಾಜು, ಉಮೇಶ್, ಅಶೋಕ್, ಮೋಹನ್ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಅಕ್ರಮ ಮರಳು ಸಾಗಾಟ: ಲಾರಿ, ಮರಳು ವಶ

ಕೆ.ಆರ್.ಪೇಟೆ, ಜ.10– ತಾಲೂಕಿನ ಅಗ್ರಹಾರಬಾಚಹಳ್ಳಿ ಗೇಟ್ ಬಳಿ ಅಕ್ರಮ ಮರಳು ದಂಧೆಕೋರರ ಮೇಲೆ ತಹಸೀಲ್ದಾರ್ ಮತ್ತು ಪೊಲೀಸ್ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ತಹಸೀಲ್ದಾರ್ ನಿಸರ್ಗಪ್ರಿಯ, ಸರ್ಕಲ್ ಇನ್ಸ್‌ಪೆಕ್ಟರ್ ಸುಮಾರಾಣಿ ನೇತೃತ್ವದ ಅಧಿಕಾರಿಗಳ ತಂಡವು ಖಚಿತ ಮಾಹಿತ ಮೇರೆಗೆ ದಿಢೀರ್ ದಾಳಿ ನಡೆಸಿ, ಮರಳು ಸಮೇತ ಲಾರಿಯನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಅಧಿಕಾರಿಗಳ ದಾಳಿಯ ಸುಳಿವು ಅರಿತ ಮರಳು ದಂಧೆಕೋರರು ಬಿಟ್ಟು ಪರಾರಿಯಾಗಿದ್ದು, ಅಧಿಕಾರಿಗಳು ಲಾರಿ ಮಾಲೀಕ ರಾಯಸಮುದ್ರ ನವೀನ್ ವಿರುದ್ಧ ಅಕ್ರಮ ಮರಳು ಸಾಗಾಣಿಕೆ ಪ್ರಕರಣ ದಾಖಲಿಸಿದ್ದಾರೆ.

ಕರವೇ ಆಗ್ರಹ: ತಾಲೂಕಿನಲ್ಲಿ ಹೇಮಾವತಿ ನದಿ ಪಾತ್ರ, ಹಳ್ಳ, ತೊರೆಗಳಲ್ಲಿ ಅಕ್ರಮ ಮರಳು ದಂಧೆ ಜಾಸ್ತಿಯಾಗಿದೆ. ಇದರ ವಿರುದ್ಧ ತಾಲೂಕು ಆಡಳಿತ ಹಾಗೂ ಪೊಲೀಸರು ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದು ತಾಲೂಕು ಕರವೇ ಅಧ್ಯಕ್ಷ ಡಿ.ಎಸ್.ವೇಣು ಮತ್ತು ತಾಲೂಕು ಕರವೇ ಕಾರ್ಯದರ್ಶಿ ಟೆಂಪೋ ಶ್ರೀನಿವಾಸ್ ಆಗ್ರಹಿಸಿದ್ದಾರೆ.

ಹಿರಿಯ ಪತ್ರಕರ್ತ ನಾಗಸುಂದರ್‌ಗೆ ಮಾತೃ ವಿಯೋಗ



ಪಾಂಡವಪುರ, ಜ.10– ಪಟ್ಟಣದ ಕೃಷ್ಣಾನಗರ ಬಡಾವಣೆಯ ನಿವಾಸಿ, ಹಿರಿಯ ಪತ್ರಕರ್ತ ಎಸ್.ನಾಗಸುಂದರ್ ಅವರ ತಾಯಿ ಕಮಲಮ್ಮ(85) ಅವರು ಭಾನುವಾರ ನಿಧನ ಹೊಂದಿದರು. ಮೃತರು ಪುತ್ರರಾದ ಎಸ್.ನಾಗಸುಂದರ್, ರವಿಕುಮಾರ್ ಹಾಗೂ ಪುತ್ರಿ ರೇಣುಕ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ಪಾಂಡವಪುರ ಪಟ್ಟಣದಲ್ಲಿ ಜರುಗಿತು.

ಸಂತಾಪ: ಮೃತರ ನಿಧನಕ್ಕೆ ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಸುನೀತಾಪುಟ್ಟಣ್ಣಯ್ಯ, ಖ್ಯಾತ ಹೃದಯರೋಗ ತಜ್ಞ ಡಾ.ಲಕ್ಷ್ಮೀಗೌಡ, ಮನ್‌ಮುಲ್ ನಿರ್ದೇಶಕ ಕಾಡೇನಹಳ್ಳಿ ರಾಮಚಂದ್ರ, ಟಿಎಪಿಸಿಎಂಎಸ್ ಅಧ್ಯಕ್ಷ ಡಿ.ಶ್ರೀನಿವಾಸ್, ನಿರ್ದೇಶಕ ರಾಮಕೃಷ್ಣೇಗೌಡ, ಜಾ.ದಳ ತಾಲೂಕು ಅಧ್ಯಕ್ಷ ಮಲ್ಲೇಶ್, ರೈತ ಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ, ಜಿಪಂ ಮಾಜಿ ಸದಸ್ಯ ಕೆ.ಟಿ.ಗೋವಿಂದೇಗೌಡ, ದಯಾನಂದ, ಪಿಎಸ್‌ಎಸ್‌ಕೆ ಉಪಾಧ್ಯಕ್ಷ ಎಚ್.ಎಲ್. ಪ್ರಕಾಶ್, ವೀರಶೈವ ಮುಖಂಡರಾದ ಅಮೃತಿ ರಾಜಶೇಖರ್, ದ್ಯಾವಪ್ಪ, ಕೆ.ಎಲ್. ಆನಂದ್ ಮುಂತಾದ ಗಣ್ಯರು ಮೃತರ ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದರು.

ವಿದ್ಯುತ್ ಶಾಕ್‌ನಿಂದ ರೈತ ಸಾವು

ನಾಗಮಂಗಲ, ಡಿ.10– ವಿದ್ಯುತ್ ತಂತಿಯೊಂದು ತುಂಡಾಗಿ ರೈತನ ಮೇಲೆ ಬಿದ್ದ ಪರಿಣಾಮ ರೈತ ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ತಾಲೂಕಿನ ಹಳಿಸಂದ್ರ ಗ್ರಾಮದಲ್ಲಿ ಜರುಗಿದೆ.

ಗ್ರಾಮದ ನಂಜೇಗೌಡ (50) ಎಂಬ ರೈತನೇ ಮೃತ ವ್ಯಕ್ತಿಯಾಗಿದ್ದು, ಇಂದು ಬೆಳಗ್ಗೆ ಗದ್ದೆಗೆ ಹೋಗಿದ್ದ ವೇಳೆ ವಿದ್ಯುತ್ ತಂತಿ ತುಂಡಾಗಿ ರೈತನ ಮೇಲೆ ಬಿದ್ದಿದೆ.

ಸ್ಥಳದಲ್ಲೇ ರೈತ ನಂಜೇಗೌಡ ಸಾವನ್ನಪ್ಪಿದ್ದು, ಸ್ಥಳಕ್ಕೆ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಬಿಂಡಿಗನವಿಲೇ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಟಿಕೆಟ್ ಕೊಡಿ ಅಜ್ಜಿ' ಎಂದಿದ್ದಕ್ಕೆ ವಿದ್ಯಾರ್ಥಿನಿಗೆ ಕಪಾಳಮೋಕ್ಷ

ಮಹಿಳಾ ಕಂಡಕ್ಟರ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ



ಮಹಿಳಾ ಕಂಡಕ್ಟರ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಭಾರತೀನಗರದಲ್ಲಿ ಮಹಿಳಾ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದರು.

ಭಾರತೀನಗರ, ಜ.10– ಕೆ.ಎಂ.ದೊಡ್ಡಿಯಿಂದ ಮಂಡ್ಯಕ್ಕೆ ಚಲಿಸುತ್ತಿದ್ದ ಸಾರಿಗೆ ಬಸ್‌ನಲ್ಲಿ ಅಜ್ಜಿ ಟಿಕೆಟ್ ಕೊಡಿ ಎಂದು ಕೇಳಿದ್ದಕ್ಕೆ ಕೆರಳಿದ ಮಹಿಳಾ ಕಂಡಕ್ಟರ್ ವಿದ್ಯಾರ್ಥಿನಿಗೆ ಕಪಾಳಮೋಕ್ಷ ಮಾಡಿರುವ ಘಟನೆ ನಡೆದಿದೆ.

ಮಂಡ್ಯ ಡಿಪೋದ ಕೆಎ–40 ಎಫ್–1195 ಸಾರಿಗೆ ಬಸ್ ಭಾರತೀನಗರದಿಂದ ಮಂಡ್ಯಕ್ಕೆ ಚಲಿಸುತ್ತಿದ್ದ ವೇಳೆ ವಿದ್ಯಾರ್ಥಿನಿ ಕಾವ್ಯಶ್ರೀ(15) ಕಂಡಕ್ಟರ್ ಸೌಭಾಗ್ಯರನ್ನು 'ಟಿಕೆಟ್ ಕೊಡಿ ಅಜ್ಜಿ' ಎಂದು ಕೇಳಿದ್ದು, ಇದರಿಂದ ಮಹಿಳಾ ಕಂಡಕ್ಟರ್ ಕಪಾಳ ಮೋಕ್ಷ ಮಾಡಿದ್ದಾರೆ ಎಂದು ಜನವಾದಿ ಮಹಿಳಾ ಸಂಘಟನೆಯ ಅಧ್ಯಕ್ಷೆ ಡಿ.ಕೆ.ಲತಾ ತಿಳಿಸಿದ್ದಾರೆ.

ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯ ಎದುರು ಜನವಾದಿ ಮಹಿಳಾ ಸಂಘಟನೆಯ ಪದಾಧಿಕಾರಿಗಳು ಕಂಡಕ್ಟರ್ ಸೌಭಾಗ್ಯ ಅವರ ವಿರುದ್ಧ ಎಫ್‌ಐಆರ್ ದಾಖಲು ಮಾಡಿ ಕಾನೂನು ಕ್ರಮಕೈಗೊಳ್ಳಬೇಕು. ಇಲ್ಲದಿದ್ದಲ್ಲಿ ಉಗ್ರ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಕನ್ನಡ ಸಾಹಿತ್ಯ ಪರಿಷತ್‌ನ ತಾಲೂಕು ಅಧ್ಯಕ್ಷ ಟಿ.ಸಿ.ವಸಂತಮ್ಮ ಮಾತನಾಡಿ, ವಿದ್ಯಾರ್ಥಿನಿಯ ಮೇಲೆ ಕೈ ಮಾಡಿರುವುದು ಅಕ್ಷಮ್ಯ ಅಪರಾಧ. ಇದು ಮುಂದಿನ ದಿನಗಳಲ್ಲಿ ಎಲ್ಲ ಕಂಡಕ್ಟರ್‌ಗಳಿಗೂ ಮನದಟ್ಟಾಗಬೇಕು. ಆ ವಿದ್ಯಾರ್ಥಿಯ ಎಡಕಿವಿ ಸರಿಯಾಗಿ ಕೇಳಿಸುತ್ತಿಲ್ಲ. ಆಸ್ಪತ್ರೆಯ ದಾಖಲಾತಿ ಪ್ರಕಾರ ಎಡಕಿವಿ ಶೇ.60ರಷ್ಟು ಸಮಸ್ಯೆ ಇದೆ. ಹಾಗಾಗಿ ಆಕೆಗೆ ನ್ಯಾಯ ಒದಗಿಸಿಕೊಡಬೇಕು. ಇಲ್ಲವಾದಲ್ಲಿ ಮಂಡ್ಯ ಡಿಪೋದಿಂದ ಬರುವ ಸಾರಿಗೆ ಬಸ್‌ಗಳನ್ನು ಕೆ.ಎಂ.ದೊಡ್ಡಿಯಲ್ಲಿ ಅಡ್ಡಗಟ್ಟಿ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಸಮತಾ ಸೈನಿಕ ದಳದ ಜಿಲ್ಲಾಧ್ಯಕ್ಷ ಕರಡಕೆರೆ ಯೋಗೇಶ್, ರವಿ, ವಕ್ರತುಂಡ ವೆಂಕಟೇಶ್, ಕೆ.ಸಿ. ಪದ್ಮಾ, ಚಂದ್ರಕಲಾ, ಭಾಗ್ಯವತಿ, ಜೈಶೀಲ, ರವಿಪ್ರಸಾದ್, ಸುರೇಶ್, ಚಿಕ್ಕಸ್ವಾಮಿ, ರುದ್ರಯ್ಯ ಇತರರಿದ್ದರು.

ವಿವಿಧ ಪದವಿ, ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ

ಒಂದನೇ ಪುಟದಿಂದ

ನಿವೃತ್ತ ನಿರ್ದೇಶಕ ಡಾ. ಸಿ.ರಾಮಚಂದ್ರ (ರಾಜ್ಯೋತ್ಸವ ಪ್ರಶಸ್ತಿ), ಮೈಸೂರು ವಿವಿ ಪ್ರಸಾರಾಂಗದ ನಿವೃತ್ತ ನಿರ್ದೇಶಕ ಪ್ರೊ. ಸಿ.ನಾಗಣ್ಣ (ರಾಜ್ಯೋತ್ಸವ ಪ್ರಶಸ್ತಿ) ಅವರನ್ನು ಶ್ರೀಗಳು ಸನ್ಮಾನಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪುರಸ್ಕೃತರಾದ ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಅವರು ಕಾರ್ಯಕ್ರಮ ಆರಂಭಕ್ಕೂ ಮುನ್ನವೇ ಮಠಕ್ಕೆ ಭೇಟಿ ನೀಡಿ ಶ್ರೀಗಳಿಂದ ಆಶೀರ್ವಾದ ಪಡೆದು ಸನ್ಮಾನ ಸ್ವೀಕರಿಸಿ, ತುರ್ತು ಕಾರ್ಯ ನಿಮಿತ್ತ ನಿರ್ಗಮಿಸಿದರು. ಇದೇ ಸಂದರ್ಭದಲ್ಲಿ ಜ್ಯೋತಿಷಿ ಡಾ. ಕೆ.ಜಿ.ಪುಟ್ಟಹೊನ್ನಯ್ಯ ಸಿದ್ಧಪಡಿಸಿ, ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರದಿಂದ ಪ್ರಕಟಿಸಲ್ಪಟ್ಟ ಶ್ರೀ ಕ್ರೋಧಿ ಸಂವತ್ಸರದ 'ಸುತ್ತೂರು ಶಿವರಾತ್ರೀಶ್ವರ ಪಂಚಾಂಗ', ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕನ್ನಡ ಮತ್ತು ಇಂಗ್ಲೀಷ್ ಕ್ಯಾಲೆಂಡರ್ ಹಾಗೂ ಶ್ರೀ ಚೈತನ್ಯ ಶಾಲೆಯ ವಿದ್ಯಾರ್ಥಿನಿ ಕೆ.ನೇತ್ರ ಪರ್ಲ್‌ಸನ್ ಅವರು ರಚಿಸಿರುವ 'ಒನ್ ಮೈಂಡ್ ಗೇಮ್' ಕೃತಿ ಬಿಡುಗಡೆಗೊಳಿಸಲಾಯಿತು.


ಇದಕ್ಕೂ ಮುನ್ನ ಆಕರ್ಷಕ ಕಲಾ ತಂಡಗಳೊಂದಿಗೆ ವಿವಿಧ ಮಠಗಳ ಮಠಾಧೀಶರು, ಹರಗುರು ಚರಮೂರ್ತಿಗಳನ್ನು ಅಲಂಕೃತ ಸಾರೋಟ್‌ನಲ್ಲಿ ಗದ್ದುಗೆಯಿಂದ ಶ್ರೀಮಠಕ್ಕೆ ಮೆರವಣಿಗೆ ಮೂಲಕ ಕರೆದೊಯ್ಯಲಾಯಿತು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಸೋಮ ಶೇಖರ್ ಅಧ್ಯಕ್ಷತೆ ವಹಿಸಿದ್ದರು.



ಆಕರ್ಷಕ ಕಲಾ ತಂಡಗಳೊಂದಿಗೆ ಅಲಂಕೃತ ಸಾರೋಟ್‌ನಲ್ಲಿ ಸುತ್ತೂರು ಶ್ರೀ ಕ್ಷೇತ್ರದಲ್ಲಿ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಮೂರ್ತಿಯನ್ನು ಗದ್ದುಗೆಯಿಂದ ಶ್ರೀಮಠಕ್ಕೆ ಮೆರವಣಿಗೆ ಮೂಲಕ ಕೊಂಡೊಯ್ಯಲಾಯಿತು. ವಿವಿಧ ಮಠಗಳ ಮಠಾಧೀಶರು, ಹರಗುರು ಚರಮೂರ್ತಿಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪುರಸ್ಕೃತ ಮಾಜಿ ಕ್ರಿಕೆಟ್ ತಾರೆ ಜಾವಗಲ್ ಶ್ರೀನಾಥ್ ಅವರನ್ನು ಕಾರ್ಯಕ್ರಮಕ್ಕೆ ಮುನ್ನವೇ ಸುತ್ತೂರು ಶ್ರೀಗಳು ಸನ್ಮಾನಿಸಿದರು. ತುರ್ತು ಕಾರ್ಯನಿಮಿತ್ತ ಶ್ರೀನಾಥ್ ಶ್ರೀಗಳ ಆಶೀರ್ವಾದ ಪಡೆದು ತೆರಳಿದರು.



ತೋಂಟದಾರ್ಯ ನಿಜಗುಣಾನಂದ ಸ್ವಾಮೀಜಿ ಹಾಗೂ ಡಾ.ಕೆ.ಬಿ.ಗಣಪತಿಯವರ ಸಮಾಲೋಚನೆಯನ್ನು ಗಮನಿಸುತ್ತಿರುವ ಹಿರಿಯ ಛಾಯಾಗ್ರಾಹಕ ಪತ್ರಕರ್ತ ಜಂಭುಕೇಶ್ವರ್

ಮನುಕುಲದ ಉದ್ಧಾರವೇ ಸುತ್ತೂರು ಶ್ರೀಕ್ಷೇತ್ರದ ಧ್ಯೇಯವಾಗಿದೆ...

ಸಂದರ್ಭಗಳಲ್ಲಿ ಯೋಚನೆ ಮಾಡಿ, ನಾಳೆ ಹೇಳುತ್ತೇವೆ ಎಂಬುದು ಇರಬಾರದು. ಕೆಲವು ಸಂದರ್ಭದಲ್ಲಿ ತನ್ನಿಂದ ತಾನೇ ಅಂತರಾತ್ಮದಿಂದ ಸಹಾಯ ಮಾಡುವ ಗುಣ ಬರಬೇಕು. ಅದು ಶಿವರಾತ್ರಿ ದೇಶಿಕೇಂದ್ರ ಶ್ರೀಗಳಲ್ಲಿದೆ. ಜೀತದಾಳು ಪ್ರಕರಣದ ಬಗ್ಗೆ ಪತ್ರಿಕೆ ಹಾಗೂ ಟಿವಿಗಳಲ್ಲಿ ಪ್ರಸಾರವಾದ ತಕ್ಷಣ ಶ್ರೀಗಳ ಮನಸ್ಸು ಸಂಕಷ್ಟಕ್ಕೀಡಾದವರ ಮಕ್ಕಳ ಬಗ್ಗೆ ಯೋಚಿಸಿತ್ತು ಎಂದರು.

ಭಗವದ್ಗೀತೆಯ ಧರ್ಮಶಾಸ್ತ್ರದಲ್ಲಿ ಶ್ರೀಕೃಷ್ಣನ ಬಗ್ಗೆ ಬರುವ ವಿಚಾರವೊಂದನ್ನು ಪ್ರಸ್ತಾಪಿಸಿದ ಗಣಪತಿಯವರು, ಶ್ರೀಕೃಷ್ಣನ ಸಾಕುತಂದೆ ನಂದಗೋಕುಲ ಮತ್ತು ಸಾಕುತಾಯಿ ಯಶೋಧೆ ಅವರು ಚಿಕ್ಕ ಹುಡುಗ ಶ್ರೀಕೃಷ್ಣನಿಗೆ ಊಟ ಮಾಡಿಸುತ್ತಿರುತ್ತಾರೆ. ಆಗ ಇದ್ದಕ್ಕಿದ್ದಂತೆ ಶ್ರೀಕೃಷ್ಣ ಎದ್ದು ಹೊರಗೆ ಓಡುತ್ತಾನೆ. ತಕ್ಷಣ, ಮಗು ಏನು ಮಾಡುತ್ತಿದ್ದಾನೆ ಎಂದು ತಂದೆ–ತಾಯಿ ಬಂದು ನೋಡಿದಾಗ ಆತ ಒಂದು ಕಲ್ಲನ್ನು ಎತ್ತಿಕೊಂಡಿದ್ದು, ಸ್ವಲ್ಪ ಸಮಯದ ನಂತರ ಅದನ್ನು ಕೆಳಗೆ ಬಿಸಾಕಿ ಮತ್ತೆ ಊಟ ಮಾಡಲು ಬರುತ್ತಾನೆ. ಊಟ ಬಿಟ್ಟು ಹೊರಗೆ ಹೋಗಿ ಕಲ್ಲು ಎತ್ತಿಕೊಂಡಿದ್ದು ಯಾಕೆ? ಎಂದು ತಂದೆ–ತಾಯಿ ಕೇಳಿದಾಗ, 'ನನ್ನ ಭಕ್ತ ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿದ್ದ. ಕೆಲವರು ಅವನಿಗೆ ಹೊಡೆಯುತ್ತಿದ್ದರು. ಅವನು ನನ್ನನ್ನು ನೆನೆಸಿಕೊಂಡ. ನಾನು ಅವನಿಗೆ ಸಹಾಯ ಮಾಡಲು ಹೋದೆ. ಆದರೆ ಅವನೇ ಆ ಕಷ್ಟವನ್ನು ಪರಿಹಾರ ಮಾಡಿಕೊಂಡ' ಎಂದು ಶ್ರೀಕೃಷ್ಣ ಹೇಳುತ್ತಾನೆ. ಅದೇ ರೀತಿ ಸುತ್ತೂರು ಶ್ರೀ ಕ್ಷೇತ್ರವು ಯಾರು ಕೇಳಲಿ, ಬಿಡಲಿ ಸಂಕಷ್ಟದಲ್ಲಿರುವವರ ರಕ್ಷಣೆಗೆ ಸದಾ ಕಾಲ ನಿಲ್ಲುತ್ತದೆ ಎಂದರು.

ನನಗೆ ಸುತ್ತೂರು ಶ್ರೀಗಳು ನೀಡಿರುವ ಅಭಿನಂದನೆ ಹಾಗೂ ಗೌರವ ಇದು ಎರಡನೆಯದು. ಹಿಂದೆ ಮೈಸೂರು ವಿಶ್ವವಿದ್ಯಾಲಯ ನನಗೆ ಗೌರವ ಡಾಕ್ಟರೇಟ್ ಕೊಟ್ಟ ಕೆಲವೇ ದಿನಗಳಲ್ಲಿ ಶ್ರೀಗಳ ಆಶ್ರಯ ಹಾಗೂ ಅಣತಿಯಂತೆ ಶ್ರೀಮಠದಿಂದ ಅವರ ಶಿಷ್ಯರು ನಮ್ಮ ಮನೆಗೇ ಬಂದು ಅಭಿನಂದನೆ ಸಲ್ಲಿಸಿದರು. ಅದಕ್ಕಾಗಿ ನಾನು ಮತ್ತು ನನ್ನ ಕುಟುಂಬದವರು ತುಂಬಾ ಧನ್ಯವಾದ ಅರ್ಪಿಸುತ್ತೇವೆ. ಎರಡನೆಯ ಗೌರವ ಎಂದರೆ ಅತ್ಯಂತ ವಿಶೇಷ ಹಾಗೂ ಮಹತ್ವದ್ದು. ಕಾರಣ ನಾನು ಇದನ್ನು ಸ್ವೀಕರಿಸುತ್ತಿರುವುದು ಪವಿತ್ರವಾದ ಶ್ರೀಮಠದಲ್ಲಿ, ಅದು ಶ್ರೀಗಳ ಸಮ್ಮುಖದಲ್ಲಿ. ಸಾವಿರಾರು ವರ್ಷ ಇತಿಹಾಸವುಳ್ಳ ಶ್ರೀಮಠದ ಪುಣ್ಯ ನೆಲವನ್ನು ಅನೇಕ ಋಷಿ–ಮುನಿಗಳು, ಸಾಧು–ಸಂತರು ತಮ್ಮ ಪಾದ ಸ್ಪರ್ಶದಿಂದ, ತಮ್ಮ ತಪಸ್ಸಿನ ಆಧ್ಯಾತ್ಮಿಕ ಶಕ್ತಿಯಿಂದ ಪಾವನಗೊಳಿಸಿದ್ದಾರೆ. ಈ ಕಾರಣಕ್ಕಾಗಿಯೇ ಶ್ರೀಮಠದ ವತಿಯಿಂದ ಅನೇಕ ರೀತಿಯ ಲೌಕಿಕ ಹಾಗೂ ಪಾರಮಾರ್ಥಿಕ ಕಾರ್ಯಕ್ರಮಗಳು ಭಕ್ತ ಜನರ ಸುಖ–ಶಾಂತಿ, ಅಭ್ಯುದಯಕ್ಕೆ ನಾಂದಿಯಾಗಿದೆ. ಇಂತಹ ಪವಿತ್ರ ಕ್ಷೇತ್ರದಲ್ಲಿ ನಿಮ್ಮೆಲ್ಲರ ಸಮಕ್ಷಮದಲ್ಲಿ ಈ ಗೌರವ ಸ್ವೀಕರಿಸುತ್ತಿರುವುದು ನನ್ನ ಸೌಭಾಗ್ಯವಾಗಿದ್ದು, ಅದಕ್ಕಾಗಿ ಸ್ವಾಮೀಜಿಗಳಿಗೆ ಮತ್ತೊಮ್ಮೆ ಧನ್ಯವಾದ ಅರ್ಪಿಸುತ್ತೇನೆ ಎಂದರು.

ಪತ್ರಿಕೋದ್ಯಮ ಕ್ಷೇತ್ರದ ನನ್ನ 50 ವರ್ಷಗಳ ಸುದೀರ್ಘ ಪಯಣದಲ್ಲಿ ನನಗೆ ಕೆಲವು ಪ್ರಶಸ್ತಿಗಳು, ಗೌರವಗಳು ಈ ಮೊದಲು ಸಂದಿರುವುದು ನಿಜ. ಅವುಗಳೆಲ್ಲವೂ ನಿರೀಕ್ಷಿಸದೇ ಬಂದಂತಹುಗಳು. ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯ ನನಗೆ ನೀಡಿದ ಗೌರವ ಡಾಕ್ಟರೇಟ್ ಸಹ ನಿಜವಾಗಿಯೂ ನನ್ನ ನಿರೀಕ್ಷೆಗೆ ಮೀರಿದ್ದು. ಈ ಪದವಿ ನನಗೆ ಅತೀವ ಸಂತೋಷ ಮತ್ತು ಹೆಮ್ಮೆಯನ್ನು ತಂದಿದೆ ಎಂದು ಗಣಪತಿಯವರು ಹೇಳಿದರು.

ಭವಿಷ್ಯ ನಿಧಿ ಚಂದಾದಾರ ಖಾತೆಗೆ ಪ್ರತಿ ತಿಂಗಳ ಕೊನೆಯ ದಿನ ಬಡ್ಡಿ ಜಮೆ ನಿರ್ಧಾರ ಹಿಂದಕ್ಕೆ

ಮೈಸೂರು, ಜ.10(ಎಸ್‌ಪಿಎನ್)– ರಾಜ್ಯದಲ್ಲಿ ಸಾಮಾನ್ಯ ಭವಿಷ್ಯ ನಿಧಿ ಚಂದಾದಾರರ ಖಾತೆಗೆ ಬಡ್ಡಿಯನ್ನು ವಾರ್ಷಿಕ ಆರ್ಥಿಕ ವರ್ಷದ ಕೊನೆಯ ದಿನದಂದು ಜಮೆ ಮಾಡುವ ಬದಲು, ಪ್ರತಿ ತಿಂಗಳ ಕೊನೆಯ ದಿನದಂದು ಜಮೆ ಮಾಡುವಂತೆ 2023ರಲ್ಲಿ ಆದೇಶಿಸಿದ್ದ ಸುತ್ತೋಲೆಯನ್ನು ಹಿಂಪಡೆಯಲಾಗಿದೆ ಎಂದು ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು) ಯ ಅಧೀನ ಕಾರ್ಯದರ್ಶಿ ನೇತ್ರಪ್ರಭಾ ಎಂ.ಧಾಯಪುಲೆ ತಿಳಿಸಿದ್ದಾರೆ.

ಸರ್ಕಾರದ ಆದೇಶದಂತೆ ರಾಜ್ಯದಲ್ಲಿ ಸಾಮಾನ್ಯ ಭವಿಷ್ಯ ನಿಧಿ ಚಂದಾದಾರರ ಖಾತೆಗೆ ಬಡ್ಡಿಯನ್ನು ವಾರ್ಷಿಕವಾಗಿ ಆರ್ಥಿಕ ವರ್ಷದ ಕೊನೆಯ ದಿನದಂದು ಜಮೆ ಮಾಡುವ ಬದಲು ಪ್ರತಿ ತಿಂಗಳ ಕೊನೆಯ ದಿನ ಜಮೆ ಮಾಡುವಂತೆ ಆದೇಶಿಸಲಾಗಿತ್ತು. ಆದರೆ, ಸಾಮಾನ್ಯ ಭವಿಷ್ಯ ನಿಧಿ ಖಾತೆಯ ಚಂದಾದಾರರ ಖಾತೆಗಳಿಗೆ ಮಾಸಿಕ ನೇರವಾಗಿ ಬಡ್ಡಿಯನ್ನು ಜಮಾ ಮಾಡುವುದರಿಂದ ಹೆಚ್ಚಿನ ಬಡ್ಡಿಯ ಪಾವತಿಗೆ ಕಾರಣವಾಗುವುದು. ಇದು ಒಟ್ಟಾರೆ ಬಡ್ಡಿ ಪಾವತಿಯಲ್ಲಿ ಹೆಚ್ಚಳವಾಗುತ್ತಿದೆ. ಈ ನಿರ್ಧಾರದಿಂದ ಸರ್ಕಾರದ ಬೊಕ್ಕಸದಿಂದ ಹೆಚ್ಚುವರಿ ಹಣದ ಹೊರಹರವಿಗೆ ಕಾರಣವಾಗುತ್ತಿದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಪ್ರಸ್ತುತ ಚಾಲ್ತಿಯಲ್ಲಿರುವ ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳ ಪ್ರಕಾರ ಚಂದಾದಾರರ ಖಾತೆಯನ್ನು ಮುಕ್ತಾಯಗೊಳಿಸುವ/ಅಂತಿಮ ಹಿಂಪಡೆಯುವಿಕೆಯ ಸಂದರ್ಭದಲ್ಲಿ ಮಾತ್ರ ಆ ಆರ್ಥಿಕ ವರ್ಷದಲ್ಲಿ ಅದುವರೆಗೆ ಗಳಿಸಿದ ಸರಳ ಬಡ್ಡಿಯನ್ನು ವರ್ಷದ ಮಧ್ಯದಲ್ಲಿಯೇ ಲೆಕ್ಕ ಹಾಕುವುದು.

ಹಾಡಿಗಳ ಜನರ ಮೂಲ ಸೌಕರ್ಯಕ್ಕೆ ಆದ್ಯತೆ ನೀಡಿ

ಮೈಸೂರು ಜಿಪಂ ಸಿಇಒ ಕೆ.ಎಂ.ಗಾಯತ್ರಿ ಸೂಚನೆ



ಮೈಸೂರು, ಜ.10–ಹಾಡಿಗಳಲ್ಲಿ ಶುದ್ಧ ಕುಡಿಯುವ ನೀರು, ಕಾಲ ಕಾಲಕ್ಕೆ ಹಾಡಿ ಜನರ ಆರೋಗ್ಯ ತಪಾಸಣೆ ಹಾಗೂ ಆಶ್ರಮ ಶಾಲೆ ಭೇಟಿ ಸೇರಿದಂತೆ ಒಟ್ಟಾರೆಯಾಗಿ ಹಾಡಿ ಜನರಿಗೆ ಮೂಲ ಸೌಕರ್ಯ ಕಲ್ಪಿಸುವಂತೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯತ್ರಿ ಸೂಚನೆ ನೀಡಿದರು.

ಹುಣಸೂರು ತಾಲೂಕಿನ ಬಿಳಿಕೆರೆ, ಚಿಲ್ಕುಂದ ಹಾಗೂ ನೇರಳಕುಪ್ಪೆ ಗ್ರಾಪಂಗೆ ಭೇಟಿ ನೀಡಿ, ಅವಶ್ಯಕ ಮೂಲ ಸೌಲಭ್ಯಗಳ ಕುರಿತು ಕೂಲಂಕುಷವಾಗಿ ಪರಿಶೀಲನೆ ನಡೆಸಿದರು. ಈ ವೇಳೆ ಕಂಡು ಬಂದಂತಹ ಸಾಕಷ್ಟು ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ನೇರಳಕುಪ್ಪೆ ಗ್ರಾಪಂ ವ್ಯಾಪ್ತಿಯಲ್ಲಿ ಹೆಚ್ಚಾಗಿ ಹಾಡಿ ಪ್ರದೇಶಗಳಿರುವುದರಿಂದ ಇಲ್ಲಿರುವ ಪ್ರತಿ ಮನೆಗೂ ಜೆಜೆಎಂ ಮೂಲಕ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವಂತೆ ಹಾಗೂ ಕಾಲ ಕಾಲಕ್ಕೆ ಇಲ್ಲಿನ ಜನರಿಗೆ ಆರೋಗ್ಯ ತಪಾಸಣೆ ನಡೆಸಲು ಕ್ರಮ ಕೈಗೊಳ್ಳುವಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಿದರು. ಬಳಿಕ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿದ್ದು, ಪಂಚಾಯಿತಿ ಮತ್ತು ಗ್ರಂಥಾಲಯ ಎರಡು ಒಂದೇ ಕಟ್ಟಡದಲ್ಲಿದ್ದುದ್ದರಿಂದ ಹೊಸದಾಗಿ ಗ್ರಾಮ ಪಂಚಾಯಿತಿ ಕಟ್ಟಡ ಮತ್ತು ಗ್ರಂಥಾಲಯ ಕಟ್ಟಡ ನಿರ್ಮಾಣಕ್ಕೆ ಅನುದಾನ ನೀಡಲಾಗಿದ್ದರೂ ಸದುಪಯೋಗ ಪಡಿಸಿಕೊಳ್ಳದ ಪಿಡಿಒಗಳ ತರಾಟೆ ತೆಗೆದುಕೊಂಡರು. ಇದಕ್ಕೂ ಮುನ್ನ ಬಿಳಿಕೆರೆ ಮತ್ತು ಚಿಲ್ಕುಂದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನರೇಗಾ ದಿಂದ ಅನುಷ್ಠಾನವಾಗುತ್ತಿರುವ ಕೆರೆ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ವೇಳೆ ಕೆಲಸಕ್ಕಾಗಿ ಬೇರೆಡೆಗೆ ತೆರಳುವ ಮಹಿಳೆಯರ ಮನವೊಲಿಸಿ ಸ್ಥಳೀಯ ಪ್ರದೇಶದಲ್ಲಿಯೇ ನರೇಗಾದಿಂದ ಉದ್ಯೋಗ ನೀಡುವ ಮೂಲಕ ಶೇ.60ಕ್ಕೂ ಹೆಚ್ಚಿನ ಮಹಿಳೆಯರು ಇದರ ಸದುಪಯೋಗ ಪಡೆದುಕೊಳ್ಳುವಂತೆ ತಿಳಿಸಿದರು.

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ ಎದುರಾಗಿರುವ ಸಮಸ್ಯೆಯನ್ನು ಸ್ಥಳೀಯವಾಗಿ ಹಾಗೂ ಪರಿಸರ ದೃಷ್ಟಿಯಿಂದ ಕ್ರಮ ಕೈಗೊಳ್ಳುವ ಮೂಲಕ ಗ್ರಾಮಸ್ಥರ ಸಹಕಾರದೊಂದಿಗೆ ಕ್ರಮ ಕೈಗೊಳ್ಳುವುದಾಗಿ ಪಿಡಿಒ ಅವರಿಗೆ ಸಲಹೆ ನೀಡಿದರು. ಅಲ್ಲದೇ ಪ್ರತಿ ಪಂಚಾಯಿತಿ ವ್ಯಾಪ್ತಿಯಲ್ಲಿ ವೈಯಕ್ತಿಕ ಶೌಚಾಲಯಕ್ಕೆ ಬೇಡಿಕೆಯನ್ನು ಪಡೆದುಕೊಳ್ಳು ವಂತೆ, ಸಮರ್ಪಕವಾಗಿ ಬೂದು ನೀರು ನಿರ್ವಹಣೆ ಘಟಕ, ತೆರಿಗೆ ವಸೂಲಿ, ಇ-ಸ್ವತ್ತು ನವೀಕರಣ ಮಾಡುವಂತೆ ಸೂಚಿಸಿದರು. ಬಳಿಕ, ಸಂಜೀವಿನಿ ಸ್ವ-ಸಹಾಯ ಸಂಘದಲ್ಲಿ ರುವ ಹಾಡಿ ಮಹಿಳೆಯರ ಮೂಲಕ ಗುಂಪು ಚಟುವಟಿಕೆ ನಡೆಸಿ, ಕಾಡಿನ ಉತ್ಪನ್ನಗಳಾದ ಜೇನು, ಬೆಟ್ಟದ ನೆಲ್ಲಿಕಾಯಿ ಮತ್ತು ಕಾರೇಹಣ್ಣನ್ನು ಸಂಗ್ರಹಿಸಿ ಅದರ ಮಾರಾಟ ಮಾಡುವ ಮೂಲಕ ಉತ್ತಮ ಆದಾಯಗಳಿಕೆಗೆ ಮುಂದಾಗುವಂತೆ ಸಲಹೆ ನೀಡಿದರು. ಈ ಕುರಿತು ಅರಣ್ಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅನಮತಿ ದೊರಕಿಸಿಕೊಡಲಾಗುವುದು ಎಂದು ಹೇಳಿದರು. ಬಳಿಕ ಒಕ್ಕೂಟದಿಂದ ಸಾಲ ಪಡೆದ ಸಂಘದ ಸದಸ್ಯೆ ಚಲಾವತಿ ಅವರ ಟೈಲರಿಂಗ್ ಮತ್ತು ಫ್ಯಾನ್ಸಿ ಸ್ಟೋರ್‌ಗೆ ಭೇಟಿ ನೀಡಿದರು.

ದುಡಿಯುವ ಮಹಿಳೆಯರಿಗೆ ನೆರವಾಗಲು 'ಕೂಸಿನ ಮನೆ'

ಹುಣಸೂರು, ಜ.10–ಕೂಸಿನ ಮನೆ ಕೇರ್ ಟೇಕರ್ ತರಬೇತಿ ಕಾರ್ಯಕ್ರಮದಲ್ಲಿ ಬೋಧನೆ ಮಾಡಿದ ಸಿಇಒ, ಸಾಕಷ್ಟು ಮಹಿಳೆಯರಿಗೆ ದುಡಿಯುವ ಅವಶ್ಯಕತೆ ಇದ್ದರೂ ಸಹ ಮನೆಯಲ್ಲಿರುವ ಸಣ್ಣ ಮಕ್ಕಳಿಂದಾಗಿ ಕೆಲಸಕ್ಕೆ ಹೋಗಲು ಸಾಧ್ಯವಾಗುವುದಿಲ್ಲ. ಇಂತಹ ಪೋಷಕರಿಗಾಗಿ ಸಹಾಯ ವಾಗುವ ನಿಟ್ಟಿನಲ್ಲಿ ಕೂಸಿನ ಮನೆ ಪ್ರಾರಂಭ ವಾಗುತ್ತಿದ್ದು, ಇದರ ಅವಶ್ಯಕತೆಯನ್ನು ಸೃಷ್ಟಿಸುವಲ್ಲಿ ಆರೈಕೆದಾರರ ಪಾತ್ರ ಪ್ರಮುಖ ವಾಗಿರುತ್ತದೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯಿತ್ರಿ ತಿಳಿಸಿದರು. ಹುಣಸೂರು ತಾಲೂಕಿನ 17 ಗ್ರಾಪಂ ಕೂಸಿನ ಮನೆ ಪ್ರಾರಂಭಕ್ಕೆ ಸಿದ್ಧವಾಗುತ್ತಿದ್ದು, ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ 7 ದಿನಗಳ ಕಾಲ ನಡೆಯಲಿರುವ ಆರೈಕೆದಾರರ ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಆರೈಕೆದಾರರನ್ನುದ್ದೇಶಿಸಿ ಬೋಧನೆ ಮಾಡಿದರು. ಈ ವೇಳೆ ನರೇಗಾ ಕೂಲಿ ಕಾರ್ಮಿಕರ ಮಕ್ಕಳ ಲಾಲನೆ, ಪಾಲನೆಗಾಗಿ ಕೂಸಿನ ಮನೆ ಪ್ರಾರಂಭವಾಗುತ್ತಿದ್ದು, ಆಯ್ಕೆಯಾಗಿರುವ ಆರೈಕೆದಾರರು ತಾಳ್ಮೆ, ಸಹನೆ, ಶ್ರದ್ಧೆ, ಪ್ರೀತಿ ಹಾಗೂ ವಾತ್ಸಲ್ಯದಿಂದ ಮಕ್ಕಳನ್ನು ನೋಡಿಕೊಳ್ಳಬೇಕು ಎಂದರು. ಅಲ್ಲದೇ ಚಟುವಟಿಕೆಯಿಂದ, ಆಗೋಗ್ಯಕರ ಹಾಗೂ ಆತ್ಮೀಯ ವಾತಾವರಣವನ್ನು ನಿರ್ಮಿಸುವ ಮೂಲಕ ಕೂಸಿನ ಮನೆಯನ್ನು ನಿರ್ವಹಿಸುವಂತೆ ಸಲಹೆ ನೀಡಿದರು.

ಒಂದನೇ ಪುಟದಿಂದ

ಗೆಲುವು ಸಾಧ್ಯತೆ ವರದಿ

ಎಐಸಿಸಿ ಪಡೆದುಕೊಂಡಿದೆ. ಕನುಗೋಳು ವರದಿಗೆ ರಾಹುಲ್ ಗಾಂಧಿ ಹೆಚ್ಚು ಮಾನ್ಯತೆ ನೀಡುತ್ತಾರೆ. ವರದಿ ತಲುಪುತ್ತಿದ್ದಂತೆ ನಗರಕ್ಕೆ ಧಾವಿಸಿ ಕಳೆದ ಮೂರು ದಿನಗಳಿಂದ ಬಿಡಾರ ಹೂಡಿರುವ ಸುರ್ಜೇವಾಲ, ವರದಿಯಲ್ಲಿ ಹೆಸರಿಸಿರುವ ಸಚಿವರುಗಳನ್ನು ತಾವು ತಂಗಿದ್ದ ಹೋಟೆಲ್‌ಗೆ ಕರೆಸಿಕೊಂಡು ಚರ್ಚೆ ಮಾಡಿ, ನೀವು ಪಕ್ಷದ ತೀರ್ಮಾನಕ್ಕೆ ಯಾವುದೇ ತ್ಯಾಗಕ್ಕೂ ಸಿದ್ಧವಾಗಿರುವಂತೆ ತಿಳಿಸಿದ್ದಾರೆ.

ಚುನಾವಣಾ ತಂತ್ರಗಾರರ ವರದಿಯಂತೆ ಕೆಲವು ಸಚಿವರಿಗೆ ಒಳ್ಳೆ ಕೆಲಸ ಮಾಡುತ್ತಿದ್ದೀರಿ ಎಂದು ಶಹಬ್ಬಾಸ್‌ಗಿರಿಯನ್ನೂ ನೀಡಿದ್ದಾರೆ. ಚುನಾವಣಾ ಕಣಕ್ಕಿಳಿಯಬೇಕೆಂಬ ಸಂಭವನೀಯ ಸಚಿವರಿಗೆ ನಾಳೆ ದೆಹಲಿಯಲ್ಲಿ ನಡೆಯಲಿರುವ ಸಭೆಯಲ್ಲಿ ವರಿಷ್ಠರು ಯಾವ ತೀರ್ಮಾನ ಕೈಗೊಳ್ಳುತ್ತಾರೋ ಅದಕ್ಕೆ ಬದ್ಧರಾಗಿ ಎಂದು ಹೇಳಿ ಕಳುಹಿಸಿದ್ದಾರೆ. ಅರಣ್ಯ ಸಚಿವ ಈಶ್ವರ ಖಂಡ್ರೆ ಹೊರತುಪಡಿಸಿ ಉಳಿದ ಸಂಭವನೀಯ ಸಚಿವರಿಗೆ ಮಂತ್ರಿ ಸ್ಥಾನ ಬಿಡಲು ಕಿಂಚಿತ್ತೂ ಮನಸ್ಸಿಲ್ಲ. ಜೊತೆಗೆ ದೆಹಲಿ ರಾಜಕಾರಣವೂ ಬೇಡವಾಗಿದೆ. ಕನುಗೋಳು ನೀಡಿರುವ ವರದಿಯಂತೆ ಚುನಾವಣಾ ಕಣಕ್ಕಿಳಿಯಲು ತಮಗೆ ವರಿಷ್ಠರು ತಾಕೀತು ಮಾಡಿದರೆ ಅದರಿಂದ ತಪ್ಪಿಸಿಕೊಳ್ಳುವುದು ಹೇಗೆ ಎಂಬ ಲೆಕ್ಕಾಚಾರ ಆರಂಭಿಸಿದ್ದಾರೆ.

ಗ್ಯಾರಂಟಿ ನೀಡಿ ಪಕ್ಷವನ್ನು ಅಧಿಕಾರಕ್ಕೆ ತಂದ ಕನುಗೋಳು ನಮಗೇ ಮುಳುವಾಗಿದ್ದಾನೆ ಎಂದು ಪರಿತಪಿಸುತ್ತಿದ್ದಾರೆ. ನಾಳೆ ದೆಹಲಿ ಸಭೆ ನೋಡಿದ ನಂತರ ತೀರ್ಮಾನ ಕೈಗೊಳ್ಳಲು ಸಂಭವನೀಯರು ನಿರ್ಧರಿಸಿದ್ದಾರೆ.

'ಪದವಿ' ಗ್ಯಾರಂಟಿ!

ಗೆಲ್ಲಲೇಬೇಕು ಎಂದು ತಾಕೀತು ಮಾಡಿದರು. ಗ್ಯಾರಂಟಿ ಯೋಜನೆ ಪರಿಣಾಮಕಾರಿ ಅನುಷ್ಠಾನಕ್ಕೆ ರಾಜ್ಯಮಟ್ಟದಲ್ಲಿ ಅಧ್ಯಕ್ಷರು, ಐದು ಜನ ಉಪಾಧ್ಯಕ್ಷರು ಇರಲಿದ್ದಾರೆ. ಅಧ್ಯಕ್ಷರಾದವರಿಗೆ ಸಂಪುಟ ದರ್ಜೆ ಸ್ಥಾನಮಾನ ಇರಲಿದೆ. ಉಪಾಧ್ಯಕ್ಷರಿಗೆ ರಾಜ್ಯ ಸಚಿವ ಸ್ಥಾನ ನೀಡಲಾಗುವುದು. ಸುಮಾರು 31 ಜನ ಸದಸ್ಯರು ಇರಲಿದ್ದು, ಇವರೆಲ್ಲರೂ ಕಾರ್ಯಕರ್ತರೇ ಆಗಿರುತ್ತಾರೆ. ಜಿಲ್ಲಾ ಮಟ್ಟದಲ್ಲಿ ಒಬ್ಬ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು ಇರಲಿದ್ದಾರೆ. ಅವರಿಗೆ ಕಚೇರಿ ವ್ಯವಸ್ಥೆ ಹಾಗೂ ಗೌರವಧನ ನೀಡುವ ವ್ಯವಸ್ಥೆ ಆಗಲಿದೆ ಹಾಗೂ 50 ಸಾವಿರ ರೂ.ಗಳನ್ನು ಪ್ರತಿ ತಿಂಗಳು ನೀಡಲಾಗುವುದು. 21 ಸದಸ್ಯರು ಇರಲಿದ್ದು, 224 ಕ್ಷೇತ್ರಗಳಲ್ಲಿ ಅಧ್ಯಕ್ಷರು ಹಾಗೂ 11 ಸದಸ್ಯರು ಇರಲಿದ್ದಾರೆ, ಇವರಿಗೆ ಗೌರವಧನ ಹಾಗೂ ಸಿಟ್ಟಿಂಗ್ ಫೀಸ್ ಸಹ ಒದಗಿಸಲಾಗುವುದು. ಈ ಮೊತ್ತವನ್ನು ರಾಜ್ಯ ಖಜಾನೆಯಿಂದ ಭರಿಸಲಾಗುವುದು ಎಂದರು. ಸರ್ಕಾರಕ್ಕೆ ಇದು ದೊಡ್ಡ ಹೊರೆಯೇನಲ್ಲ, ಪರಿಣಾಮಕಾರಿಯಾಗಿ ಗ್ಯಾರಂಟಿಗಳ ಅನುಷ್ಠಾನವಾಗಬೇಕು ಎಂಬ ಕಾರಣಕ್ಕೆ 16 ಕೋಟಿ ರೂ.ಗಳನ್ನು ಭರಿಸುತ್ತೇವೆ. ಅಪಪ್ರಚಾರಕ್ಕೆ ಉತ್ತರ ಕೊಡಲು ಈ ಸಮಿತಿಗಳನ್ನು ರಚಿಸಲಾಗುತ್ತಿದೆ ಎಂದರು.

ಶಾಸಕರಲ್ಲದವರಿಗೆ, ಸಂಸದರಲ್ಲದವರಿಗೆ ಸಮಿತಿ ಸದಸ್ಯತ್ವ ದೊರೆಯಲಿದೆ. ವಿವಿಧ ಇಲಾಖೆಗಳ ಸಮಿತಿಗಳನ್ನು ಕೂಡಲೇ ರಚಿಸಲು, ಆಯಾ ಇಲಾಖೆಗಳ ಸಚಿವರ ವಿವೇಚನೆಗೆ ಬಿಡಲಾಗಿದೆ. ಹೆಸರುಗಳನ್ನು ಪಡೆಯುವಾಗ, ಶಾಸಕರು, ಸಂಸದರ ಸಲಹೆ ಪಡೆಯುವಂತೆ ಸೂಚಿಸಿದರು. ಕೆಲವು ಶಾಸಕರಿಗೆ, ವಿಧಾನಸಭೆ ಟಿಕೆಟ್ ದೊರೆಯದವರಿಗೆ ಅವಕಾಶ ಕಲ್ಪಿಸಲಾಗುವುದು. ಸದಸ್ಯತ್ವ ಅವಧಿ ಎರಡು ವರ್ಷ ಇರಲಿದೆ. ಕಾರ್ಯಕರ್ತರ ಶ್ರಮದಿಂದ ಪಕ್ಷ ಗಟ್ಟಿಯಾಗಿದೆ ಎಂದರು.

ಒಂದರಲ್ಲೇ 1601 ಕೋಟಿ ಬಾಕಿ ಇದೆ

ಮಾಡಬೇಕಿದೆ. ಈ ಪೈಕಿ ಕೆಲವರು ಬಾಕಿ ಪಾವತಿಸುವ ಬದಲಿಗೆ ಕೋರ್ಟ್ ಮೊರೆ ಹೋಗಿದ್ದರು ಎಂದು ತಿಳಿಸಿದರು. ಇದರಲ್ಲಿ ಥಾಮ್ಸನ್ ರಬ್ಬರ್ ಲಿಮಿಟೆಡ್, ಅರಣ್ಯ ಗುತ್ತಿಗೆ ಭೂಮಿಯನ್ನೇ ಬ್ಯಾಂಕ್‌ನಲ್ಲಿ ಅಡಮಾನ ಇಟ್ಟು ಸಾಲ ಪಡೆದಿದ್ದು, ಸಾಲ ಕಟ್ಟದ ಕಾರಣ ಬ್ಯಾಂಕ್‌ನವರು ಅದನ್ನು ಹರಾಜು ಹಾಕಿದ್ದಾರೆ. ಇದರ ಜೊತೆಗೆ ವಿರಾಜಪೇಟೆ ಒಂದರಿಂದಲೇ ಆಡಿಟ್ ವರದಿಯಲ್ಲಿ ಇಲಾಖೆಗೆ ಗುತ್ತಿಗೆ ಮೊತ್ತ 1,601 ಕೋಟಿ ರೂಪಾಯಿ ಬರಬೇಕು ಎಂದು ತಿಳಿಸಿದೆ. ಗುತ್ತಿಗೆ ಪಡೆದಿರುವ ಕಂಪನಿಗಳಿಂದ ಬರಬೇಕಿರುವ ಬಾಕಿ ವಸೂಲಿಗೆ ಒಂದು ವಿಶೇಷ ಪಿಸಿಸಿಎಫ್ ಅಥವಾ ಎಪಿಸಿಸಿಎಫ್ ದರ್ಜೆಯ ಅಧಿಕಾರಿ ನೇತೃತ್ವದಲ್ಲಿ ತಂಡ ರಚಿಸಲಾಗುವುದು. ಒಂದು ವರ್ಷದಲ್ಲಿ ಈ ಎಲ್ಲ ಬಾಕಿ, ದಂಡ ಶುಲ್ಕ ಮತ್ತು ಬಡ್ಡಿ ಸಹಿತ ಬಾಕಿ ವಸೂಲಿ ಮಾಡಲು ಕ್ರಮ ವಹಿಸಲಾಗುವುದು ಎಂದು ಹೇಳಿದರು.

ಮೈಸೂರಿನ ಕುಕ್ಕರಹಳ್ಳಿ ಕೆರೆಯಲ್ಲಿ ಮೀನುಗಾರಿಕೆ ಆರಂಭ

ಪಕ್ಷಿ ಸಂಕುಲಕ್ಕೆ ಹಾನಿಯಾಗದಂತೆ ಕಟ್ಟೆಚ್ಚರ ವಹಿಸಲು ಪಕ್ಷಿ ಪ್ರಿಯರ ಆಗ್ರಹ

- ಮೀನುಗಾರಿಕೆಗೆ 7,66,920 ರೂ. ಟೆಂಡರ್ ಪಡೆದ ಕೆರೆ ಮೀನು ಅಭಿವೃದ್ಧಿ, ಮಾರಾಟ ಮತ್ತು ಉತ್ಪಾದನಾ ಸಂಘ
- ವಲಸೆ ಪಕ್ಷಿ, ಸಂತಾನೋತ್ಪತ್ತಿ ಪ್ರಕ್ರಿಯೆಯಲ್ಲಿ ತೊಡಗಿರುವ ಪಕ್ಷಿ ಸಂಕುಲದ ರಕ್ಷಣೆಗೆ ಒತ್ತು ನೀಡಬೇಕು
- ಹಲವು ಷರತ್ತಿನೊಂದಿಗೆ ಟೆಂಡರ್ ನೀಡಿದ ಮೈಸೂರು ವಿಶ್ವವಿದ್ಯಾನಿಲಯ



ಕುಕ್ಕರಹಳ್ಳಿ ಕೆರೆಯಲ್ಲಿ ಸತ್ತು ಬಿದ್ದಿದ್ದ ಮೀನುಗಳನ್ನು ತೆರವು ಮಾಡುತ್ತಿರುವುದು.

ಮೈಸೂರು,ಜ.10(ಎಂಟಿವೈ)– ವೈವಿಧ್ಯಮಯ ಪಕ್ಷಿ ಸಂಕುಲದ ಆಶ್ರಯ ತಾಣ ಮೈಸೂರಿನ ಕುಕ್ಕರಹಳ್ಳಿ ಕೆರೆಯಲ್ಲಿ ಮೀನುಗಾರಿಕೆ ಆರಂಭವಾಗಿದ್ದು, ಸಂತಾನೋತ್ಪತ್ತಿಯಲ್ಲಿ ತೊಡಗಿರುವ ಪಕ್ಷಿ ಹಾಗೂ ವಲಸೆ ಪಕ್ಷಿ ಸಂಕುಲಕ್ಕೆ ಧಕ್ಕೆಯಾಗದಂತೆ ಕಟ್ಟೆಚ್ಚರ ವಹಿಸುವಂತೆ ಪಕ್ಷಿ ಪ್ರಿಯರು ಆಗ್ರಹಿಸಿದ್ದಾರೆ.

ಮೈಸೂರಿನ ಪ್ರಮುಖ ಕೆರೆಗಳಲ್ಲಿ ಒಂದಾಗಿರುವ ಕುಕ್ಕರಹಳ್ಳಿ ಕೆರೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡಲಿದ್ದು, ಕೆರೆಯಲ್ಲಿ ಮೀನುಗಾರಿಕೆಗಾಗಿ ಇ-ಟೆಂಡರ್ ಪ್ರಕ್ರಿಯೆ ಮೂಲಕ ಕೆಲವು ಷರತ್ತಿನೊಂದಿಗೆ 7,66,920 ರೂ.ಗೆ ಕೆರೆ ಮೀನು ಅಭಿವೃದ್ಧಿ, ಮಾರಾಟ ಮತ್ತು ಉತ್ಪಾದನಾ ಸಂಘಕ್ಕೆ ಟೆಂಡರ್ ನೀಡಲಾಗಿದೆ. ಡಿ.30ರಂದು ಟೆಂಡರ್ ಪಡೆದ ಕೆರೆ ಮೀನು ಮಾರಾಟ ಸಂಘ ಜ.10ರಿಂದ ಕುಕ್ಕರಹಳ್ಳಿ ಕೆರೆಯಲ್ಲಿ ಮೀನು ಹಿಡಿಯುವ ಕಾರ್ಯ ಆರಂಭಿಸಿದೆ. ಷರತ್ತಿನಲ್ಲಿ ವಿಧಿಸಿರುವ ನಿಯಮಾನುಸಾರ ಮೀನುಗಾರಿಕೆ ಮಾಡಲು ಮೈಸೂರು ವಿವಿ ಸೂಚನೆ ನೀಡಿದ್ದು, ನಿಯಮ ಉಲ್ಲಂಘನೆ ತಡೆಗೆ ಕೆರೆ ನಿರ್ವಹಣಾ ಸಿಬ್ಬಂದಿಗಳಿಗೆ ಸಲಹೆ ನೀಡಲಾಗಿದೆ.

ಮೊದಲ ದಿನವೇ ಭರ್ಜರಿ ಮೀನು: ಮಂಗಳವಾರ ಕುಕ್ಕರಹಳ್ಳಿ ಕೆರೆಯಲ್ಲಿ ಮೀನುಗಾರಿಕೆ ನಡೆಸಲಾಗಿದ್ದು, ಸುಮಾರು 200 ಕೆಜಿ ಮೀನು ಹಿಡಿಯಲಾಗಿದೆ. ದಪ್ಪ ಮೀನನ್ನು ಮಾತ್ರ ಹಿಡಿಯಲು ಸೂಚನೆ ನೀಡಿರುವ ಹಿನ್ನೆಲೆಯಲ್ಲಿ ದಪ್ಪ ಮೀನುಗಳು ಮಾತ್ರ ಸಿಲುಕುವಂತೆ ಬಲೆ ಬಳಸಲಾಗುತ್ತಿದೆ.

40ಕ್ಕೂ ಹೆಚ್ಚು ಮೀನು ಸಾವು: ಮೀನುಗಾರಿಕೆ ವೇಳೆ ಬಲೆಗೆ ಸಿಲುಕಿ ಗಾಯಗೊಂಡು, ನಂತರ ಬಲೆಯಿಂದ ಬಿಡಿಸಿಕೊಂಡಿದ್ದ 40ಕ್ಕೂ ಹೆಚ್ಚು ಮೀನುಗಳು ಮೃತಪಟ್ಟಿದ್ದವು. ಸತ್ತ ಮೀನುಗಳು ಗಾಳಿ ರಭಸಕ್ಕೆ ದಡಕ್ಕೆ ತೇಲಿ ಬಂದಿದ್ದವು. ಇದನ್ನು ಗಮನಿಸಿದ ವಾಯುವಿಹಾರಿಗಳು ಕೆರೆ ನೀರು ಕಲುಷಿತಗೊಂಡಿರುವ ಕಾರಣ ಮೀನುಗಳು ಮೃತಪಡುತ್ತಿರುವ ಶಂಕೆ ವ್ಯಕ್ತಪಡಿಸಿದ್ದರು. ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ ಬಲೆಗೆ ಸಿಲುಕಿದ ನಂತರ ತಪ್ಪಿಸಿಕೊಂಡ ಮೀನುಗಳೇ ಮೃತಪಟ್ಟಿರುವುದು ದೃಢಪಟ್ಟವು.

ಮೀನುಗಳ ಮೃತದೇಹ ತೆರವು: ಕುಕ್ಕರಹಳ್ಳಿ ಕೆರೆಯಲ್ಲಿ ತೇಲಾಡುತ್ತಿದ್ದ ಸತ್ತ ಮೀನುಗಳಿಂದ ಜೀವಂತ ಮೀನು ಹಾಗೂ ಪಕ್ಷಿ ಸಂಕುಲಕ್ಕೆ ತೊಂದರೆಯಾಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಬುಧವಾರ ಬೆಳಗ್ಗೆ ತೆಪ್ಪದ ಮೂಲಕ ಕೆರೆಯಲ್ಲಿ ತೇಲುತ್ತಿದ್ದ ಮೀನುಗಳನ್ನು ಸಂಗ್ರಹಿಸಲಾಯಿತು.

ಅಚ್ಚರಿ ಮೂಡಿಸಿದ ಶಖರ್ ಮೌತ್(ಕ್ಯಾಟ್ ಫಿಶ್) ಮೀನು

ಕುಕ್ಕರಹಳ್ಳಿ ಕೆರೆಯಲ್ಲಿ ಇಂದು ಮೀನು ಹಿಡಿಯುವ ವೇಳೆ 20ಕ್ಕೂ ಹೆಚ್ಚು ದೊಡ್ಡ ಗಾತ್ರದ ಶಖರ್ ಮೌತ್ ಮೀನುಗಳು ಕಂಡು ಬಂದವು. ಅಕ್ವೇರಿಯಂಗಳಲ್ಲಿ ಸಾಕುವ ಅಲಂಕಾರಿಕ ಕಪ್ಪು ಬಣ್ಣದ ಮೀನುಗಳು ಬಲೆಗೆ ಬೀಳುವ ಮೂಲಕ ಅಚ್ಚರಿ ಮೂಡಿಸಿದವು. ಈ ಮೀನುಗಳು ಇತರೆ ಸಾಮಾನ್ಯ ಮೀನುಗಳನ್ನು ಭಕ್ಷಿಸುತ್ತವೆ. ಅಲ್ಲದೆ, ನೀರಿನಿಂದ ಹೊರಗೆ ತೆಗೆದಿಟ್ಟರೂ ಸಾಕಷ್ಟು ಸಮಯ ಬದುಕ ಬಲ್ಲವು. ಮೈ ತುಂಬ ಗರಗಸದಂತೆ ಮುಳ್ಳಿನ ಸರಮಾಲೆ ಹೊಂದಿರುವ ಈ ಮೀನುಗಳು ತಿನ್ನಲು ಯೋಗ್ಯವಲ್ಲ.

> ಕುಕ್ಕರಹಳ್ಳಿ ಕೆರೆಯಲ್ಲಿ ವಿವಿಧ ಜಾತಿಯ ಪಕ್ಷಿಗಳು ನೆಲೆಸಿವೆ. ಇದು ವಲಸೆ ಪಕ್ಷಿಗಳು ಆಗಮಿಸುವ ಸಮಯ. ಅಲ್ಲದೆ, ಪಕ್ಷಿಗಳು ಸಂತಾನೋತ್ಪತ್ತಿಯಲ್ಲಿ ತೊಡಗಿರುತ್ತವೆ. ಇಂತಹ ಸಂದರ್ಭದಲ್ಲಿ ಎಚ್ಚರಿಕೆಯಿಂದ ಮೀನುಗಾರಿಕೆ ಮಾಡಬೇಕಾಗುತ್ತದೆ. ಕೆರೆಯಲ್ಲಿರುವ ದ್ವೀಪ ಹಾಗೂ ಕೆರೆ ದಡದಲ್ಲಿ ಪಕ್ಷಿಗಳು ಗೂಡು ಕಟ್ಟಿರುತ್ತವೆ. ಮೀನು ಹಿಡಿಯಲು ಪದೇ ಪದೇ ಪಕ್ಷಿಗಳ ಗೂಡಿನ ಬಳಿ ಓಡಾಡಿದರೆ, ಅವುಗಳಿಗೆ ತೊಂದರೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಮೀನುಗಾರಿಕೆಯಿಂದ ಪಕ್ಷಿ ಸಂಕುಲಕ್ಕೆ ತೊಂದರೆಯಾಗದಂತೆ ಕಟ್ಟೆಚ್ಚರವಹಿಸಬೇಕು. ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಿ, ದಪ್ಪ ಮೀನುಗಳನ್ನಷ್ಟೇ ಹಿಡಿಯಬೇಕು. –ಪ್ರೊ.ಯು.ಎನ್.ರವಿಕುಮಾರ್, ಜಲತಜ್ಞರು

> ಮೈಸೂರಿನ ಕುಕ್ಕರಹಳ್ಳಿ ಕೆರೆ, ಕಾರಂಜಿಕೆರೆ ಸೇರಿದಂತೆ ವಲಸೆ ಪಕ್ಷಿಗಳು ಬರುವ ಕೆರೆಗಳಲ್ಲಿ ಮೀನುಗಾರಿಕೆ ಅವಕಾಶ ನೀಡಬಾರದು ಎಂದು ಮೊದಲಿನಿಂದಲೂ ಹೋರಾಟ ಮಾಡುತ್ತಲೇ ಬಂದಿದ್ದೇವೆ. ಆದರೆ, ಮೈಸೂರು ವಿವಿಯಿಂದ ಟೆಂಡರ್ ಕರೆದು ಮೀನುಗಾರಿಕೆಗೆ ಅವಕಾಶ ನೀಡಿದೆ. ಇದರಿಂದ ಈಗ ಮೀನುಗಾರಿಕೆಯನ್ನು ವಿರೋಧಿಸಲು ಆಗುವುದಿಲ್ಲ. ಈ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಪಕ್ಷಿಗಳ ಸಂತತಿ ರಕ್ಷಣೆಗೆ ವಲಸೆ ಪಕ್ಷಿ ಬರುವ ಕೆರೆಗಳಲ್ಲಿ ಮೀನುಗಾರಿಕೆಗೆ ಅವಕಾಶ ನೀಡಬಾರದು. ಟೆಂಡರ್ ಪ್ರಕ್ರಿಯೆ ನಡೆಸಬಾರದು. –ಸಪ್ತ ಗಿರೀಶ್, ಪಕ್ಷಿ ತಜ್ಞರು



ಬಲೆಗೆ ಸಿಲುಕಿದ ಶಖರ್ ಮೌತ್(ಕ್ಯಾಟ್ ಫಿಶ್) ಮೀನು.

ಕಾನೂನಿನ ಅರಿವು, ನೆರವು ನೀಡುವುದು ಕಾನೂನು ಸೇವಾ ಪ್ರಾಧಿಕಾರದ ಉದ್ದೇಶ

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಬಿ.ಜಿ.ದಿನೇಶ್ ಅಭಿಮತ



ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿ ವತಿಯಿಂದ ಆಯೋಜಿಸಿದ್ದ ಕಾನೂನು ಅರಿವು ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯೂ ಆದ ಬಿ.ಜಿ.ದಿನೇಶ್ ಮಾತನಾಡಿದರು.

ಮೈಸೂರು, ಜ.10(ಜಿಎ)–ಕಾನೂನಿನ ಬಗ್ಗೆ ಅರಿವು ಮತ್ತು ನೆರವು ನೀಡುವುದು ಕಾನೂನು ಸೇವಾ ಪ್ರಾಧಿಕಾರದ ಮುಖ್ಯ ಉದ್ದೇಶವಾಗಿದೆ ಎಂದು ಹಿರಿಯ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯೂ ಆದ ಬಿ.ಜಿ. ದಿನೇಶ್ ಅವರು ತಿಳಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿ ವತಿಯಿಂದ ಆಯೋಜಿಸಿದ್ದ ಕಾನೂನು ಅರಿವು, ವೀಲ್ ಚೇರ್ ವಿತರಣೆ ಮತ್ತು ಸಮಿತಿಯ ನೂತನ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ಮಾಧ್ಯಮಗಳಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಬಗ್ಗೆ ಸಾಕಷ್ಟು ವರದಿ ಬರುತ್ತಿರುವುದರಿಂದ ಸಾರ್ವಜನಿಕರಿಗೆ ಪ್ರಾಧಿಕಾರದ ಬಗ್ಗೆ ಮಾಹಿತಿ ಇದೆ. ಕೆಲವರು ನ್ಯಾಯಾಲಯದಲ್ಲಿ ನಡೆಯುವ ಕಲಾಪಗಳನ್ನು ನೋಡಿದ್ದೀರಿ, ಆದರೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವೂ ನ್ಯಾಯಾಲಯದ ಕಾರ್ಯ ಕಲಾಪಗಳಂತೆ ನ್ಯಾಯಾಲಯದ ಯಾವುದೇ ಚಟುವಟಿಕೆಗಳನ್ನು ನಡೆಸುವುದಿಲ್ಲ. ಅದು ಸಾಕಷ್ಟು ವಿಭಿನ್ನವಾಗಿದೆ ಎಂದು ಅವರು ವಿವರಿಸಿದರು.

ತಾಲೂಕು ಸೇರಿದಂತೆ ಎಲ್ಲಾ ಹಂತಗಳಲ್ಲಿ ಪ್ರಾಧಿಕಾರ ಇದ್ದು, ಪ್ರಾಧಿಕಾರದಲ್ಲಿ ಜಿಲ್ಲಾ ಸತ್ರ ನ್ಯಾಯಾಧೀಶರ ಇರುತ್ತಾರೆ. ಜಿಲ್ಲಾಧಿಕಾರಿ, ಪೊಲೀಸ್ ಆಯುಕ್ತರು, ಜಿಪಂ ಸಿಇಓ ಮತ್ತು ವಿವಿಧ ಸಂಘ ಸಂಸ್ಥೆಗಳು ಪ್ರಾಧಿಕಾರದಲ್ಲಿ ಸದಸ್ಯರಾಗಿದ್ದಾರೆ, ಪ್ರಾಧಿಕಾರದ ವತಿಯಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಲೈಂಗಿಕ ಶೋಷಣೆಗೆ ಒಳಗಾಗದವರು, ಮಹಿಳೆಯರು ಮತ್ತು ಮಕ್ಕಳಿಗೆ ಉಚಿತವಾಗಿ ವಕೀಲರನ್ನು ನೇಮಿಸಿ ಅವರ ಪರವಾದ ಮಾಡಲು ಅವಕಾಶ ನೀಡಲಾಗುತ್ತದೆ. ಸಾರ್ವಜನಿಕರು ಇದರ ಸದುಪಯೋಗ ಪಡಿಸಿಕೊಳ್ಳಿ ಎಂದು ಅವರು ತಿಳಿಸಿದರು. ಕಾರ್ಯಕ್ರಮದಲ್ಲಿ ಪುಟ್ಟೇಗೌಡ ಹುಂಡಿಯ ಅಂಗವಿಕಲ ವ್ಯಕ್ತಿಗೆ ವ್ಹೀಲ್ ಚೇರ್ ವಿತರಿಸಲಾಯಿತು. ಈ ವೇಳೆ ಕರಾಟೆ ಪಟು ರ್‍ಯಾಂಬೋ ಕಿರಣ್, ವಕೀಲ ಪುಟ್ಟರಾಜು, ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ರವಿ ಮಾವಿನಹಳ್ಳಿ, ಸಮಿತಿ ರಾಜ್ಯಾಧ್ಯಕ್ಷೆ ವಿ.ಪಿ.ಸುಶೀಲ, ಪ್ರಧಾನ ಕಾರ್ಯದರ್ಶಿ ಎಂ.ಪುಟ್ಟರಾಜು, ವಿನೋದ್ ಸೇರಿದಂತೆ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ದ್ವಿತೀಯ ಪಿಯುಸಿ ಮಕ್ಕಳಿಗೆ ಪ್ರೇರಣಾ ಕಾರ್ಯಕ್ರಮ



ಮೈಸೂರು, ಜ. 10–ಮೈಸೂರಿನ ಹೆಬ್ಬಾಳದ ಹೊರವರ್ತುಲ ರಸ್ತೆಯಲ್ಲಿರುವ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಲ್ಲಿರುವ ಪರೀಕ್ಷಾ ಭಯ ಮತ್ತು ಆತಂಕವನ್ನು, ಹೊಗಲಾಡಿಸುವ ಪ್ರೇರಣಾ ಕಾರ್ಯಕ್ರಮ ಆಯೋಜಿಸಲಾಗಿತ್ತು.

ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡರು ಮಾತನಾಡಿ, ವಿದ್ಯಾರ್ಥಿಗಳು ಓದುವ ಸಮಯದಲ್ಲಿ ಹೇಗೆ ವಿದ್ಯಾರ್ಥಿಗಳು ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಎಂಬುದಕ್ಕೆ ಹಲವಾರು ಉದಾಹರಣೆಯ ಮೂಲಕ ವಿದ್ಯಾರ್ಥಿಗಳಿಗೆ ತಿಳಿಸಿದರು.

ಆ ಕಾಲದಲ್ಲಿ ಓದುವುದಕ್ಕೆ ವಿದ್ಯಾರ್ಥಿಗಳಿಲ್ಲ; ಈ ಕಾಲದಲ್ಲಿ ಮಕ್ಕಳು ಓದುವುದಕ್ಕೆ ಸೀಟ್ ಸಿಕ್ತಾಯಿಲ್ಲ ಎಂಬ ವಿಚಾರವನ್ನು ಅವರದೇ ಹಾಸ್ಯ ಧಾಟಿಯಲ್ಲಿ ಮನವರಿಕೆ ಮಾಡಿಕೊಟ್ಟರಲ್ಲದೆ ಕೆಲವು ವಿದ್ಯಾರ್ಥಿಗಳು ಹೇಗೆ ಬದಲಾಗಿ ತಮ್ಮ ತಂದೆ ತಾಯಿಯನ್ನು ನೋಡಿಕೊಳ್ಳುತ್ತಿದ್ದಾರೆ ಎಂಬುದನ್ನು ತಿಳಿಸಿದರು. ಕೆಲವು ಮಾತುಗಳು ವಿದ್ಯಾರ್ಥಿಗಳಿಗೆ ಹೇಗೆ ಅರ್ಥವಾಗಬೇಕು ಅದೇ ಧಾಟಿಯಲ್ಲಿ ಹೇಳಿ ನಗಿಸುವುದರ ಜೊತೆಗೆ ಉಪಯುಕ್ತ ಸಂದೇಶವನ್ನು ಸಾರಿದರು. ಪೋಷಕರು ಮಕ್ಕಳ ಬೇಕು-ಬೇಡಗಳನ್ನು ಅರ್ಥ ಮಾಡಿಕೊಳ್ಳದೆ ಅವರು ಹಾಳಾಗುವುದಕ್ಕು ಕಾರಣಕರ್ತರಾಗುತ್ತಿದ್ದೇವೆ. ನೀವು ಎಲ್ಲರ ಜೊತೆ ಬೆರೆಯುವುದನ್ನು ಕಲಿತು ಓದುವ ತವಕವನ್ನು ಸೃಷ್ಟಿ ಮಾಡಿಕೊಂಡು ನಿಮ್ಮ ಮುಂದಿನ ಭವಿಷ್ಯಕ್ಕೆ ಬುನಾದಿ ಹಾಕಿಕೊಳ್ಳಬೇಕು ಎಂದು ಹೇಳಿದರು.

ಪರೀಕ್ಷಾ ಭಯವನ್ನು ಬಿಟ್ಟು, ಆತ್ಮಸ್ಥೈರ್ಯವನ್ನು ಬೆಳೆಸಿಕೊಳ್ಳಿ ಎಂದು ಕಿವಿಮಾತು ಹೇಳುವುದರ ಜೊತೆಗೆ ಒಬ್ಬ ಜನಪದ ಕಲೆಗಾರ ಮೂರು ರಾತ್ರಿ ಯಾವುದೇ ಬರವಣಿಗೆ ಇಲ್ಲದೆ ತನ್ನ ತಲೆಯಲ್ಲಿ ಇಟ್ಟುಕೊಂಡು ಹಾಡ್ತಾನೆ. ನೀವು ಯಾಕೆ ಓದಿದ್ದನ್ನು ತಲೆಯಲ್ಲಿ ಇಟ್ಟುಕೊಳ್ಳಲಾಗುವುದಿಲ್ಲ" ಎಂದು ಪ್ರಶ್ನಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಅರ್ಚನ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.

ಪ್ರಾಚ್ಯ ವಿದ್ಯಾ ಸಂಶೋಧನಾಲಯದ ಗ್ರಂಥಗಳ ಮರು ಮುದ್ರಣ ಸಂಬಂಧ

ದೆಹಲಿಯ ಕೇಂದ್ರಿಯ ಸಂಸ್ಕೃತ ವಿವಿ, ಮೈಸೂರು ವಿವಿಯೊಂದಿಗೆ ಒಡಂಬಡಿಕೆ

ಮೈಸೂರು,ಜ.10(ಜಿಎ)–ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯ ವಿದ್ಯಾ ಸಂಶೋಧನಾಲಯದ ಅಪರೂಪದ ಗ್ರಂಥಗಳನ್ನು ಮರುಮುದ್ರಣ ಮಾಡಲು ದೆಹಲಿಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯವೂ ಒಲವು ತೋರಿದ್ದು, ಈ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ.

ದೆಹಲಿಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಶ್ರೀನಿವಾಸ ವರಖೇಡಿ ಅವರು ಜ.7ರಂದು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯ ವಿದ್ಯಾ ಸಂಶೋಧನಾಲಯಕ್ಕೆ ಭೇಟಿ ನೀಡಿ ಸಂಶೋಧನಾಲಯವನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಇಲ್ಲಿನ 18 ಅಪರೂಪದ ಸಂಸ್ಕೃತ ಗ್ರಂಥಗಳನ್ನು ಮರು ಮುದ್ರಣ ಮಾಡುವ ಸಂಬಂಧ ನೆರವು ನೀಡಲು ಮುಂದಾಗಿ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅವರೊಟ್ಟಿಗೆ ಮೊದಲ ಹಂತವಾಗಿ 15 ಲಕ್ಷ ರೂ. ವೆಚ್ಚದ ಒಡಂಬಡಿಕೆ ಮಾಡಿಕೊಂಡು ಒಪ್ಪಿಗೆ ಪತ್ರವನ್ನು ಪ್ರಾಚ್ಯ ವಿದ್ಯಾ ಸಂಶೋಧನಾಲಯದ ನಿರ್ದೇಶಕರಾದ ಡಾ.ಡಿ.ಪಿ. ಮಧುಸೂಧರಾಚಾರ್ಯ ಹಸ್ತಾಂತರಿಸಿದರು.



ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನಾಲಯಕ್ಕೆ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಶ್ರೀನಿವಾಸ ವರಖೇಡಿ ಭೇಟಿ ನೀಡಿದರು. ಚಿತ್ರದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಪ್ರಾಚ್ಯ ವಿದ್ಯಾ ಸಂಶೋಧನಾಲಯದ ನಿರ್ದೇಶಕ ಡಾ.ಡಿ.ಪಿ.ಮಧುಸೂದನಾಚಾರ್ಯ ಅವರನ್ನು ಕಾಣಬಹುದು

ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿ 234 ಗ್ರಂಥಗಳಿದ್ದು, ಅವುಗಳಲ್ಲಿ 50 ಗ್ರಂಥಗಳಿಗೆ ಸಾರ್ವಜನಿಕರು, ವಿದ್ವಾಂಸರು ಮತ್ತು ಸಂಸ್ಕೃತ ಪಂಡಿತರಿಂದ ಹೆಚ್ಚು ಬೇಡಿಕೆ ಇತ್ತು. ಆದ್ದರಿಂದ ಅವುಗಳಲ್ಲಿ 18 ಗ್ರಂಥಗಳನ್ನು ಮರು ಮುದ್ರಣ ಮಾಡಲು ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಜೊತೆಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ ಎಂದು ಪ್ರಾಚ್ಯ ವಿದ್ಯಾ ಸಂಶೋಧನಾಲಯದ ನಿರ್ದೇಶಕ ಡಾ.ಡಿ.ಪಿ.ಮಧುಸೂದನಾಚಾರ್ಯ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೊದಲ ಹಂತದಲ್ಲಿ 15 ಲಕ್ಷ ರೂ. ವೆಚ್ಚದಲ್ಲಿ 18 ಗ್ರಂಥಗಳನ್ನು ಮರು ಮುದ್ರಣ ಮಾಡಲು ನಿರ್ಧರಿಸಿದ್ದು, ಸುಮಾರು 500 ಪ್ರತಿಗಳನ್ನು ಮುದ್ರಣ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಈ ಸಂಸ್ಕೃತ ಗ್ರಂಥಗಳನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಅನುವಾದ ಮಾಡಲು ಚಿಂತಿಸಲಾಗಿದೆ. ಇದರಿಂದ ಸಾರ್ವಜನಿಕರು, ವಿದ್ವಾಂಸರು, ಸಂಸ್ಕೃತ ಪಂಡಿತರು ಮತ್ತು ಪಿಎಚ್‌ಡಿ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು. ಮತ್ತೊಂದೆಡೆ ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿ ಬೆಂಗಳೂರಿನ ಮಿಥಿಕ್ ಸೊಸೈಟಿ ವತಿಯಿಂದ ತಾಳೆಗರಿಗಳ ಸಂರಕ್ಷಣೆ ಮತ್ತು ಡಿಜಿಟಲೀಕರಣ ಪ್ರಕ್ರಿಯೆ ಮುಕ್ತಾಯದ ಹಂತ ತಲುಪಿದ್ದು, ಈ ತಿಂಗಳ ಅಂತ್ಯದಲ್ಲಿ ಪೂರ್ಣಗೊಳ್ಳಲಿದೆ. ಈವರೆಗೂ 75 ಸಾವಿರ ತಾಳೆಗರಿಗಳನ್ನು ಡಿಜಿಟಲೀಕರಣ ಮಾಡಲಾಗಿದ್ದು, ಇದಕ್ಕಾಗಿ ಪ್ರತ್ಯೇಕ ವೆಬ್‌ಸೈಟ್ ಸಿದ್ಧಪಡಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಅಧ್ಯಯನಕ್ಕೆ ಅಗತ್ಯವಿರುವ ತಾಳೆಗರಿಯನ್ನು ಈ ವೆಬ್‌ಸೈಟ್ ಮೂಲಕ ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗುತ್ತದೆ. ಇದರ ರೂಪುರೇಷೆ ಕುರಿತು ಜ.29ರಂದು ಕುಲಪತಿಗಳೊಂದಿಗೆ ವಿಶೇಷ ಸಭೆ ಏರ್ಪಡಿಸಲಾಗಿದೆ ಎಂದು ತಿಳಿಸಿದರು.

15 ದಿನಕ್ಕೊಮ್ಮೆ ವಿಡಿಯೋ ಸಂವಾದ ನಡೆಸಿ

ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಸೂಚನೆ

ಮಡಿಕೇರಿ, ಜ.10–ಕೋವಿಡ್ ಪ್ರಕರಣಗಳು ಹೆಚ್ಚು ವರದಿಯಾಗುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವ ಸಂಬಂಧ



ಜಿಲ್ಲಾಧಿಕಾರಿ ವೆಂಕಟ್‌ರಾಜಾ ಬುಧವಾರ ಆರೋಗ್ಯ ಇಲಾಖೆ ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ವಿಡಿಯೋ ಸಂವಾದ ನಡೆಯಿತು.

ಸಂವಾದದಲ್ಲಿ ಡಿಸಿ ವೆಂಕಟ್ ರಾಜಾ ಮಾತನಾಡಿ, ಕೋವಿಡ್ ನಿಯಂತ್ರಣ ಸಂಬಂಧ ಮುನ್ನೆಚ್ಚರ ವಹಿಸಿ 15 ದಿನಕ್ಕೊಮ್ಮೆ ವಿಡಿಯೋ ಸಂವಾದ ಮೂಲಕ ಸಭೆ ನಡೆಸಬೇಕು. ಸರ್ಕಾರ ಕಾಲ ಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಆ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಗಡಿಭಾಗಕ್ಕೆ ಹೊಂದಿಕೊಂಡಿರುವ ಗ್ರಾಮಗಳಲ್ಲಿ ಕೋವಿಡ್ ಪರೀಕ್ಷೆ ನಡೆಸಿ ವರದಿ ಸಲ್ಲಿಸಬೇಕು. ಆಸ್ಪತ್ರೆಗಳಲ್ಲಿ ಅಗತ್ಯ ಔಷಧೋಪಚಾರಗಳನ್ನು ದಾಸ್ತಾನು ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್ ಮಾತನಾಡಿ, ಕೋವಿಡ್ ನಿಯಂತ್ರಣ ಸಂಬಂಧ ಇಲಾಖೆಯಿಂದ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಪ್ರಾಥಮಿಕ ಆರೋಗ್ಯ ಸಮುದಾಯ, ತಾಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಅಗತ್ಯ ಔಷಧ ದಾಸ್ತಾನು ಮಾಡಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಸಂವಾದದಲ್ಲಿ ಜಿಪಂ ಸಿಇಓ ವರ್ಣಿತ್ ನೇಗಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಶ್ರೀನಿವಾಸ್, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

ತಾಂತ್ರಿಕ ಸಲಹಾ ಸಮಿತಿ ಶಿಫಾರಸ್ಸು

ಎಲ್ಲಾ ಹಿರಿಯ ನಾಗರಿಕರು (60 ವರ್ಷ ಹಾಗೂ ಇತರ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರು) ವಿಶೇಷವಾಗಿ ಹೃದಯ, ಲಿವರ್ ಸಮಸ್ಯೆ, ಗರ್ಭಿಣಿಯರು, ಎದೆ ಹಾಲುಣಿಸುವ ತಾಯಂದಿರು, ಹೊರಾಂಗಣ ಪ್ರದೇಶಗಳಿಗೆ ತೆರಳಿದಾಗ ಮಾಸ್ಕ್ ಧರಿಸಬೇಕು. ಅಗತ್ಯ ಗಾಳಿ, ಬೆಳಕಿನ ವ್ಯವಸ್ಥೆಯಿಲ್ಲದ ಮತ್ತು ಹೆಚ್ಚು ಜನಸಂದಣಿಯಿರುವ ಪ್ರದೇಶಗಳಿಗೆ ತೆರಳಬಾರದು.

ಜ್ವರ, ಕೆಮ್ಮು, ನೆಗಡಿ ಉಸಿರಾಟದ ಸೋಂಕಿನ ಲಕ್ಷಣ ಹೊಂದಿದವರು ತಕ್ಷಣ ವೈದ್ಯಕೀಯ ಸಲಹೆ ಪಡೆಯಬೇಕು. ಮೂಗು ಹಾಗೂ ಬಾಯಿ ಮುಚ್ಚುವಂತೆ ಮಾಸ್ಕ್ ಧರಿಸಬೇಕು. ವೈಯಕ್ತಿಕ ಸ್ವಚ್ಛತೆ, ಆಗಾಗ್ಗೆ ಕೈಗಳನ್ನು ಸೋಪು ಹಾಗೂ ನೀರಿನಿಂದ ತೊಳೆಯಬೇಕು. ಆರೋಗ್ಯ ಸಮಸ್ಯೆ ಇರುವವರು ಜನಸಂದಣಿಯ ಪ್ರದೇಶಗಳಿಗೆ ಭೇಟಿ ನೀಡಬೇಕಾದಲ್ಲಿ ಮಾಸ್ಕ್ ಧರಿಸಬೇಕು. ಸೋಂಕಿನ ಲಕ್ಷಣ ಹೊಂದಿರುವವರನ್ನು ಪರೀಕ್ಷೆಗೆ ಒಳಪಡಿಸಲು ಅಗತ್ಯ ತಂಡಗಳನ್ನು ಜಿಲ್ಲೆ ಮತ್ತು ತಾಲೂಕುಗಳಲ್ಲಿ ಕಾರ್ಯೋನ್ಮುಖಗೊಳಿಸುವುದು. ಪಟ್ಟಣ ಹಾಗೂ ಗ್ರಾಮಗಳಲ್ಲಿ ಜ್ವರ ಪ್ರಕರಣಗಳ ವರದಿ ಬಗ್ಗೆ ಪ್ರತಿದಿನ ಪರಿಶೀಲಿಸಬೇಕು. ಗಡಿ ಭಾಗಗಳಲ್ಲಿನ ಸ್ಥಳೀಯ ಸಂಸ್ಥೆಗಳ (ತಾಲೂಕು, ಪಟ್ಟಣ, ಗ್ರಾಮ ಪಂಚಾಯಿತಿ) ಮುಖ್ಯಸ್ಥರೊಂದಿಗೆ ಸಂಬಂಧಪಟ್ಟ ತಾಲೂಕು ಆರೋಗ್ಯಾಧಿಕಾರಿಗಳು ಸಭೆ ನಡೆಸಬೇಕು ಎಂದು ವಿಡಿಯೋ ಸಂವಾದದಲ್ಲಿ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಶಿಫಾರಸ್ಸು ಮಾಡಿತು.

ಕೊಡವ ಜನಾಂಗದ ಅಭಿವೃದ್ಧಿಗೆ ಹಲವು ಕಾರ್ಯಕ್ರಮ



ವಿರಾಜಪೇಟೆ ಕೊಡವ ಸಮಾಜದ ಆವರಣದಲ್ಲಿ ಕೊಡವ ಪೊಮ್ಮಕ್ಕಡ ಕೂಟದ ವತಿಯಿಂದ ಆಯೋಜಿಸಿದ್ದ ಪುತ್ತರಿ ಒತ್ತೊರ್ಮೆ ಕೂಟದ ಸಮಾರಂಭದಲ್ಲಿ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ಹಾಗೂ ಶಾಲಿನಿ ಕಾರ್ಯಪ್ಪ ಅವರನ್ನು ಸನ್ಮಾನಿಸಲಾಯಿತು.

ವಿರಾಜಪೇಟೆ, ಜ.10–ಕೊಡವ ಪೊಮ್ಮಕ್ಕಡ ಕೂಟ ಕೊಡವ ಜನಾಂಗದ ಅಭಿವೃದ್ಧಿಗೆ ಶ್ರಮಿಸುವ ಮೂಲಕ ಹಲವು ಕಾರ್ಯಕ್ರಮಗಳನ್ನು ನಡೆಸುತ್ತಿದೆ ಎಂದು ಬಾಳುಗೋಡು ಕೊಡವ ಸಮಾಜಗಳ ಒಕ್ಕೂಟದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ಹೇಳಿದರು.

ವಿರಾಜಪೇಟೆ ಕೊಡವ ಸಮಾಜದ ಆವರಣದಲ್ಲಿ ಕೊಡವ ಪೊಮ್ಮಕ್ಕಡ ಕೂಟದ ವತಿಯಿಂದ ಆಯೋಜಿಸಿದ್ದ ಪುತ್ತರಿ ಒತ್ತೊರ್ಮೆ ಕೂಟದ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬರಿಗೂ ತಾಯಿಯೇ ಮೊದಲ ಗುರು. ಭೂಮಿಗೆ ತಾಯಿಯ ಸ್ಥಾನ ನೀಡಿದ್ದೇವೆ. ತಾಯಿ, ಹೆಂಡತಿ, ಮಕ್ಕಳು ಎಲ್ಲರಲ್ಲೂ ಪೂಜ್ಯನೀಯ ಭಾವ ಹೊಂದಿದ್ದೇವೆ. ಹೆಣ್ಣಿನ ಪಾತ್ರ ಮಹತ್ವ ಪಡೆದಿದೆ. ಪ್ರತಿಯೊಬ್ಬರ ಯಶಸ್ಸಿನ ಹಿಂದೆ ಮಹಿಳೆ ಇದ್ದಾಳೆ. ಮಕ್ಕಳಿಗೆ ತಾಯಿ ಸಂಸ್ಕಾರ ಕಲಿಸುವ ಮೂಲಕ ವಿದ್ಯೆ ಕೊಡಬೇಕು ಎಂದರು.

ಕಳ್ಳಿಚಂಡ ಶಾಲಿನಿ ಕಾರ್ಯಪ್ಪ ಮಾತನಾಡಿ, ಹೆಣ್ಣಿಗೆ ಒಂದು ಅದ್ಭುತ ಶಕ್ತಿಯನ್ನು ದೇವರು ನೀಡಿದ್ದಾನೆ. ಎಲ್ಲಾ ಕೆಲಸವನ್ನು ನಿಭಾಯಿಸುವುದು ತಾಯಿ ಎನ್ನುವ ಬಿಂಬವಿದೆ. ಸಂಸಾರ ಸಾಗಿಸಲು ತಾಳ್ಮೆ ಮುಖ್ಯ. ಪುರುಷರು ಬಹಳ ಒತ್ತಡದಲ್ಲಿರುತ್ತಾರೆ. ಅವರ ಸಹಕಾರ ಇದ್ದಲ್ಲಿ ಮಹಿಳೆಗೆ ಎಲ್ಲವೂ ದೊರೆತಂತೆ. ಇತ್ತೀಚೆಗೆ ಹೆಣ್ಣು ಮಕ್ಕಳು ದಿಕ್ಕು ತಪ್ಪದಂತೆ ಅವರಿಗೆ ಬುದ್ಧಿ ಹೇಳಿ ಅವರ ಜೀವನ ಸುಧಾರಿಸಲು ತಂದೆ–ತಾಯಿ ದಾರಿದೀಪವಾಗಬೇಕು ಎಂದರು. ಕೊಡವ ಪೊಮ್ಮಕ್ಕಡ ಒಕ್ಕೂಟದ ಅಧ್ಯಕ್ಷೆ ಮನೆಯಪಂಡ ಕಾಂತಿ ಸತೀಶ್ ಮಾತನಾಡಿ, ಕೊಡವ ಸಮುದಾಯದಲ್ಲಿ ಮಕ್ಕಳ ಸಂಖ್ಯೆ ಕ್ಷೀಣಿಸುತ್ತಿದೆ. ಈ ನಿಟ್ಟಿನಲ್ಲಿ ಪೋಷಕರು ಮಕ್ಕಳಿಗೆ ತಿಳಿ ಹೇಳಿ ಕೊಡವ ಜನಾಂಗದ ಅಭಿವೃದ್ಧಿಗೆ ಹೆಚ್ಚು ಸಹಕರಿಸಬೇಕು ಎಂದರು.

ಪೊಮ್ಮಕ್ಕಡ ಕೂಟದ ಚುಮ್ಮಕ್ಕ ಗ್ರೂಪ್‌ನ ಅಧ್ಯಕ್ಷೆ ಉದ್ದಪಂಡ ವಿಮಲಾ ಮಾತನಾಡಿದರು. ಕೂಟದ ಹಿರಿಯ ಸಲಹೆಗಾರರಾದ ನಾಯಕಂಡ ಬೇಬಿ ಚಿಣ್ಣಪ್ಪ, ಕೊಡವ ಸಂಪ್ರದಾಯದಂತೆ ತಪ್ಪಡಕ ಕಟ್ಟುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಗಣ್ಯರು ಸಾಂಪ್ರದಾಯಿಕ ಉಡುಪು ಧರಿಸಿ ದೇವರ ನೆಲೆಯಲ್ಲಿ ಭತ್ತದ ಕದಿರು ಕಟ್ಟಿ ಸರ್ವರಿಗೂ ಒಳಿತಾಗಲೆಂದು ಪ್ರಾರ್ಥಿಸಿದರು. ಈ ಸಂದರ್ಭ ಮೂರು ಅಥವಾ ಅದಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರುವ ಹಿರಿಯ ತಾಯಂದಿರಾದ ಪುಚ್ಚಿಮಂಡ ರಾಧಾ ಕಾರ್ಯಪ್ಪ, ಮುಂಡಂಡ ರಾಣು ಮಂದಣ್ಣ, ಪಾಲಚಂಡ ಸೀಮಾ ಹಾಗೂ ಕಳ್ಳಿಚಂಡ ವಿಷ್ಣು ಕಾರ್ಯಪ್ಪ, ಶಾಲಿನಿ ಕಾರ್ಯಪ್ಪ ಅವರನ್ನು ಸನ್ಮಾನಿಸಲಾಯಿತು.

ಉಪಾಧ್ಯಕ್ಷೆ ಅಮ್ಮಣಿಚಂಡ ಈಶ್ವರಿ ಗಂಗಮ್ಮ, ಸಲಹಾ ಸಮಿತಿ ಸದಸ್ಯರಾದ ಬಿದ್ದಂಡ ರಾಣಿ ಹಾಗೂ ನಾಯಕಂಡ ಬೇಬಿ ಚಿಣ್ಣಪ್ಪ, ಕೊಡವ ಪೊಮ್ಮಕ್ಕಡ ಒಕ್ಕೂಟದ ಕಾರ್ಯದರ್ಶಿ ಬಯವಂಡ ಇಂದಿರಾ ಬೆಳ್ಯಪ್ಪ, ಮಾಳೇಟಿರ ಕವಿತಾ ಶ್ರೀನಿವಾಸ್, ಖಜಾಂಚಿ ತಾತಂಡ ಯಶು ಕಬೀರ್ ಉಪಸ್ಥಿತರಿದ್ದರು.

ಇದೇ ವೇಳೆ ಚುಮ್ಮಕ್ಕ ಗುಂಪಿನ ಸದಸ್ಯರು ಸ್ವಾಗತ ನೃತ್ಯ, ಕೋಲಾಟ, ಇತರ ನೃತ್ಯ ಪ್ರದರ್ಶನ ನೀಡಿದರು. ಕೊನೆಯಲ್ಲಿ ಮಹಿಳೆಯರಿಗೆ ವಾಲಗತ್ತಾಟ್ ಸೇರಿದಂತೆ ವಿವಿಧ ಸ್ಪರ್ಧೆ ಹಾಗೂ ಸೀರೆಯ ಬೆಲೆ ಹೇಳುವ ಸ್ಪರ್ಧೆಯಲ್ಲಿ ನಿಖರ ಬೆಲೆ ಹೇಳಿದವರಿಗೆ ಸೀರೆ ಬಹುಮಾನ ನೀಡಲಾಯಿತು.

ಕಾರು ವಿದ್ಯುತ್ ಕಂಬಕ್ಕೆ ಡಿಕ್ಕಿ



ನಾಪೋಕ್ಲು, ಜ.10–ಚಾಲಕನ ನಿಯಂತ್ರಣ ತಪ್ಪಿದ ಕಾರು ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಘಟನೆ ಬುಧವಾರ ಪಾರಾಣೆ ಗ್ರಾಮ ಪಂಚಾಯಿತಿಯ ಕೈಕಾಡು ಗ್ರಾಮದ ರಸ್ತೆಯ ತಿರುವಿನಲ್ಲಿ ನಡೆದಿದೆ.

ವಿರಾಜಪೇಟೆ ಕಡೆಯಿಂದ ನಾಪೋಕ್ಲುವಿಗೆ ನಾಲ್ವರು ಪ್ರಯಾಣಿಸುತ್ತಿದ್ದ ಕಾರು ಪಾರಾಣೆ–ನಾಪೋಕ್ಲು ಮುಖ್ಯರಸ್ತೆಯ ಕೈಕಾಡು ಸೇತುವೆ ಬಳಿಯ ತಿರುವಿನಲ್ಲಿ ರಸ್ತೆ ಬದಿಯ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮ ಕಾರಿನ ಒಂದು ಭಾಗ ಜಖಂಗೊಂಡಿದ್ದು, ಕಾರಿನಲ್ಲಿದ್ದ 4 ಪ್ರಯಾಣಿಕರಿಗೆ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಕಾಡಾನೆ ಹಾವಳಿ ಪ್ರದೇಶಕ್ಕೆ ಅರಣ್ಯಾಧಿಕಾರಿ ಭೇಟಿ



ಚಿಕ್ಕತ್ತೂರು ಗ್ರಾಮದ ಕಾಡಾನೆ ಹಾವಳಿ ಪ್ರದೇಶದ ಪರಿಶೀಲನೆ ವೇಳೆ ಕುಶಾಲನಗರ ವಲಯ ಅರಣ್ಯಾಧಿಕಾರಿ ರತನ್ ಕುಮಾರ್ ರೈತರ ಅಹವಾಲು ಆಲಿಸಿದರು.

ಕುಶಾಲನಗರ, ಜ.10– ಚಿಕ್ಕತ್ತೂರು ಗ್ರಾಮದ ಕಾಡಾನೆ ಹಾವಳಿ ಪ್ರದೇಶಕ್ಕೆ ಕುಶಾಲನಗರ ವಲಯ ಅರಣ್ಯಾಧಿಕಾರಿ ರತನ್ ಕುಮಾರ್ ಭೇಟಿ ನೀಡಿ, ಪರಿಶೀಲಿಸಿದರು.

ರೈತರ ದೂರಿನ ಹಿನ್ನೆಲೆಯಲ್ಲಿ ಭೇಟಿ ನೀಡಿ ಪರಿಶೀಲಿಸಿದ ಅವರು, ರೈತರ ಅಹವಾಲು ಆಲಿಸಿದರು. ಕಾಡಾನೆಗಳು ಸಲೀಸಾಗಿ ಅರಣ್ಯದಿಂದ ಬರುವ ಮಾರ್ಗದಲ್ಲಿ ಟ್ರಂಚ್‌ಗಳ ದುರಸ್ತಿ ಬಗ್ಗೆ ರೈತರು ಅಧಿಕಾರಿಯ ಗಮನ ಸೆಳೆದರು.

ಕೂಡುಮಂಗಳೂರು ಗ್ರಾಪಂ ಅಧ್ಯಕ್ಷ ಭಾಸ್ಕರ್ ನಾಯಕ್ ಮಾತನಾಡಿ, ಆನೆ ಕಂದಕಗಳು ಮಣ್ಣಿನಿಂದ ತುಂಬಿಹೋಗಿವೆ. ಇದನ್ನು ದುರಸ್ತಿಗೊಳಿಸಬೇಕು. ಸೋಲಾರ್ ಬೇಲಿ ನಿರ್ಮಿಸುವುದರೊಂದಿಗೆ ಕಾಡಾನೆ ಹಾವಳಿ ಶಾಶ್ವತವಾಗಿ ತಡೆಗಟ್ಟಲು ಕ್ರಮ ಕೈಗೊಳ್ಳಬೇಕು. ಬೆಳೆಹಾನಿಗೆ ಸೂಕ್ತ ಪರಿಹಾರ ನೀಡುವಂತೆ ಆಗ್ರಹಿಸಿದರು.

ಜಿಪಂ ಮಾಜಿ ಸದಸ್ಯ, ಕುಶಾಲನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ.ಶಶಿಧರ್ ಮಾತನಾಡಿ, ಈ ಭಾಗದ ಆನೆ ಕಂದಕಗಳು ಅವೈಜ್ಞಾನಿಕವಾಗಿವೆ. ಮಳೆ ನೀರು ನಿಂತು ಕಂದಕದ ಎರಡೂ ಬದಿ ಮಣ್ಣು ಕುಸಿದು ಕಂದಕ ಕಿರಿದಾಗಿದೆ. ಇದರಿಂದ ಆನೆಗಳು ಸಲೀಸಾಗಿ ಅರಣ್ಯವನ್ನು ದಾಟುತ್ತಿವೆ. ಕಂದಕವನ್ನು ಅಗಲೀಕರಣಗೊಳಿಸಬೇಕು. ಮುಂದಿನ ದಿನಗಳಲ್ಲಿ ಪರಿಣಾಮಕಾರಿ ಯೋಜನೆಗಳ ಮೂಲಕ ಕಾಡಾನೆ ಹಾವಳಿ ತಡೆಗಟ್ಟಲು ಅರಣ್ಯ ಇಲಾಖೆ ಕ್ರಮ ವಹಿಸುವಂತೆ ಒತ್ತಾಯಿಸಿದರು.

ಸಮಸ್ಯೆ ಆಲಿಸಿದ ಆರ್‌ಎಫ್‌ಓ ರತನ್ ಕುಮಾರ್ ಮಾತನಾಡಿ, ರೈತರ ದೂರಿನನ್ವಯ ಸ್ಥಳ ಪರಿಶೀಲನೆ ನಡೆಸಲಾಗಿದೆ. ಈ ಭಾಗದಲ್ಲಿ ಮಳೆಯಿಂದ ಆನೆ ಕಂದಕ ಮುಚ್ಚಿ ಕಿರಿದಾಗಿದ್ದು, ಕೆಲವೆಡೆ ಬಂಡೆಗಳನ್ನು ಸ್ಫೋಟಿಸುವ ಬಗ್ಗೆ ಗಮನಕ್ಕೆ ಬಂದಿದೆ. ಶೀಘ್ರದಲ್ಲೇ ಈ ಆನೆ ಕಂದಕ ದುರಸ್ತಿ ಕಾರ್ಯ ಕೈಗೊಳ್ಳಲಾಗುವುದು. ಮುಂದಿನ ದಿನಗಳಲ್ಲಿ ಕಾಡಾನೆ ಹಾವಳಿ ತಡೆಗಟ್ಟಲು ಅಗತ್ಯ ಕ್ರಮ ವಹಿಸುವುದಾಗಿ ಭರವಸೆ ನೀಡಿದರು.

ಕೂಡುಮಂಗಳೂರು ಗ್ರಾಪಂ ಸದಸ್ಯರಾದ ದಿನೇಶ್, ಖತೀಜ, ಸ್ಥಳೀಯರಾದ ವಿ.ಜೆ.ನವೀನ್, ಉದಯ, ನೌಶಾದ್, ಪುರುಷೋತ್ತಮ್, ಸುನಿಲ್, ಪುಟ್ಟೇಗೌಡ, ರಾಮೇಗೌಡ, ವಿನಯ್, ಸಣ್ಣೇಗೌಡ, ಉದಯ್, ಮಂಜಣ್ಣ ಡಿಆರ್‌ಎಫ್‌ಓ ಅನಿಲ್ ಡಿಸೋಜ, ಮಂಜೇಗೌಡ ಮತ್ತಿತರರು ಇದ್ದರು.

ಕೊಟ್ಟಗೇರಿ ಕಾಫಿ ತೋಟದಲ್ಲಿ ಹುಲಿ ಕಳೇಬರ ಪತ್ತೆ

ಗೋಣಿಕೊಪ್ಪ, ಜ.10–ಪೊನ್ನಂಪೇಟೆ ತಾಲೂಕಿನ ಕೊಟ್ಟಗೇರಿ ಗ್ರಾಮದ ಕಾಫಿ ತೋಟದಲ್ಲಿ ಬುಧವಾರ ಮಧ್ಯಾಹ್ನ ಗಂಡು ಹುಲಿ ಕಳೇಬರ ಪತ್ತೆಯಾಗಿದೆ.



ಕಾಫಿ ಬೆಳೆಗಾರ ಅಳಮೇಂಗಡ ದಿಲ್ಲು ತಿಮ್ಮಯ್ಯ ಅವರ ತೋಟದದಲ್ಲಿ ಸುಮಾರು 13 ವರ್ಷದ ಹುಲಿ ಕಳೇಬರ ಪತ್ತೆಯಾಗಿದ್ದು, ಹುಲಿಯ ಮುಂಗಾಲುಗಳಲ್ಲಿ ಗಾಯದ ಗುರುತುಗಳಿವೆ. ಮತ್ತೊಂದು ಹುಲಿಯೊಂದಿಗೆ ಕಾದಾಡಿ ಗಾಯಗೊಂಡು ನಿತ್ರಾಣದಿಂದ ಮೃತಪಟ್ಟಿರುವ ಬಗ್ಗೆ ಶಂಕೆ ವ್ಯಕ್ತವಾಗಿದೆ.

ತೋಟದ ಮಾಲೀಕರು ನೀಡಿದ ಮಾಹಿತಿ ಮೇರೆಗೆ ತಿತಿಮತಿ ಎಸಿಎಫ್ ಗೋಪಾಲ್, ಪೊನ್ನಂಪೇಟೆ ಆರ್‌ಎಫ್‌ಓ ಶಂಕರಪ್ಪ, ಡಿಆರ್‌ಎಫ್‌ಓ ದಿವಾಕರ್, ತಿತಿಮತಿ ವಲಯದ ಡಿಆರ್‌ಎಫ್‌ಓ ರವಿಕಿರಣ್, ಚೇತನ್, ಕಲ್ಲಳ್ಳ ವಿಭಾಗದ ಅರಣ್ಯ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದರು.

ಕತ್ತಲಾದ ಹಿನ್ನೆಲೆಯಲ್ಲಿ ಕಾಫಿ ತೋಟದಲ್ಲೇ ಹುಲಿಯ ಕಳೇಬರವನ್ನು ಇಡಲಾಗಿದ್ದು, ಗುರುವಾರ ಬೆಳಗ್ಗೆ ಅಲ್ಲೇ ಮರಣೋತ್ತರ ಪರೀಕ್ಷೆ ನಡೆಸಲು ಅರಣ್ಯ ಇಲಾಖೆ ಅಧಿಕಾರಿಗಳು ನಿರ್ಧರಿಸಿದ್ದಾರೆ. ಮರಣೋತ್ತರ ಪರೀಕ್ಷೆ ವರದಿ ಬಂದ ಬಳಿಕ ಹುಲಿಯ ಸಾವಿಗೆ ನಿಖರ ಕಾರಣ ತಿಳಿಯಲಿದೆ ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರಮಟ್ಟದ ಪಂಜಕುಸ್ತಿಗೆ ಹಸ್ಸನ್ ಆಯ್ಕೆ

ಸಿದ್ದಾಪುರ, ಜ.10–ರಾಜ್ಯಮಟ್ಟದ ಅಂಗವಿಕಲರ ಪಂಜಕುಸ್ತಿ ಪಂದ್ಯಾವಳಿಯಲ್ಲಿ ಜಿಲ್ಲೆಯ ಕ್ರೀಡಾಪಟು ಹಸ್ಸನ್ ಚಿನ್ನದ ಪದಕ ಗೆದ್ದು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.



ಏಷಿಯನ್ ಆರ್ಮ್ ರೆಸ್ಲಿಂಗ್ ಅಸೋಸಿಯೇಷನ್, ವರ್ಲ್ಡ್ ಆರ್ಮ್ ರೆಸ್ಲಿಂಗ್ ಅಸೋಸಿಯೇಷನ್ ಸಹಯೋಗದಲ್ಲಿ ಕರ್ನಾಟಕ ಆರ್ಮ್ ರೆಸ್ಲಿಂಗ್ ಅಸೋಸಿಯೇಷನ್ ಬೆಂಗಳೂರಿನಲ್ಲಿ ಆಯೋಜಿಸಿದ್ದ ಸ್ಪರ್ಧೆಯಲ್ಲಿ ಹಸ್ಸನ್ ಪ್ರಥಮ ಸ್ಥಾನ ಪಡೆದಿದ್ದಾರೆ. ಜೂ.6 ರಿಂದ 10ರ ವರೆಗೆ ಮಹಾರಾಷ್ಟ್ರದ ನಾಗಪುರ್‌ನಲ್ಲಿ ರಾಷ್ಟ್ರಮಟ್ಟದ ಪಂಜಕುಸ್ತಿ ಪಂದ್ಯಾವಳಿ ನಡೆಯಲಿದ್ದು, ಹಸ್ಸನ್‌ಗೆ ಬೆಂಗಳೂರಿನ ಕೋಚ್ ದೀಪಕ್ ತರಬೇತಿ ನೀಡುತ್ತಿದ್ದಾರೆ.

ಗಾಂಜಾ ಗಿಡ ಬೆಳೆದಿದ್ದ ವ್ಯಕ್ತಿ ಬಂಧನ



ಹನೂರು ತಾಲೂಕಿನ ಹಿರಿಯಂಬಲ ಗ್ರಾಮದ ಕೃಷಿ ಜಮೀನಿನಲ್ಲಿ ಬೆಳೆದಿದ್ದ ಗಾಂಜಾ ಗಿಡವನ್ನು ಪೊಲೀಸರು ವಶಪಡಿಸಿಕೊಂಡಿರುವುದು.

ಹನೂರು, ಜ.10– ತಾಲೂಕಿನ ಹುತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಿರಿಯಂಬಲ ಗ್ರಾಮದ ಕೃಷಿ ಜಮೀನಿನಲ್ಲಿ ಗಾಂಜಾ ಗಿಡ ಬೆಳೆದಿದ್ದ ವ್ಯಕ್ತಿಯನ್ನು ಹನೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಗ್ರಾಮದ ಪಂದೇಶ್ ಬಂಧಿತ ಆರೋಪಿ. ಈತ ತನ್ನ ಜಮೀನಿನಲ್ಲಿ ಗಾಂಜಾ ಗಿಡಗಳನ್ನು ಬೆಳೆದಿದ್ದ. ಮಾಹಿತಿ ಮೇರೆಗೆ ಕೊಳ್ಳೇಗಾಲ ಉಪವಿಭಾಗ ಡಿವೈಎಸ್ಪಿ ಸೋಮೇಗೌಡ ಮಾರ್ಗದರ್ಶನದಲ್ಲಿ ಹನೂರು ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕ ಶಶಿಕುಮಾರ್, ಉಪನಿರೀಕ್ಷಕ ಅಶ್ವಥ್ ಹಾಗೂ ಸಿಬ್ಬಂದಿ ದಾಳಿ ನಡೆಸಿ, 750 ಗ್ರಾಂ 10 ಗಿಡಗಳನ್ನು ವಶಕ್ಕೆ ಪಡೆದಿದ್ದಾರೆ.

ಇದೇ ವೇಳೆ ಆರೋಪಿಯನ್ನು ಬಂಧಿಸಿ, ನ್ಯಾಯಾಂಗ ವಶಕ್ಕೆ ಒಪ್ಪಿಸಿದರು. ಕಾರ್ಯಾಚರಣೆಯಲ್ಲಿ ಪೇದೆಗಳಾದ ರಾಘವೇಂದ್ರ, ದೊಡ್ಡವೀರ ಶೆಟ್ಟಿ, ಶಿವು, ರಾಜು, ಮಂಜುನಾಥ್, ಲೊಕನಹಳ್ಳಿ ವೈದ್ಯಾಧಿಕಾರಿ ಡಾ.ಪ್ರಸಾದ್ ಪಾಲ್ಗೊಂಡಿದ್ದರು.

ಚಿಕ್ಕಲ್ಲೂರು ಜಾತ್ರೆಯ ಭಕ್ತರಿಗೆ ಮೂಲಸೌಕರ್ಯ ಕಲ್ಪಿಸಿ

ಪೂರ್ವಭಾವಿ ಸಭೆಯಲ್ಲಿ ಅಧಿಕಾರಿಗಳಿಗೆ ಡಿಸಿ ಶಿಲ್ಪಾನಾಗ್ ಸೂಚನೆ



ಚಾಮರಾಜನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಚಿಕ್ಕಲ್ಲೂರು ಜಾತ್ರೆಯ ಪೂರ್ವಭಾವಿ ಸಭೆಯಲ್ಲಿ ಡಿಸಿ ಶಿಲ್ಪಾನಾಗ್ ಮಾತನಾಡಿದರು. ಎಸ್ಪಿ ಪದ್ಮಿನಿ ಸಾಹು, ತಹಶೀಲ್ದಾರ್ ಮಂಜುಳಾ, ತಾಪಂ ಇಓ ಶ್ರೀನಿವಾಸ್ ಇದ್ದರು.

ಚಾಮರಾಜನಗರ, ಜ.10– ಜಿಲ್ಲೆಯ ಚಿಕ್ಕಲ್ಲೂರಿನಲ್ಲಿ ಜ.25ರಿಂದ ನಡೆಯಲಿರುವ ಜಾತ್ರಾ ಮಹೋತ್ಸವಕ್ಕೆ ಬರುವ ಭಕ್ತರಿಗೆ ಮೂಲಸೌಕರ್ಯವನ್ನು ಸಮರ್ಪಕವಾಗಿ ಕಲ್ಪಿಸಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಚಿಕ್ಕಲ್ಲೂರು ಜಾತ್ರೆಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಚಿಕ್ಕಲ್ಲೂರು ಕ್ಷೇತ್ರದಲ್ಲಿ ಜ.25ರಿಂದ ನಡೆಯಲಿರುವ ಘನನೀಲ ಸಿದ್ದಪ್ಪಾಜಿ ಜಾತ್ರಾ ಮಹೋತ್ಸವಕ್ಕೆ ಆಗಮಿಸುವ ಭಕ್ತರಿಗೆ ಕುಡಿಯುವ ನೀರು, ಶೌಚಾಲಯ, ವಾಹನ ನಿಲುಗಡೆ ಸೇರಿದಂತೆ ಮೂಲಸೌಲಭ್ಯಗಳನ್ನು ಕೊರತೆಯಾಗದಂತೆ ಒದಗಿಸಬೇಕು. ತಾಲೂಕು, ಗ್ರಾಮ ಪಂಚಾಯಿತಿ ಅಧಿಕಾರಿಗಳು ಸೂಕ್ತ ವ್ಯವಸ್ಥೆ ಮಾಡಬೇಕು ಎಂದು ತಿಳಿಸಿದರು.

ಹೆಚ್ಚಿನ ಭಕ್ತರು ಜಾತ್ರೆಗೆ ಆಗಮಿಸಲಿರುವ ಹಿನ್ನೆಲೆಯಲ್ಲಿ ಕೆಎಸ್‌ಆರ್‌ಟಿಸಿಯಿಂದ ವಿವಿಧ ಕಡೆಗೆ ಹೆಚ್ಚು ಬಸ್‌ಗಳನ್ನು ನಿಯೋಜಿಸಬೇಕು. ಕ್ಷೇತ್ರದಲ್ಲಿ ಬಸ್ ನಿಲುಗಡೆಗೆ ನಿಗದಿತ ಸ್ಥಳ ಗೊತ್ತು ಮಾಡಬೇಕು. ಸಂಚಾರ ಮಾರ್ಗಗಳ ಬಗ್ಗೆ ಮೊದಲೇ ಮಾಹಿತಿ ನೀಡಬೇಕು. ಅಗತ್ಯವಿರುವೆಡೆ ಸೂಚನಾ ಫಲಕಗಳನ್ನು ಅಳವಡಿಸಬೇಕು. ಇತರೆ ವಾಹನಗಳ ಸುಗಮ ಸಂಚಾರಕ್ಕೂ ಕ್ರಮ ವಹಿಸಬೇಕು ಎಂದರು.

ಚಿಕ್ಕಲ್ಲೂರು ಕ್ಷೇತ್ರ ಸಂಪರ್ಕಿಸುವ ರಸ್ತೆ ಕಾಮಗಾರಿಯನ್ನು ತ್ವರಿತವಾಗಿ ಆರಂಭಿಸಬೇಕು. ಗುಣಮಟ್ಟದ ಕೆಲಸ ಆಗಬೇಕು. ಅಧಿಕಾರಿಗಳು ಖುದ್ದು ಸ್ಥಳದಲ್ಲಿದ್ದು, ಪರಿಶೀಲಿಸಬೇಕು. ಇತರೆ ಕೆಲಸಗಳಿಗೂ ಆದ್ಯತೆ ನೀಡಿ, ಜಾತ್ರೆಗೆ ಅಗತ್ಯ ಸಿದ್ಧತೆ ಕೈಗೊಳ್ಳಬೇಕು. ಜಾತ್ರಾ ಸಮಯದಲ್ಲಿ ಸ್ವಚ್ಛತೆಗೆ ವಿಶೇಷ ಗಮನ ನೀಡಿ, ಪ್ರತಿದಿನ ನೈರ್ಮಲ್ಯ ಕಾಪಾಡಬೇಕು. ತ್ಯಾಜ್ಯ ಸಂಗ್ರಹಿಸಿ ವಿಲೇವಾರಿ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಬೇಕು. ವಿಶೇಷವಾಗಿ ಪಂಚಾಯಿತಿ ಅಧಿಕಾರಿಗಳು ಸುವ್ಯವಸ್ಥಿತವಾಗಿ ಸ್ವಚ್ಛತಾ ಕಾರ್ಯಕ್ಕೆ ಸಕಲ ವ್ಯವಸ್ಥೆ ಮಾಡಬೇಕು ಎಂದರು.

ಭಕ್ತರಿಗೆ ಚಿಕ್ಕಲ್ಲೂರು ಮಠದ ವತಿಯಿಂದಲೂ ಅಗತ್ಯ ವ್ಯವಸ್ಥೆ ಕಲ್ಪಿಸಬೇಕು. ಪೊಲೀಸ್ ಬಂದೋಬಸ್ತ್ ನಿರ್ವಹಣೆಗಾಗಿ ಚೆಕ್‌ಪೋಸ್ಟ್‌ಗಳ ಸ್ಥಾಪನೆ, ಬ್ಯಾರಿಕೇಡ್ ಅಳವಡಿಸಬೇಕು. ಜಾತ್ರಾ ಸಂಬಂಧ ನೀಡಲಾಗುವ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು.

> ಚಿಕ್ಕಲ್ಲೂರು ಜಾತ್ರೆಗೆ ಹೆಚ್ಚು ಜನರು ಸೇರುವುದರಿಂದ ಆರೋಗ್ಯದ ಹಿತದೃಷ್ಟಿಯಿಂದ ಮಾಸ್ಕ್‌ಗಳನ್ನು ಧರಿಸುವುದು ಒಳಿತು. ಆರೋಗ್ಯ ಸಂಬಂಧಿ ಮುಂಜಾಗ್ರತಾ ಕ್ರಮಗಳನ್ನು ಆರೋಗ್ಯ ಇಲಾಖೆ ನೋಡಿಕೊಳ್ಳಬೇಕು. ಕ್ಷೇತ್ರದಲ್ಲೇ ಆರೋಗ್ಯ ಕೇಂದ್ರ ತೆರೆಯಬೇಕು. ಸೆಸ್ಕ್ ಅಧಿಕಾರಿಗಳು ಜಾತ್ರಾ ಆವರಣದಲ್ಲಿ ಯಾವುದೇ ವಿದ್ಯುತ್ ಅವಘಡಗಳಿಗೆ ಅವಕಾಶವಾಗದಂತೆ ಮುನ್ನೆಚ್ಚರಿಕೆ ಕ್ರಮಗಳಿಗೆ ಮುಂದಾಗಬೇಕು.
>
> – ಶಿಲ್ಪಾನಾಗ್, ಜಿಲ್ಲಾಧಿಕಾರಿ

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ತಹಶೀಲ್ದಾರ್ ಮಂಜುಳಾ, ತಾಪಂ ಕಾರ್ಯನಿರ್ವಾಹಕಾಧಿಕಾರಿ ಶ್ರೀನಿವಾಸ್, ಚಿಕ್ಕಲ್ಲೂರು ಮಠದ ಜ್ಞಾನಾನಂದ ಚನ್ನರಾಜೇ ಅರಸ್, ಬಿ.ಪಿ.ಭರತರಾಜೇ ಅರಸ್, ಸನ್ಮತಿ ಅರಸ್, ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಬೇಗೂರಿನಲ್ಲಿ ಸ್ಕೌಟ್ಸ್ ಅಂಡ್ ಗೈಡ್ಸ್ ರ್‍ಯಾಲಿ

ಬೇಗೂರು(ಗುಂಡ್ಲುಪೇಟೆ), ಜ.10– ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಸಂಸ್ಥೆಯ ವತಿಯಿಂದ ತಾಲೂಕು ಮಟ್ಟದ ರ್‍ಯಾಲಿ ಮತ್ತು ಪರಿಸರ ಜಾಗೃತಿ ಕಾರ್ಯಕ್ರಮವನ್ನು ಬೇಗೂರು ಗ್ರಾಮದ ಸರ್ಕಾರಿ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಹಮ್ಮಿಕೊಳ್ಳಲಾಯಿತು.

ಸ್ಕೌಟ್ಸ್ ಅಂಡ್ ಗೈಡ್ಸ್ ಸಂಸ್ಥೆಯ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್.ಸಿಂಧ್ಯಾ ಮಾತನಾಡಿ, ದಿವಂಗತ ಎಚ್.ಎಸ್.ಮಹದೇವ್ ಪ್ರಸಾದ್ ಈ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ಪುತ್ರ ಎಚ್.ಎಂ.ಗಣೇಶ್‌ಪ್ರಸಾದ್ ಕ್ಷೇತ್ರದ ಶಾಸಕರಾಗಿರುವುದು ಹೆಮ್ಮೆಯ ವಿಚಾರ. ತಾಲೂಕಿನ ನೀರ್ ಸಾಹೇಬ್ ಎಂದೇ ಖ್ಯಾತಿಯಾಗಿರುವ ನಜೀರ್ ಸಾಬ್ ಅವರನ್ನು ಇದೇ ವೇಳೆ ಸ್ಮರಿಸಿದರು.



ಬೇಗೂರಿನ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಸ್ಕೌಟ್ಸ್ ಅಂಡ್ ಗೈಡ್ಸ್‌ನ ರ್‍ಯಾಲಿ ಮತ್ತು ಪರಿಸರ ಜಾಗೃತಿ ಕಾರ್ಯಕ್ರಮವನ್ನು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಉದ್ಘಾಟಿಸಿದರು. ಶ್ರೀ ಬಸವಯೋಗ ಸ್ವಾಮೀಜಿ, ಪಿ.ಜಿ.ಆರ್.ಸಿಂಧ್ಯಾ ಇದ್ದರು.

ಶಾಸಕ ಎಚ್.ಎಂ.ಗಣೇಶ್‌ಪ್ರಸಾದ್ ಮಾತನಾಡಿ, ಬಸವಣ್ಣನವರ ಕಾಯಕವೇ ಕೈಲಾಸ ಎಂಬಂತೆ ಪ್ರತಿಯೊಬ್ಬ ವ್ಯಕ್ತಿ ಸತ್ಪ್ರಜೆಯಾಗಲು ಸ್ಕೌಟ್ಸ್ ಅಂಡ್ ಗೈಡ್ಸ್‌ನಂತಹ ಸಂಸ್ಥೆಗಳು ಅತ್ಯವಶ್ಯಕ. ಇದರ ಸೇವೆಗೆ ನಾವು ಸಹ ಸದಾ ಬದ್ಧರಾಗಿರುತ್ತೇವೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಬಸವಯೋಗ ಸ್ವಾಮೀಜಿ, ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಚ್.ಎಸ್.ನಂಜುಂಡಪ್ರಸಾದ್, ಮುಖಂಡರಾದ ಹಂಗಳ ನಂಜಪ್ಪ, ಬಿ.ಎಂ.ಮುನಿರಾಜು, ರಾಜಶೇಖರ್, ಆರ್.ಎಸ್.ನಾಗರಾಜು, ನಾಜೀಮುದ್ದೀನ್, ಗ್ರಾಪಂ ಅಧ್ಯಕ್ಷೆ ಜಯಮ್ಮ, ಉಪಾಧ್ಯಕ್ಷ ಮಹದೇವಸ್ವಾಮಿ, ಮಾಜಿ ಗ್ರಾಪಂ ಅಧ್ಯಕ್ಷ ರಾಜಶೆಟ್ಟಿ, ಗುರುಸ್ವಾಮಿ, ಡಿಡಿಪಿಓ ರಾಮಚಂದ್ರ ರಾಜೇ ಅರಸ್, ಬಿಇಓ ರಾಜಶೇಖರ್, ಅಕ್ಷರ ದಾಸೋಹ ಅಧ್ಯಕ್ಷ ಮಂಜಣ್ಣ, ಪ್ರಾಂಶುಪಾಲರಾದ ಚಂದ್ರಶೇಖರ್, ಸ್ಕೌಟ್ಸ್ ಅಂಡ್ ಗೈಡ್ಸ್‌ನ ಕಾರ್ಯದರ್ಶಿ ರಾಮಚಂದ್ರ, ಸಂಘಟಕರಾದ ಅಶೋಕ್, ತಾಲೂಕು ಕಾರ್ಯದರ್ಶಿ ಹಾಗೂ ದೈಹಿಕ ಶಿಕ್ಷಣ ಶಿಕ್ಷಕಿ ಅನ್ನಪೂರ್ಣಮ್ಮ, ಎಚ್.ಎನ್.ಬಸವರಾಜು, ಮಲ್ಲಿದಾಸ್, ಸುರೇಶ್, ಭಾಸ್ಕರ್, ಎ.ರವಿ, ಚಂದ್ರು, ನೀಲಕಂಠಪ್ಪ, ಶಿವಲಿಂಗಪ್ಪ, ಬಂಗಾರ ನಾಯಕ, ನಾಗೇಶ್ ಹಾಜರಿದ್ದರು.

ರಾಮಸಮುದ್ರದಲ್ಲಿ ಮಂತ್ರಾಕ್ಷತೆ ವಿತರಣೆಗೆ ಚಾಲನೆ



ಚಾಮರಾಜನಗರದ ರಾಮಸಮುದ್ರದಲ್ಲಿ ಅಯೋಧ್ಯೆ ಮಂತ್ರಾಕ್ಷತೆ ವಿತರಣೆಗೆ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಚಾಲನೆ ನೀಡಿದರು.

ಚಾಮರಾಜನಗರ, ಜ.10– ರಾಮಸಮುದ್ರದ ಕೋಟೆ ಬೀದಿಯ ಶ್ರೀ ರಾಮಮಂದಿರದಲ್ಲಿ ವಿಶೇಷ ಪೂಜೆ ಸಲ್ಲಿಸಿ,, ಅಯೋಧ್ಯೆ ಮಂತ್ರಾಕ್ಷತೆ ವಿತರಣೆಗೆ ಚಾಲನೆ ನೀಡಲಾಯಿತು. ನಂತರ ಬಿಜೆಪಿ ಕಾರ್ಯಕರ್ತರು ಮನೆ ಮನೆಗೆ ತೆರಳಿ ಮಂತ್ರಾಕ್ಷತೆ ವಿತರಿಸಿದರು.

ಕಾರ್ಯಕ್ರಮಕ್ಕೆ ಚಾಲನೆ ಮಾತನಾಡಿದ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಇತಿಹಾಸ ಅಯೋಧ್ಯೆ ರಾಮಮಂದಿರ ನಿರ್ಮಾಣ ಹಿಂದೂಗಳ ಬಹುದಿನದ ಕನಸು ನನಸಾಗಿದೆ. ಜ.22ರಂದು ರಾಷ್ಟ್ರಕ್ಕೆ ರಾಮಮಂದಿರವನ್ನು ಸಮರ್ಪಣೆ ಮಾಡಲಾಗುತ್ತಿದೆ. ಅಂದು ಇಡೀ ದೇಶವೇ ಹಬ್ಬದ ವಾತಾವರಣದಲ್ಲಿ ಕೂಡಿರುತ್ತದೆ. ಅಂದು ಮನೆಗಳ ಮುಂದೆ ದೀಪ ಬೆಳಗಿಸುವಂತೆ ತಿಳಿಸಲಾಗಿದೆ. ರಾಮ ಶಕ್ತಿ, ದೇಶದ ಶಕ್ತಿಯಾಗಿದ್ದು, ಅಯೋಧ್ಯೆಯ ರಾಮ ಮಂತ್ರಾಕ್ಷತೆಯನ್ನು ರಾಮಸಮುದ್ರದ ಪ್ರತಿ ಹಿಂದೂಗಳ ಮನೆಗೆ ವಿತರಿಸಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಹಿರಿಯ ಮುಖಂಡರಾದ ಆರ್.ಪುಟ್ಟಮಲ್ಲಪ್ಪ, ಆರ್.ವಿ.ಮಹದೇವಸ್ವಾಮಿ, ಬಿಜೆಪಿ ನಗರ ಮಂಡಲ ಪ್ರಧಾನ ಕಾರ್ಯದರ್ಶಿ ರಾಮಸಮುದ್ರ ಶಿವು, ಟೌನ್ ಕಾರ್ಯದರ್ಶಿ ಭೃಂಗೇಶ್, ರಂಗಸ್ವಾಮಿ, ಪಿಎಸಿಸಿ ಬ್ಯಾಂಕ್ ಅಧ್ಯಕ್ಷ ಆರ್.ಡಿ.ಮಹೇಶ್, ನಾಗೇಶ್ ಇತರರು ಹಾಜರಿದ್ದರು.

ಶಿಕ್ಷಕ ದಿವಾಕರ್ ನಿಧನ

ಕೊಳ್ಳೇಗಾಲ, ಜ.10–ಯಳಂದೂರು ತಾಲೂಕಿನ ಅಲ್ಕೆರೆ ಅಗ್ರಹಾರ ಸರ್ಕಾರಿ ಶಾಲೆಯ ಶಿಕ್ಷಕ ದಿವಾಕರ್ (51) ಹೃದಯಾಘಾತದಿಂದ ಬುಧವಾರ ಬೆಳಗ್ಗೆ ನಿಧನರಾದರು.



ಮೃತರು ತಾಯಿ ಮಹದೇವಮ್ಮ, ಪತ್ನಿ ಶಶಿಕಲಾ, ಪುತ್ರ ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಪಟ್ಟಣದ ದೇವಾಂಗ ಜನಾಂಗದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಮೃತರು ರಾಷ್ಟ್ರ, ರಾಜ್ಯ ಹಾಗೂ ಜಿಲ್ಲಾ ಪ್ರಶಸ್ತಿ ಪಡೆದು ಉತ್ತಮ ಶಿಕ್ಷಕ ಎಂಬ ಹೊಗಳಿಕೆಗೆ ಪಾತ್ರರಾಗಿದ್ದರು. ಯಳಂದೂರು ಬಿಇಓ ಕಾಂತರಾಜು, ಕೊಳ್ಳೇಗಾಲ ಬಿಇಓ ಮಂಜುಳಾ ಸೇರಿದಂತೆ ಮತ್ತಿತರರು ಸಂತಾಪ ಸೂಚಿಸಿದ್ದಾರೆ.

ಆಲೂರು ಎಸ್.ಮಹದೇವಯ್ಯ

ಆಲೂರು, ಜ.10–ಚಾಮರಾಜನಗರ ತಾಲೂಕಿನ ಆಲೂರು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಹಾಗೂ ಆದಿ ಕರ್ನಾಟದ ಜನಾಂಗದ ಯಜಮಾನ ಎಸ್.ಮಹದೇವಯ್ಯ (76) ಬುಧವಾರ ಸಂಜೆ ನಿಧನರಾದರು.



ಮೃತರು ಪುತ್ರ ಹಾಗೂ ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಆಲೂರಿನ ಮೃತರ ತೋಟದಲ್ಲಿ ಗುರುವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಲಿದೆ ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಸಮೂಹ ದೇವಾಲಯ ಹುಂಡಿಯಲ್ಲಿ 12.54 ಲಕ್ಷ ರೂ. ಸಂಗ್ರಹ




ಕೊಳ್ಳೇಗಾಲ ತಾಲೂಕಿನ ಸಮೂಹ ದೇವಾಲಯಗಳ ಹುಂಡಿ ಎಣಿಕೆ ನಡೆಸಲಾಯಿತು.

ಕೊಳ್ಳೇಗಾಲ, ಜ.10–ತಾಲೂಕಿನ ಸೋಮೇಶ್ವರ, ಮಧ್ಯರಂಗನಾಥ ಹಾಗೂ ಮಾರಮ್ಮ ದೇವಿಯ ಸಮೂಹ ದೇವಾಲಯಗಳ ಹುಂಡಿಯಲ್ಲಿ 12,54,325 ರೂ. ಸಂಗ್ರಹವಾಗಿದೆ.

ಬುಧವಾರ ಉಪವಿಭಾಗಾಧಿಕಾರಿ ಮಹೇಶ್ ಸೂಚನೆಯಂತೆ ಸೋಮೇಶ್ವರ, ಮಧ್ಯರಂಗನಾಥ ಹಾಗೂ ಮಾರಮ್ಮ ದೇವಿ ದೇವಾಲಯಗಳಲ್ಲಿ ಹುಂಡಿ ಎಣಿಕೆ ನಡೆಸಲಾಯಿತು. ಎಣಿಕೆಯಲ್ಲಿ ತಾಳಿ ಸೇರಿದಂತೆ 3 ಗ್ರಾಂ ಚಿನ್ನ ಹಾಗೂ 12,54,325 ರೂ. ದೊರೆತಿದೆ. ಎಣಿಕೆ ಕಾರ್ಯದಲ್ಲಿ ಉಪತಹಸೀಲ್ದಾರ್ ವಿಜಯ್, ಕಂದಾಯಾಧಿಕಾರಿ ರಂಗಸ್ವಾಮಿ, ನಿರಂಜನ್, ಸಿಬ್ಬಂದಿ ರಾಕೇಶ್, ಮಮತಾ, ಸತೀಶ್, ಭೀಮಪ್ಪ, ಪ್ರದೀಪ್, ಅನಿಲ್ ಇನ್ನಿತರಿದ್ದರು.

ಇಂದು ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಲಕ್ಷ್ಮೀನಾರಾಯಣ ಜಾಗತಿಕ ಸಂಗೀತ ಉತ್ಸವ



ಡಾ.ಎಲ್.ಸುಬ್ರಮಣಿಂಯಂ


ಕವಿತಾ ಕೃಷ್ಣಮೂರ್ತಿ



ಪ್ರೊ.ಎಲ್.ಲಕ್ಷ್ಮಿನಾರಾಯಣ


ಅಬ್ಜಲ್ ಮುಖಿತ್‌ದಿನ್


ಗುಲ್‌ಮಿರಾ



ಅಂಬಿ ಸುಬ್ರಮಣಿಯಮ್, ಬಿಂದು ಸುಬ್ರಮಣಿಯಮ್


ರಮಣ ಮೂರ್ತಿ


ತನ್ಮೋಯ್ ಬೋಸ್

ಮೈಸೂರು,ಜ.10–ಮೈಸೂರಿನ ಅವಧೂತ ದತ್ತಪೀಠಂ, ಸುಬ್ರಮಣಿಯನ್ ಫೌಂಡೇಷನ್, ಲಕ್ಷ್ಮೀನಾರಾಯಣ ಗ್ಲೋಬಲ್ ಸೆಂಟರ್ ಆಫ್ ಎಕ್ಸ್‌ಲೆನ್ಸಿ ಮತ್ತು ಮಸ್ಸಿ ಮ್ಯೂಸಿಕಲ್ ಸ್ಕೂಲ್ ಆಫ್ ಮ್ಯೂಸಿಕ್ ಸಂಯುಕ್ತ ಆಶ್ರಯದಲ್ಲಿ ನಾಳೆ (ಜ.11) ಸಂಜೆ 6.30ಕ್ಕೆ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿರುವ ನಾದ ಮಂಟಪದಲ್ಲಿ ವಯಲಿನ್ ಮಾಂತ್ರಿಕ ಡಾ.ಎಲ್. ಸುಬ್ರಮಣಿಯಂ ಅವರ ಭಾರತ್ ಸಿಂಫೋನಿ ಮತ್ತು ದತ್ತ ಸಿಂಫೋನಿ, ಜಾಗತಿಕ ಸಂಗೀತ ಉತ್ಸವವನ್ನು ಏರ್ಪಡಿಸಲಾಗಿದೆ.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಮಾಸ್ಟರ್ ಅಬ್ಜಲ್ ಮುಖಿತ್‌ದಿನ್, ಡಾ.ಎಲ್.ಸುಬ್ರಮಣಿಯಂ, ಕವಿತಾ ಕೃಷ್ಣಮೂರ್ತಿ, ಗುಲ್‌ಮಿರಾ ಕುಟ್ಟಿಬಾದಾಮೊವಾ, ಡಾ.ಬಿಂದು ಸುಬ್ರಮಣಿಯಮ್, ಡಾ.ಅಂಬಿ ಸುಬ್ರಮಣಿಯಮ್ ಮತ್ತು ಮಹತಿ ಸುಬ್ರಮಣಿಯಮ್ ಅವರು ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಕಾರ್ಯಕ್ರಮಕ್ಕೆ ಪ್ರವೇಶ ಉಚಿತವಾಗಿರುತ್ತದೆ. ಡಾ.ಎಲ್.ಸುಬ್ರಮಣಿಯಂ, ಕವಿತಾ ಕೃಷ್ಣಮೂರ್ತಿ ಸುಬ್ರಮಣ್ಯಂ ಮತ್ತು ಅಂಬಿ ಸುಬ್ರಮಣ್ಯಂ ಅವರೊಂದಿಗೆ ಸುಮಾರು 100 ಸಂಗೀತಗಾರರು ಕಾರ್ಯಕ್ರಮ ನೀಡಲಿದ್ದಾರೆ. ವಿ.ವಿ.ರಮಣಮೂರ್ತಿ (ಮೃದಂಗ), ಪಂ. ತನ್ಮೋಯ್ ಬೋಸ್ (ತಬಲಾ) ಸಹಕಾರ ನೀಡಲಿದ್ದಾರೆ.

ಖಾಸಗಿ ಬ್ಯಾಂಕ್‌ನಿಂದ ಕಿರುಕುಳ ಆರೋಪ

ವಿಧಾನಸೌಧದೆದುರು ಆತ್ಮಹತ್ಯೆಗೆ ದಂಪತಿ ಯತ್ನ

ಬೆಂಗಳೂರು: ಖಾಸಗಿ ಬ್ಯಾಂಕ್‌ನಿಂದ ನಿರಂತರ ಕಿರುಕುಳ ಎಂದು ಆರೋಪಿಸಿ ವಿಧಾನಸೌಧದ ಮೂರನೇ ಗೇಟ್ ಬಳಿ ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆಗೆ ಕುಟುಂಬವೊಂದು ಯತ್ನಿಸಿದ ಘಟನೆ ಬುಧವಾರ ಬೆಳಗ್ಗೆ ನಡೆದಿದೆ.

ಕುಟುಂಬ ಸಮೇತ ಬಂದ ಶಾಹಿಸ್ತಬಾನು ಎಂಬುವವರು ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಈ ವೇಳೆ ಸ್ಥಳದಲ್ಲಿದ್ದ ಪೊಲೀಸರು ಅವರನ್ನು ವಶಕ್ಕೆ ಪಡೆದುಕೊಂಡರು.

ಬೆಂಗಳೂರು ಕೋ ಆಪರೇಟಿವ್ ಸೊಸೈಟಿ ಚಾಮರಾಜಪೇಟೆ ಗೌರಿಪಾಳ್ಯದಲ್ಲಿ ಶಾಹಿಸ್ತಾ ಬಾನು ಅವರ ಗಂಡ ಮುನಾಯಿದುಲ್ಲಾ ಸಾಲ ಪಡೆದುಕೊಂಡಿದ್ದರು. ಅವರು ಜೆಜೆ ನಗರದಲ್ಲಿರುವ ಮನೆಗೆ 50 ಲಕ್ಷ ಲೋನ್ ತೆಗೆದುಕೊಂಡಿದ್ದರು. ಒಟ್ಟು 97 ಲಕ್ಷ ಹಣ ಪಾವತಿಸಿದ್ದೇವೆ. ಆದರೂ ಕಿರುಕುಳ ನೀಡುತ್ತಿದ್ದಾರೆ ಎಂಬುದು ಆತ್ಮಹತ್ಯೆಗೆ ಯತ್ನಿಸಿದವರ ಆರೋಪವಾಗಿದೆ.

ಈ ಬಗ್ಗೆ ಹಲವು ಬಾರಿ ಸ್ಥಳೀಯ ಶಾಸಕ ಜಮೀರ್ ಅಹ್ಮದ್ ಗಮನಕ್ಕೆ ತಂದರೂ ಯಾವುದೇ ಪ್ರಯೋಜನ ಆಗಿಲ್ಲ ಎಂದು ಹೇಳಿದೆ.



ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಚಾಮರಾಜಪೇಟೆ ಶಾಖೆಯಲ್ಲಿ ಗೌರಿಪಾಳ್ಯದ ನಿವಾಸಿಗಳಾದ ಮುನಾಯಿತವುಲ್ಲಾ (55 ವರ್ಷ) ಅವರ ಪತ್ನಿ ಸಾಹಿಸ್ತಾಬಾನಾರವರ ಕುಟುಂಬ 50 ಲಕ್ಷ ರೂ ಸಾಲ ತೆಗೆದುಕೊಂಡಿದ್ದರು. ಅದಕ್ಕೆ ಪ್ರತಿಯಾಗಿ ಈವರೆಗೂ ಸುಮಾರು 97 ಲಕ್ಷ ಹಣವನ್ನು ಬ್ಯಾಂಕ್‌ಗೆ ಪಾವತಿಸಿರುತ್ತಾರೆ. ಆದರೆ ಸಾಲ ಬಾಕಿ ಇದೆ ಎಂದು ತಿಳಿಸಿದ ಬ್ಯಾಂಕ್‌ನವರು ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು 141 ಕೋಟಿ ರೂ.ಗೆ ಮಾರಾಟ ಮಾಡಿರುತ್ತಾರೆ. ನಮಗೆ ಅನ್ಯಾಯವಾಗಿದೆ ಎಂದು ಹೇಳಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಛತ್ರ ಖಾಲಿ ಇದೆ
ಶ್ರೀ ಭ್ರಮರಾಂಭ ಮಲ್ಲಿಕಾರ್ಜುನಸ್ವಾಮಿ ಕಲ್ಯಾಣ ಮಂಟಪ,
ದಿನಾಂಕ: 27–04–2024
28–04–2024
9448043116
9945244867

ಛತ್ರ ಖಾಲಿ ಇದೆ
ಸಾಮ್ರಾಟ & ಗಗನ್ ಕಾಂಪ್ಲೆಕ್ಸ್ 1/SMT ಉದಯರವಿ ರಸ್ತೆ, ಕುವೆಂಪುನಗರ, ಮೈಸೂರು
3500 Sqft ಕಮರ್ಷಿಯಲ್ ಜಾಗ ಬಾಡಿಗೆಗೆ ದೊರೆಯುತ್ತದೆ.
BPO Company ಗಳಿಗೆ ಸೂಕ್ತವಾದ ಜಾಗ A.C. Lift, Parking, Plug & Play
Contact Maniraj 7899382338 9008796029

WANTED
ಜ್ಯೂಸ್ ಕಂಪನಿಗೆ & ಶಾಪ್ ಕೆಲಸಕ್ಕೆ Full Time/ part Time ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ.
9035572879
7090079700

ಸೋಫಾ ರಿಪೇರ್ಸ್ ಅಂಡ್ ವರ್ಕ್ಸ್
9591012944

WANTED
COMPUTER TYPIST (Male / Female) FOR ADVOCATE OFFICE
Qualification: Typing - English & Kannada (Kan - Nudi / Baraha) in M.S. Word & Excel / Page Maker
9.30 am to 2 pm. Sunday: 10.30 to 3 pm. Salary: 10,000/- per month. For evening: (Male only). 6.30 pm to 11.30 pm. Salary: Rs. 10,000/- per month.
7349337469, 9448525072

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

SHRIRAM LAND SITES
"Oxygen-2"
Rs.14.99L @ Lakhs Onwards
HD Kote Road, (Jayapura)
(90% Home Loan Available)
9686188919
7676644999

ವಿಠಲ್ ರೆಕಾರ್ಡ್ಸ್ ಪ್ರೈವೇಟ್ ಲಿಮಿಟೆಡ್
ಖಾಲಿ ಹುದ್ದೆ: 150+
DATA ENTRY OPERATOR
ಸಂಬಳ 10,000 + 5000 Incentive
ಸಂದರ್ಶನದ ಸಮಯ: 9.30 ರಿಂದ 5.30.
ವಿಳಾಸ: #42, JCK ಇಂಡಸ್ಟ್ರಿಯಲ್ ಪಾರ್ಕ್, ಮೇಟಗಳ್ಳಿ ಪೋಸ್ಟ್, ಪ್ರೀತಿ ಗ್ರಾನೈಟ್ ಹತ್ತಿರ, ಕೆ.ಆರ್.ಎಸ್. ರಸ್ತೆ, ಮೈಸೂರು–570 016. ಕರೆ ಮಾಡಿ:
Mob: 8867064586

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಸೇಲ್ಸ್ ಮ್ಯಾನ್ ಕೆಲಸ ಮಾಡಲು ಅನುಭವವುಳ್ಳ ಹುಡುಗ ಹುಡುಗಿಯರು ಬೇಕಾಗಿದ್ದಾರೆ.
ಆಕರ್ಷಕ ಸಂಬಳ, ESI+PF ಮತ್ತು ಇನ್ಸೆಂಟೀವ್ ಸೌಲಭ್ಯದೊಂದಿಗೆ
ಗಾಂಧಿ ಸರ್ಕಲ್, ಮೈಸೂರು
9980620678
Call after 10:30 am

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

WANTED For an injection Moulding, Unit in Mysuru requires:
1)Line Quality Qualification :ITI fitter, Diploma Mech & BE Mech Fresher or Exp
2)HR Assistant with 2 to 3 Yrs Exp
3)Data entry operators Fresher or Exp
4)Front office Executive 1 to 2 years Exp
5)Production Head 5 to 10 years Exp
6)Production supervisor 2 to 5 years Exp
Apply with a Bio-data in detail, present and expected salary. those who are willing to settle in mysuru can apply.
aerospacemys@gmail.com

ಬೋಳು ತಲೆಯ ಸಮಸ್ಯೆಯೇ?



SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಬೇಕಾಗಿದ್ದಾರೆ
ಲಕ್ಷ್ಮೀಪುರಂನಲ್ಲಿರುವ ಹೋಟೆಲ್ನಲ್ಲಿ Chefs, Stewards, Receptionist, Kitchen assistants and KST ಕೆಲಸ ಮಾಡಲು ಬೇಕಾಗಿದ್ದಾರೆ
ಒಳ್ಳೆಯ ಸಂಬಳ ಹಾಗೂ ಉಳಿದುಕೊಳ್ಳಲು ಸ್ಥಳ ನೀಡಲಾಗುತ್ತದೆ
Call - 96062 52021



Solar Water Heater SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
7619318801, 9035836473

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9108566022

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಸಾಮ್ರಾಟ್ ಕಲ್ಯಾಣ ಭವನ
ಈ ಕೆಳಕಂಡ ದಿನಗಳಲ್ಲಿ ಛತ್ರ ಖಾಲಿ ಇದೆ
Feb: 1, 2, 4, 5, 7, 8, 9, 15, 16, 19, 22, 23, 25, 28, 29
Mar: 1, 4, 6, 7, 8, 10, 11, 13, 14, 15, 17, 18, 20, 21, 22, 24, 25, 27, 29, 31.
April: ಎಲ್ಲಾ ದಿನಗಳು.
ಸಾಮ್ರಾಟ್ ಕಲ್ಯಾಣ ಭವನ
ಉದಯರವಿ ರಸ್ತೆ, ಕುವೆಂಪುನಗರ, ಮೈಸೂರು
9008796029, 9880911119

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
21-3-2024: ನೇಪಾಳ ಮುಕ್ತಿನಾಥ್, ಪಶುಪತಿನಾಥ್, ಕಠ್ಮಂಡು.
14-3-2024: ಜಾರ್ಖಂಡ್ ಬಾಬಾ ಬೈದ್ಯನಾಥ್, ಕಾಶಿ, ಗಯಾ, ಪ್ರಯಾಗ್‌ರಾಜ್, ಅಯೋಧ್ಯ.
21-5-24: ಚಾರ್‌ಧಾಮ್ ಯಾತ್ರ, ಕೇದಾರ್‌ನಾಥ್, ಬದ್ರಿನಾಥ್, ಗಂಗೋತ್ರಿ, ಯಮುನೋತ್ರಿ
11-7-2024: ಅಮರ್‌ನಾಥ್ ಯಾತ್ರ
25-1-2024: ಪುರಿ ಜಗನ್ನಾಥ್, ಭುವನೇಶ್ವರ್, ಕೋನಾರ್ಕ್, ಚಂದ್ರಭಾಗ್ ಯಾತ್ರ
9591017782, 9964527782

WANTED
Female Telecaller
SSLC / PUC qualified, experienced / freshers with attractive incentives + salary at Kuvempunagar.
Mob: 7337688225

MYTHRI TRAVEL
ಶಿರಡಿ ಯಾತ್ರ ವಿಮಾನದಲ್ಲಿ 4 ದಿನಗಳು 23–1–2024.
ಕೊಲ್ಲಾಪುರ, ಪಂಡರಾಪುರ, ಶನಿಸಿಂಗನಾಪುರ, ಎಲ್ಲೋರ, ನಾಸಿಕ್, 3 ಜ್ಯೋತಿರ್ಲಿಂಗ.
Mob: 6360422209

ಬೇಕಾಗಿದ್ದಾರೆ
ಕನ್ನಡ ಮತ್ತು ಇಂಗ್ಲೀಷ್ ಟೈಪಿಂಗ್ ಬಲ್ಲವರು ಬೇಕಾಗಿದ್ದಾರೆ. ಸಂಪರ್ಕಿಸಿ:
Mob: 9740727204

SITE FOR SALE
30x50
KBL Gardenia, next to Vijayanagar 4th Stage, Opp. to Rashtrothana Public School, Mysuru.
Mob: 9036469975

Mysuru Retina Care
STAFF REQUIRED
1) O.T. Technician / Optometrist
2) Receptionist
Mob: 7338369364
Nivedithanagar, Mysore

WANTED
- Marketing Manager - 20 Nos Salary 20k allowance 5k
- Marketing Executive - 30 Nos Salary 16k allowance 5k
- Telecaller - 5 Nos - Salary 10k
- Accounts - 3 Nos - Salary 15k
- TV Anchor - Part time/Full time
- Pigmy Collection Boy - 5 Nos

Contact: Nama Suraksha:
80500 51 444

FOR SALE
1) 30x50 New R.T. Nagar, near Defence Apt.
2) 30x40 Suvarna Nagar attach Bogadi Road.
3) 2 & 3 BHK flats at Ramakrishnanagar.
4) 10, 20 guntas farm land KRS back water.
5) 20x30 Sirrampura House.
6) 50x80, 4 commercial sites Bogadi Road.
PRAKRUTHI PROPERTIES
9538690359, 9035990359

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

ಹೆಸರು ಬದಲಾವಣೆ
ಜಿ.ಆರ್ಮುಗಂ, S/o ಗುರುಸ್ವಾಮಿ ಭೋವಿ, ಅಜ್ಜೀಪುರ, ಹನೂರು ತಾಲ್ಲೂಕು, ಚಾಮರಾಜನಗರ, 571439, ನನ್ನ ಹೆಸರನ್ನು ಆರುಮುಗಂ ಜಿ. ಯಿಂದ ಜಿ.ಆರ್ಮುಗಂ ಎಂದು ನನ್ನ ಸ್ವಯಿಚ್ಛೆಯಿಂದ ಹೆಸರು ಬದಲಾವಣೆಯನ್ನು ಮಾಡಿಕೊಂಡಿರುತ್ತೇನೆ ಎಂದು ದಿನಂಕ: 09–01–2024ರಂದು ನೋಟರಿಯುವರಾದ ಬಿ.ಸೋಮಶೇಖರಪ್ಪ ಕೊಳ್ಳೇಗಾಲ ಇವರ ಸಮ್ಮುಖದಲ್ಲಿ ಪ್ರಮಾಣೀಕರಿಸುತ್ತೇನೆ.
ಸಹಿ/– ಜಿ.ಆರ್ಮುಗಂ

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಮತ್ತು ಮೈಸೂರಿನಾದ್ಯಂತ ಪ್ರಸಿದ್ಧ MNC ಕಂಪನಿಗಳಿಗೆ ಕಂಪನಿ ಕೆಲಸಕ್ಕೆ ಆಫೀಸ್ ಕೆಲಸಕ್ಕೆ ಮತ್ತು ವರ್ಕ್ ಫ್ರಂ ಹೋಂ ಕೆಲಸಕ್ಕೆ ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ. ಯಾವುದೇ ಎಜ್ಯುಕೇಷನ್ ಯಾವುದೇ Age ಲಿಮಿಟ್ ಇಲ್ಲ.
Salary (18000 to 38000rs) ಇರುತ್ತದೆ.
ಹೆಚ್ಚಿನ ಮಾಹಿತಿಗೆ ಇಂದೆ ಸಂಪರ್ಕಿಸಿ. H.R. Madam
9886385585
8296278130

ಹೊಸ ಮನೆ ಮಾರಾಟಕ್ಕಿದೆ
ಮೈಸೂರಿನ ವಸಂತನಗರ ಬಡಾವಣೆಯಲ್ಲಿ ನಂ.1482, 20x30 ಅಡಿ ಅಳತೆಯ ದಕ್ಷಿಣ ದಿಕ್ಕಿನ ನಿವೇಶನದಲ್ಲಿ ಪೂರ್ವ ದಿಕ್ಕಿನ ಬಾಗಿಲಿನ ವಾಸ್ತು ಪ್ರಕಾರ ನಿರ್ಮಿಸಿರುವ 2BHK ಹೊಸ ಮನೆ ಮಾರಾಟಕ್ಕಿದೆ.
80% ಸಾಲ ಸೌಲಭ್ಯ ಬೆಲೆ 48ಲಕ್ಷ
9342125527
9164759650

Pay Just 3 Lakhs
& Own Your Dream Sites
- Balance through Bank Loan
- Behind Airport
- 600 to 1200 Sqft Area
- Starts from 9 Lakhs

Nidhi Estates 78991 28100 99026 69880

ಬೇಕಾಗಿದ್ದಾರೆ
ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಸಂಬಳ 15000/-
Ph.7406 369 369
ಶಿವರಾಂಪೇಟೆ, ಮೈಸೂರು

ಕಳೆದಿದೆ
ಮೈಸೂರು ಸಿಟಿ, ಮನೆ ನಂ. 117, ಫ್ಲೋರ್ ಮಿಲ್ ಹತ್ತಿರ, ಯರಗನಹಳ್ಳಿ ನಿವಾಸದ ದಾನಪತ್ರ ಕಳೆದುಹೋಗಿದೆ.
Document No.-MYN-1-22992 2006-07 Date 22-11-2006
Lost Report No. 0880896 / 2024 ಸಿಕ್ಕವರು ಸಂಪರ್ಕಿಸಿ:
9741963747

ಮನೆ ಭೋಗ್ಯಕ್ಕೆ ಇದೆ
ಗೋಕುಲಂ 2ನೇ ಹಂತದಲ್ಲಿ 1BHK ಪೂರ್ವ ದಿಕ್ಕಿನಲ್ಲಿ 1ನೇ ಮಹಡಿ, ಭೋಗ್ಯಕ್ಕೆ ಇದೆ.
9945656948
9741817450

WANTED
1) Accountant with Tally Knowledge Male/Female
2) Civil Engineers
Hariharan Constructions
Hotagalli, Mysore
9448550972

MUDA APPROVED SITE FOR SALE
30x40 W/F @ 2300 /SQFT
30x40 N/F @ 2500/- Sqft
Near KIT Egn. College
Next to Lalbahadur Shastri Nagar Off. T-Narsipura Main Road,
Immediate Registration & bank Loan Available
7795609173

ಸೈಟ್ ಮಾರಾಟಕ್ಕಿದೆ
1) 1010 Sqft ಅಡಿಗಳು
2) 1158 Sqft ಅಡಿಗಳು
ಉತ್ತರ ದಿಕ್ಕಿನ ನಿವೇಶನಗಳು 60 ಅಡಿ ರಸ್ತೆ SVEI ಸ್ಕೂಲ್ ಹತ್ತಿರ ವಿಜಯನಗರ 4ನೇ ಹಂತ,
9741561111

WANTED
BILLING EXECUTIVE
Candidates having 2 + experience billing at Pharma Distributors Knowledge of Marg Software is a Must
Salary best as per the Industry.
For Interview Contact:
8971799998

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಹೋಟೆಲ್ ಒಂದರಲ್ಲಿ ಅನುಭವವುಳ್ಳ ಸೆಕ್ಯೂರಿಟಿ ಸೂಪರ್‌ವೈಸರ್ ಹಾಗೂ ಗಾರ್ಡ್‌ಗಳು ಮತ್ತು ಹೌಸ್ ಕೀಪಿಂಗ್ ಕೆಲಸ ಮಾಡಲು ಬೇಕಾಗಿದ್ದಾರೆ.
ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ
9035050654
9035050656

HOUSE FOR LEASE
East Facing Spacious Single BED Room Ist Floor House at Vijayanagar 4th Stage 1st Phase, Next to Ring Road
8660848321

HOUSE FOR LEASE
2BHK City Mysore
9535971612

WANTED
Security Field Officer (Male) (Min2-3yrs Exp. in Security Agency)
Security Guard (Male)
Call Between 10 am to 6 pm
6366366388
7760135606
mail your cv to acpltd123@gmail.com

NEW HOUSE FOR SALE
North Face, Ground & First Floor ISWARYA Layout, J.P.Nagar Near Siddalingeswara Layout IInd Stage Price: 1.46 Cr.
(Brokers Excuse)
30x40 2BHK ಮನೆ ಭೋಗ್ಯಕ್ಕೆ ಇದೆ G/F J.P.Nagar
9448271349

COMMERCIAL SPACE
FOR 25 Lakh with 30,000 Rent. City Mysore
7892486092

"R" ರಿಯಲ್ ಎಸ್ಟೇಟ್
ಸೈಟುಗಳನ್ನು ಕೊಳ್ಳಲು/ ಮಾರಲು ಸಂಪರ್ಕಿಸಿ:
9538412881

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರಸಿದ್ಧ Office, Showrooms, Comapany ಗಳಿಗೆ 7th, 10th, PUC, ITI Any Degree Pass/Fail ಆದವರಿಗೆ Cashier, Billing, Data Entry, Helper, Maintenance ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ.
ಸಂಬಳ: 14000/- 48000 (ESI+PF+OT) ಯೊಂದಿಗೆ T&C Apply
9513829246
6364103418

ಬೇಕಾಗಿದ್ದಾರೆ /Wanted
ಮೈಸೂರಿನ ಕಾಳಿದಾಸ ರೋಡ್‌ನಲ್ಲಿ ಪಂಚವಟಿ ಸರ್ಕಲ್ ಹತ್ತಿರ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್‌ಗೆ ಅನುಭವವುಳ್ಳ (1) ಕೌಂಟರ್ Counter (2) Waiter Cum Supplier/ Service ವೇಟರ್ ಕಂ ಸಪ್ಲೈಯರ್/ ಸರ್ವಿಸ್ (3) Indian All rounder (Hindi) (4) Dish Wash (ಪಾತ್ರೆ ತೊಳೆಯುವ) (ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ವಸತಿ ಹಾಗೂ ESI ಉತ್ತಮ ಸೌಲಭ್ಯಗಳನ್ನು ನೀಡಲಾಗುತ್ತದೆ. ಸಂಪರ್ಕಿಸಿ:
7338392631

ಸುವರ್ಣ ಯಾತ್ರ
1) 21/02/24, 2 ಜ್ಯೋತಿರ್ಲಿಂಗದೊಂದಿಗೆ ಕಾಶಿ ಪ್ರವಾಸ 7 ದಿನಗಳು(ಕಾಶಿ, ಗಂಯಾ ಬುದ್ಧಗಯ, ಪ್ರಯಾಗ್ ರಾಜ್, ಬಾಬಾ ಬೈದ್ಯನಾಥ, ಅಯೋಧ್ಯ, ನೈಮಿಶಾರಣ)
2) 12–03–24 ನೇಪಾಳ ಪ್ರವಾಸ 9 ದಿನಗಳು (ಮುಕ್ತಿನಾಥ, ಪಶುಪತಿನಾಥ, ಕಠ್ಮಂಡು, ಮನೋಕಾಮನ, ಲುಂಬಿನಿ, ಪೊಕ್ರ, ಜನಕಪುರ)
9019462508
9008381022

PART TIME WORK
ಹುಡುಗರಿಗೆ ಮಾತ್ರ 20 ರಿಂದ 25 ವರ್ಷದ ಒಳಗೆ ಸಂಪರ್ಕಿಸಿ ಬೆ. 10–30ರಿಂದ ಸಂಜೆ 5.00
8050151033

ಅನುಬಂಧ ಮ್ಯಾರೇಜಸ್
ವಧು–ವರರನ್ನು ಹುಡುಕಲು ಸಹಾಯ ಬೇಕೇ? ನಮಗೆ ಕರೆ ಮಾಡಿ
6361740552

ಬೇಕಾಗಿದ್ದಾರೆ
ಕಡಕೊಳ ಕೈಗಾರಿಕಾ ಪ್ರದೇಶ ಮತ್ತು ಮೈಸೂರಿನಲ್ಲಿ ಕೆಲಸ ನಿರ್ವಹಿಸಲು ಸೆಕ್ಯೂರಿಟಿ ಗಾರ್ಡ್ಸ್, ಹೆಲ್ಪರ್ (ಹೆಂಗಸರು) ಮತ್ತು ಅಕೌಂಟ್ಸ್‌ಗೆ ಅನುಭವ ಇರುವ ಒಬ್ಬರು (ಲೇಡಿ) ಬೇಕಾಗಿದ್ದಾರೆ.
9620481414
9482350308

ಬೇಕಾಗಿದೆ
30x40 ಮನೆ / ನಿವೇಶನ ಜೆ.ಪಿ.ನಗರ / ಶ್ರೀರಾಂಪುರ/ ದಟ್ಟಗಳ್ಳಿ ರಿಂಗ್ ರೋಡ್ ಒಳಗೆ
9945282367

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಕಂಪನಿಗಳಿಗೆ Officeಗಳಿಗೆ Packing, Helper, Data Entry, Telecalling Store Dept. Maintance Etc. ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ 14000-45000 (ESI+PF+OT)
9164052361
9513829246

WE ARE HIRING...!
Retired Officials & Housewife's in Esteemed Company for Priority Partner (PP) Minimum QualificationPUC Age Between 45 to 65, Earning Opportunities - 20000 to upto 50000/-pm Plus Incentives & other perks Type Part Time, Location: Mysore
9036076331,9964746039
9845210772

2ನೇ ಸಂಬಂಧಕ್ಕೆ ವರ ಬೇಕಾಗಿದ್ದಾರೆ.
Beautiful ಹಿಂದೂ Age: 41/5.3 B.Com, LLB, Govt. Court Employee Salary:65,000/- Well Settled Independent ಇರುವಂತಹ ಮಕ್ಕಳಿಲ್ಲದಂತಹ ವಿಚ್ಛೇದಿತೆ ವಧುವಿಗೆ ಯವುದೇ ಜಾತಿಯ ಅಭ್ಯಂತರವಿಲ್ಲದೆ 2ನೇ ಸಂಬಂದಕ್ಕೆ ವಿಧುರ/ವಿಚ್ಛೇದಿತ/ ನೌಕರಸ್ಥ/ವಿದ್ಯಾವಂತ ವರ ಬೇಕಾಗಿದ್ದಾರೆ. ಮಕ್ಕಳಿದ್ದರೂ ಪರವಾಗಿಲ್ಲ
ಬೆಂಗಳೂರು: 9742458272
ಮೈಸೂರು: 9480385742

ಪ್ರಮಾಣ ಪತ್ರ
ಲಕ್ಷ್ಮಮ್ಮ W/o ಲೇ। ರಂಗರಾಜು ಮೈಸೂರು ಮಂಜುನಾಥಪುರ ಗೋಕುಲಂ 4ನೇ ಹಂತ, ಮನೆ ನಂ.136ರಲ್ಲಿ ವಾಸವಗಿರುವ ನಾನು ಪ್ರಮಾಣೀಕರಿಸುವುದೇನೆಂದರೆ, ನನ್ನ ಆಧಾರ್ ಕಾರ್ಡ್ ಮತ್ತು ಪಾನ್ ಕಾರ್ಡ್‌ನಲ್ಲಿ ನನ್ನ ಹೆಸರು ಲಕ್ಷ್ಮಮ್ಮ ಎಂದು ನಮೂದಾಗಿದ್ದು ಭಾರತೀಯ ಸ್ಟೇಟ್ ಬ್ಯಾಂಕ್ ಯಾದವಗಿರಿ ಶಾಖೆ ಮೈಸೂರು, ಇಲ್ಲಿ ಖಾತೆಯನ್ನು ಹೊಂದಿದ್ದು (A/c No. 64100685697) ಇಲ್ಲಿ ನನ್ನ ಹೆಸರು ಲಕ್ಷ್ಮಿ ಎಂದು ನಮೂದಿಸಲಾಗಿದೆ. ಆದ್ದರಿಂದ ಲಕ್ಷ್ಮಮ್ಮ ಮತ್ತು ಲಕ್ಷ್ಮಿ ಈ ಎರಡು ಹೆಸರುಗಳು ನನ್ನದೇ ಆಗಿರುತ್ತದೆ ಎಂದು ದಿ. 8–1–2024ರಂದು ನೋಟರಿ ವಾಸುದೇವ ಮೈಸೂರು, ಇವರ ಮೂಲಕ ಪ್ರಮಾಣೀಕರಿಸುತ್ತೇನೆ.
ಸಹಿ/– ಲಕ್ಷ್ಮಮ್ಮ,

ಸೈಟು ಮಾರಾಟಕ್ಕಿದೆ
RMS ಬಡಾವಣೆ
30x40 North Face
ಶಕ್ತಿನಗರ (ಹತ್ತಿರ) ಡಾ॥ ರಾಜ್‌ಕುಮಾರ್ ರಸ್ತೆ, ಮೈಸೂರು
7996173613
9482051416

ಕಮರ್ಷಿಯಲ್ ಸೈಟು ಮಾರಾಟಕ್ಕಿದೆ
40x60, 80 ಅಡಿ ರಸ್ತೆ 1 ಅಡಿಗೆ 6000/– ರೂ. ಬನ್ನೂರು ರಸ್ತೆ, ವಸಂತನಗರ, ಮೈಸೂರು–570028
8861139197

WE'RE HIRING
WALK IN INTERVIEW
Designation: Marketing Executive
Timings: 9.30 to 6 pm
Qualification: PUC + Any Degree
Salary : 15,000 to 20,000
Only male candidates. Experience Driving
9148933444, 9535332633
8618459479

ಶ್ರೀ ಪುಟ್ಟಸ್ವಾಮಿ ಚಿಟ್ ಫಂಡ್ಸ್ ಪ್ರೈವೇಟ್. ಲಿಮಿಟೆಡ್
"ಸರ್ಕಾರದಿಂದ ಮಾನ್ಯತೆ ಪಡೆದಿದೆ"
1 ಲಕ್ಷದಿಂದ 10 ಲಕ್ಷದವರೆಗಿನ ಚೀಟಿಗಳು ಪ್ರಾರಂಭವಾಗಿದೆ.
ಸಮಯ: ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
8747965423

neem BOND PLATINUM
PLYWOOD & DOORS
@ FACTORY DEPOT RATES
10 YEARS WARRANTY*
9845426862, 9901291267

HOUSE FOR LEASE
2 BHK, Ground Floor East Face Semi Furnished with Solar & UPS @ J P Nagar Ring Road
9880290857

Aquaguard & Kent Sales and Service
Service Charge: 300/-
9901200444

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ರಾಮಮಂದಿರ ಉದ್ಘಾಟನೆ ಆಹ್ವಾನ ತಿರಸ್ಕರಿಸಿದ ಖರ್ಗೆ, ಸೋನಿಯಾ




ನವದೆಹಲಿ, ಜ.10– ಅಯೋಧ್ಯೆಯಲ್ಲಿ ಜನವರಿ 22 ರಂದು ನಡೆಯಲಿರುವ ರಾಮಮಂದಿರ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸದಿರಲು ಕಾಂಗ್ರೆಸ್ ನಾಯಕರು ನಿರ್ಧರಿಸಿದ್ದು, ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ನಾಯಕರಾದ ಸೋನಿಯಾ ಗಾಂಧಿ, ಅಧೀರ್ ರಂಜನ್ ಚೌಧರಿ ಅವರು ರಾಮ ಮಂದಿರದ ಆಹ್ವಾನವನ್ನು ತಿರಸ್ಕರಿಸಿದ್ದಾರೆ.

ರಾಮಮಂದಿರ ಉದ್ಘಾಟನೆ 'ಆರ್‌ಎಸ್‌ಎಸ್, ಬಿಜೆಪಿ ಕಾರ್ಯಕ್ರಮ' ಎಂದಿರುವ ಕಾಂಗ್ರೆಸ್, ಧರ್ಮವು ವೈಯಕ್ತಿಕ ವಿಷಯವಾಗಿದೆ. ಆದರೆ ಆರ್‌ಎಸ್‌ಎಸ್, ಬಿಜೆಪಿ ಅಯೋಧ್ಯೆ ಮಂದಿರವನ್ನು ರಾಜಕೀಯ ಯೋಜನೆಯಾಗಿ ಬಳಸಿಕೊಳ್ಳುತ್ತಿದೆ ಎಂದು ಬುಧವಾರ ಹೇಳಿದೆ. ಲೋಕಸಭೆ ಚುನಾವಣಾ ಲಾಭಕ್ಕಾಗಿ ಬಿಜೆಪಿ ಮತ್ತು ಆರೆಸ್ಸೆಸ್ ನಾಯಕರು ಅಯೋಧ್ಯೆಯ ಅಪೂರ್ಣ ದೇವಾಲಯವನ್ನು ಉದ್ಘಾಟನೆ ಮಾಡಲಾಗುತ್ತಿದೆ. ಎಂದು ಕಾಂಗ್ರೆಸ್ ಪ್ರಕಟಣೆಯಲ್ಲಿ ತಿಳಿಸಿದೆ.

ರಾಮಮಂದಿರ ಉದ್ಘಾಟನೆಗೆ ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರಿಗೆ ಆಹ್ವಾನ ನೀಡಲಾಗಿತ್ತು. ಜನವರಿ 22ರಂದು ರಾಮಮಂದಿರ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸೇರಿದಂತೆ 6,000ಕ್ಕೂ ಹೆಚ್ಚು ಗಣ್ಯರು ಪಾಲ್ಗೊಳ್ಳುವ ನಿರೀಕ್ಷೆಯಿದೆ.

ರಾಹುಲ್ ಗಾಂಧಿ 'ಭಾರತ್ ಜೋಡೋ ನ್ಯಾಯ್ ಯಾತ್ರೆ'ಗೆ ಅನುಮತಿ ನಿರಾಕರಿಸಿದ ಮಣಿಪುರ


(ಸಂಗ್ರಹ ಚಿತ್ರ)

ನವದೆಹಲಿ, ಜ.10– ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೋ ನ್ಯಾಯ್ ಯಾತ್ರೆಯನ್ನು ಇಂಫಾಲ್ ಅರಮನೆ ಮೈದಾನದಿಂದ ಪ್ರಾರಂಭಿಸಲು ಮಣಿಪುರ ಸರ್ಕಾರ ಅನುಮತಿ ನಿರಾಕರಿಸಿದೆ ಎಂದು ಕಾಂಗ್ರೆಸ್ ಬುಧವಾರ ಹೇಳಿದೆ.

ಇಂದು ದೆಹಲಿಯ ಎಐಸಿಸಿ ಕೇಂದ್ರ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಜೈರಾಮ್ ರಮೇಶ್ ಮತ್ತು ಕೆ.ಸಿ.ವೇಣುಗೋಪಾಲ್ ಅವರು, ಯಾತ್ರೆಯ ಕರಪತ್ರ ಮತ್ತು ವೆಬ್‌ಸೈಟ್ ಅನ್ನು ಬಿಡುಗಡೆ ಮಾಡಿದರು.

ಈ ವೇಳೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ವೇಣುಗೋಪಾಲ್, ಇಂಫಾಲದ ಅರಮನೆ ಮೈದಾನದಿಂದ ಭಾರತ್ ಜೋಡೋ ನ್ಯಾಯ್ ಯಾತ್ರೆ ಪ್ರಾರಂಭಿಸಲು ಮಣಿಪುರ ಸರ್ಕಾರ ಅನುಮತಿ ನಿರಾಕರಿಸಿದೆ. ಆದರೆ ಮಣಿಪುರದಿಂದಲೇ ಯಾತ್ರೆ ಆರಂಭಿಸಲು ಕಾಂಗ್ರೆಸ್ ನಿರ್ಧರಿಸಿದೆ. ಹೀಗಾಗಿ ಇಂಫಾಲ್‌ನ ಮತ್ತೊಂದು ಸ್ಥಳದಿಂದ ಯಾತ್ರೆ ಪ್ರಾರಂಭಿಸಲು ಪಕ್ಷ ಅನುಮತಿ ಕೋರಿದೆ ಎಂದು ಹೇಳಿದರು. ಜನವರಿ 14 ರಂದು ಪ್ರಾರಂಭವಾಗಲಿರುವ ಈ ಯಾತ್ರೆಯು 6,713 ಕಿಲೋಮೀಟರ್ ದೂರ ಕ್ರಮಿಸಲಿದೆ.

ಹೈದರಾಬಾದ್‌ನಲ್ಲಿ ಹಳಿ ತಪ್ಪಿದ ಚಾರ್ಮಿನಾರ್ ಎಕ್ಸ್‌ಪ್ರೆಸ್ ರೈಲಿನ 3 ಬೋಗಿಗಳು; 6 ಮಂದಿಗೆ ಗಾಯ



ಹೈದರಾಬಾದ್, ಜ.10– ಹೈದರಾಬಾದ್‌ನ ನಾಂಪಲ್ಲಿಯಲ್ಲಿರುವ ಹೈದರಾಬಾದ್ ಡೆಕ್ಕನ್ ರೈಲ್ವೆ ನಿಲ್ದಾಣದಲ್ಲಿ ಬುಧವಾರ ಬೆಳಗ್ಗೆ ಚೆನ್ನೈ–ಹೈದರಾಬಾದ್ ಚಾರ್ಮಿನಾರ್ ಎಕ್ಸ್‌ಪ್ರೆಸ್ ರೈಲಿನ ಮೂರು ಬೋಗಿಗಳು ಹಳಿತಪ್ಪಿದ್ದು, ಘಟನೆಯಲ್ಲಿ ಆರು ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ರೈಲ್ವೆ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ. ಹೈದರಾಬಾದ್ ಡೆಕ್ಕನ್ ರೈಲು ನಿಲ್ದಾಣವು ಈ ರೈಲಿನ ಅಂತಿಮ ತಾಣವಾಗಿದೆ.

ರೈಲು ನಿಲ್ದಾಣಕ್ಕೆ ಬಂದಾಗ, ಅದು ನಿಧಾನ ವೇಗದಲ್ಲಿ ಚಲಿಸುತ್ತಿತ್ತು ಮತ್ತು ಕೊನೆಯ ಪಾಯಿಂಟ್ ಅನ್ನು ದಾಟಿದೆ. ಹೀಗಾಗಿ ರೈಲಿನ ಮೂರು ಬೋಗಿಗಳು, ಎಸ್2, ಎಸ್3 ಮತ್ತು ಎಸ್6 ಹಳಿ ತಪ್ಪಲು ಕಾರಣವಾಯಿತು ಎಂದು ದಕ್ಷಿಣ ಮಧ್ಯ ರೈಲ್ವೆ(ಎಸ್‌ಸಿಆರ್) ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆಯಲ್ಲಿ ಆರು ಪ್ರಯಾಣಿಕರು ಗಾಯಗೊಂಡಿದ್ದು, ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಎಸ್‌ಸಿಆರ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಮಂಗಳವಾರ ಸಂಜೆ ಚೆನ್ನೈನಿಂದ ಹೊರಟ ರೈಲು ಇಂದು ಬೆಳಗ್ಗೆ ಹೈದರಾಬಾದ್ ತಲುಪಿತ್ತು. ಘಟನೆ ಕುರಿತು ತನಿಖೆ ನಡೆಸಲಾಗುವುದು ಎಂದು ಅಧಿಕಾರಿ ತಿಳಿಸಿದ್ದಾರೆ.

ಮಾದಕ ವಸ್ತು ಸೇವನೆ ಬೇಡ; ಮೈಸೂರಿನಲ್ಲಿ ಜಾಗೃತಿ ಜಾಥಾ




ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ನಗರ ಪೊಲೀಸ್ ಆಯುಕ್ತರು ಮಾದಕ ವಸ್ತು ವಿರುದ್ಧ ಜಾಗೃತಿ ಜಾಥಾಗೆ ಚಾಲನೆ ನೀಡಿದರು. ವಿವಿಧ ಶಾಲಾ ಕಾಲೇಜು ವಿದ್ಯಾರ್ಥಿಗಳು ಜಾಥಾದಲ್ಲಿ ಪಾಲ್ಗೊಂಡಿದ್ದರು

ಮೈಸೂರು, ಜ.10 (ಆರ್.ಕೆ)– ಮಾದಕ ವಸ್ತು ಸೇವನೆ ಮಾಡಬಾರದೆಂದು ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಪೊಲೀಸರು ಇಂದು ಮೈಸೂರಿನಲ್ಲಿ ಕಾಲ್ನಡಿಗೆ ಜಾಥಾ ನಡೆಸಿದರು.

ಮೈಸೂರು ನಗರ ಪೊಲೀಸ್ ಘಟಕ, ನಗರ ಅಪರಾಧ ವಿಭಾಗ (ccb) ಮಣಿಪಾಲ್ ಆಸ್ಪತ್ರೆ, ಹೋಟೆಲು ಮಾಲಿಕರ ಸಂಘ, ರೆಡ್ ಎಫ್‌ಎಂ 93.5 ಹಾಗೂ ಸಿಬಿಎಸ್‌ಇ, ಐಸಿಎಸ್‌ಇ ಮತ್ತು ಸ್ಕೂಲ್ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ ಜಾಗೃತಿ ಜಾಥಾಗೆ ಹಸಿರು ನಿಶಾನೆ ತೋರುವ ಮೂಲಕ ಪೊಲೀಸ್ ಆಯುಕ್ತ ಬಿ. ರಮೇಶ್ ಚಾಲನೆ ನೀಡಿದರು.

ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಆರಂಭವಾದ ಜಾಥಾವು ಹಾರ್ಡಿಂಜ್ ಸರ್ಕಲ್, ಗನ್‌ಹೌಸ್ ಸರ್ಕಲ್, ಸರ್ಕಾರಿ ಸಂಸ್ಕೃತ ಪಾಠಶಾಲೆ, ಸಯ್ಯಾಜಿರಾವ್ ರಸ್ತೆ, ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಸರ್ಕಲ್, ಇರ್ವಿನ್ ರಸ್ತೆ, ನೆಹರೂ ಸರ್ಕಲ್, ಅಶೋಕ ರಸ್ತೆ, ದೊಡ್ಡ ಗಡಿಯಾರದ ಮೂಲಕ ಸಾಗಿ ಮರಳಿ ಶ್ರೀ ಕೋಟೆ ಆಂಜನೇಯ ಸ್ವಾಮಿ ಸರ್ಕಲ್ ಬಳಿ ಅಂತ್ಯಗೊಂಡಿತು.

ಡಿಸಿಪಿಗಳಾದ ಎಂ. ಮುತ್ತುರಾಜ್, ಎಸ್. ಜಾಹ್ನವಿ, ಎಸ್‌ಪಿಗಳಾದ ಶಾಂತ ಮಲ್ಲಪ್ಪ, ಸಂದೇಶ್‌ಕುಮಾರ್, ಸಿ.ಕೆ.ಅಶ್ವಥ ನಾರಾಯಣ, ಎಲ್ಲಾ ಠಾಣೆಗಳ ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್‌ಗಳು, ಮಣಿಪಾಲ್ ಆಸ್ಪತ್ರೆಯ ಡಾ॥ ಉಪೇಂದ್ರ ಶೆಣೈ, ರೆಡ್ ಎಫ್‌ಎಂ 93.5 ನ ರಾಘವ, ಆರ್‌ಜೆ ರಾಜಲಕ್ಷ್ಮಿ, ಹೋಟೆಲು ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ, ವೆಂಕಟೇಶ್, ಶಾರದಾ ಪಬ್ಲಿಕ್ ಶಾಲೆಯ ಮಂಜುನಾಥ ಶ್ರೀವತ್ಸ, ಹಿರಿಯ ನಾಗರಿಕರಾದ ಡಾ॥ ರಮೇಶ್, ಮಾಜಿ ಸೈನಿಕ ರಮೇಶ್, ಇತರರು ಕಾಲ್ನಡಿಗೆ ಜಾಥಾದಲ್ಲಿ ಪಾಲ್ಗೊಂಡಿದ್ದರು.

ಶಾರದಾ ಪಬ್ಲಿಕ್ ಶಾಲೆ, ಪೊಲೀಸ್ ಪಬ್ಲಿಕ್ ಶಾಲೆ, ಶೇಷಾದ್ರಿಪುರಂ ಕಾಲೇಜು, ಪ್ರಗತಿ ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳೂ ಜಾಥಾದಲ್ಲಿ ಪಾಲ್ಗೊಂಡು, ಮಾದಕ ವಸ್ತು ಸೇವಿಸಬಾರದೆಂಬ ಅರಿವು ಮೂಡಿಸಿದರು. 'say no to drugs' ಘೋಷಣಾ ಫಲಕ ಪ್ರದರ್ಶಿಸಿದ ವಿದ್ಯಾರ್ಥಿಗಳು ನಾವು ಮಾದಕ ವಸ್ತು ಸೇವಿಸುವುದಿಲ್ಲ ಎಂದು ಪ್ರತಿಜ್ಞಾವಿಧಿ ಸ್ವೀಕರಿಸಿದರು. ಜಾಥಾಗೆ ಚಾಲನೆ ನೀಡಿ ಮಾತನಾಡಿದ ನಗರ ಪೊಲೀಸ್ ಆಯುಕ್ತ ಬಿ. ರಮೇಶ್, ಮಾದಕ ವಸ್ತು ಸೇವಿಸುವುದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದಲ್ಲದೆ ಸಮಾಜದಲ್ಲಿ ಅಪರಾಧಿಗಳ ಸಂಖ್ಯೆ ಜಾಸ್ತಿಯಾಗುತ್ತಿದ್ದು ಈ ಕುರಿತು ಯುವ ಜನಾಂಗಕ್ಕೆ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದರು.

ವಿಜಯಪುರದಲ್ಲಿ ಬೈಕ್‌ಗೆ ಡಿಕ್ಕಿಯಾಗಿ ಹೊತ್ತಿ ಉರಿದ ಸರ್ಕಾರಿ ಬಸ್; ಸವಾರ ಸ್ಥಳದಲ್ಲೇ ಸಾವು



ವಿಜಯಪುರ, ಜ.10–ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸೊಂದು ಬೈಕ್‌ಗೆ ಡಿಕ್ಕಿ ಹೊಡೆದಿದ್ದು, ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಗಬಸಾವಳಗಿ ಬಳಿ ಬುಧವಾರ ನಡೆದಿದೆ. ವಿಜಯಪುರ–ಕಲಬುರಗಿ ರಾಷ್ಟ್ರೀಯ ಹೆದ್ದಾರಿ 52ರಲ್ಲಿ ಈ ಅಪಘಾತ ಸಂಭವಿಸಿದ್ದು, ಮೋರಟಗಿ ಕಡೆಯಿಂದ ಸಿಂದಗಿ ಕಡೆ ತೆರಳುತ್ತಿದ್ದ ಬಸ್ ಎದುರಿನಿಂದ ಬರುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಬಸ್ ಸಂಪೂರ್ಣ ಹೊತ್ತಿ ಉರಿದಿದೆ. ಬಸ್ ಪ್ರಯಾಣಿಕರು ತಕ್ಷಣ ಕೆಳಗೆ ಇಳಿಯುವ ಮೂಲಕ ಅಪಾಯದಿಂದ ಪಾರಾಗಿದ್ದಾರೆ. ಆದರೆ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬೈಕ್ ಬಸ್ಸಿನ ಕೆಳಗೆ ಸಿಲುಕಿದ ಪರಿಣಾಮ ಪೆಟ್ರೋಲ್ ಸೋರಿಕೆಯಾಗಿ ಏಕಾಏಕಿ ಬಸ್‌ಗೆ ಬೆಂಕಿ ಹೊತ್ತಿಕೊಂಡಿದೆ. ಘಟನೆಯ ಸುದ್ದಿ ತಿಳಿಯುತ್ತಿದ್ದಂತೆ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಸ್ ಸಂಪೂರ್ಣ ಸುಟ್ಟು ಕರಕಲಾಗಿದೆ.

ಇಂದು ಸ್ವಚ್ಛ ಸರ್ವೇಕ್ಷಣೆ ಫಲಿತಾಂಶ ಪ್ರಕಟ

ಪ್ರಶಸ್ತಿ ಸ್ವೀಕರಿಸಲು ದೆಹಲಿ ತಲುಪಲಿರುವ ಮೈಸೂರು ಪಾಲಿಕೆ ಅಧಿಕಾರಿಗಳು



ಮೈಸೂರು, ಜ.10(ಆರ್‌ಕೆ)–ಭಾರತ ಸರ್ಕಾರದ ನಗರಾಭಿವೃದ್ಧಿ ಇಲಾಖೆಯಿಂದ ಕಳೆದ ಸಾಲಿನಲ್ಲಿ ದೇಶದಾದ್ಯಂತ ನಡೆಸಿದ ಸ್ವಚ್ಛ ಸರ್ವೇಕ್ಷಣಾ ಅಭಿಯಾನದ ಫಲಿತಾಂಶ ನಾಳೆ (ಜ.11) ಪ್ರಕಟವಾಗಲಿದೆ. ನವದೆಹಲಿಯಲ್ಲಿ ಗುರುವಾರ ನಡೆಯುವ ಸಮಾರಂಭದಲ್ಲಿ ವಿಜೇತ ನಗರಪಾಲಿಕೆ, ನಗರಸಭೆ, ಪಟ್ಟಣ ಪಂಚಾಯ್ತಿ ಅಧಿಕಾರಿಗಳಿಗೆ ಪ್ರಶಸ್ತಿ, ಬಹುಮಾನಗಳನ್ನು ಕೇಂದ್ರ ನಗರಾಭಿವೃದ್ಧಿ ಸಚಿವರು ಪ್ರದಾನ ಮಾಡುವರು.

ಮೈಸೂರು ಮಹಾನಗರ ಪಾಲಿಕೆ ಆಡಳಿತಾಧಿಕಾರಿ ಹಾಗೂ ಪ್ರಾದೇಶಿಕ ಆಯುಕ್ತ ಜೆ.ಸಿ.ಪ್ರಕಾಶ್, ಆಯುಕ್ತ ಎಂ. ರೆಹಮಾನ್ ಷರೀಫ್, ಹಿರಿಯ ಆರೋಗ್ಯಾಧಿಕಾರಿ ಡಾ॥ ವೆಂಕಟೇಶ್, ಇಂಜಿನಿಯರ್‌ಗಳು ಸೇರಿದಂತೆ 10 ಮಂದಿ ಅಧಿಕಾರಿಗಳು ದೆಹಲಿಗೆ ತೆರಳಿದ್ದಾರೆ.

2023 ರ ಏಪ್ರಿಲ್ ಮೇನಲ್ಲಿ ನಡೆದ ಸ್ವಚ್ಛ ಸರ್ವೇಕ್ಷಣೆಯಲ್ಲಿ ಕೇಂದ್ರ ಸರ್ಕಾರ ನಿಯೋಜಿಸಿದ ಅಧಿಕಾರಿಗಳು ಆಗಮಿಸಿ ಮೈಸೂರು ನಗರದ ಸ್ವಚ್ಛತೆ ನಿರ್ವಹಣೆ, ವಿದ್ಯಾರಣ್ಯಪುರಂನ, ಸಿವೇಜ್ ಫಾರಂ, ಕೆಸರೆ, ರಾಯನಕೆರೆ ಘನತ್ಯಾಜ್ಯ ನಿರ್ವಹಣಾ ಘಟಕ, ಇತರ ತ್ಯಾಜ್ಯ ಸಂರಕ್ಷಣಾ ಕೇಂದ್ರಗಳು ಇಲ್ಲಿ ಮನೆ ಮನೆಯಿಂದ ಕಸ ಸಂಗ್ರಹ, ವಿಲೇವಾರಿ ಹಾಗೂ ನಿರ್ವಹಣಾ ವಿಧಾನಗಳ ಬಗ್ಗೆ ಮಾಹಿತಿ ಪಡೆದಿದ್ದರು. ಸಾರ್ವಜನಿಕ ಶೌಚಾಲಯಗಳ ಸ್ಥಿತಿಗತಿ, ಮಳೆ ನೀರು ಚರಂಡಿ, ಒಳಚರಂಡಿ ವ್ಯವಸ್ಥೆ ಸೇರಿದಂತೆ ವಿವಿಧ ಸ್ವಚ್ಛತಾ ಕಾರ್ಯಗಳ ಬಗ್ಗೆ ಫೋಟೋ ವಿಡಿಯೋ ತೆಗೆದುಕೊಂಡು ಜನರಿಂದಲೂ ಸ್ವಚ್ಛತೆ ಬಗ್ಗೆ ಫೀಡ್‌ಬ್ಯಾಕ್ ಪಡೆದು ಮೈಸೂರು ಮಹಾನಗರಪಾಲಿಕೆ ಅಧಿಕಾರಿಗಳಿಂದಲೂ ಮಾಹಿತಿ ಪಡೆಯಲಾಗಿತ್ತು.

ಜ.13ಕ್ಕೆ ಉದ್ಯೋಗ ಮೇಳ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಉದ್ಯೋಗದಾತ ಸಂಸ್ಥೆಯ ಡಿ.ಬಿ.ರುಕ್ಮಾಂಗದ ಮಾತನಾಡಿದರು.

ಮೈಸೂರು,ಜ10(ಎಂಟಿವೈ)– ಸ್ವಾಮಿ ವಿವೇಕಾನಂದ ಜಯಂತ್ಯುತ್ಸವದ ಅಂಗವಾಗಿ ಜ.13ರಂದು ಬೆಳಿಗ್ಗೆ 10ಕ್ಕೆ ಮೇಟಗಳ್ಳಿ ಸಿಗ್ನಲ್ ಬಳಿಯ ಪರಿವರ್ತನ ಬಿ ಸ್ಕೂಲ್ ಆವರಣದಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಉದ್ಯೋಗದಾತ ಸಂಸ್ಥೆಯ ಡಿ.ಬಿ.ರುಕ್ಮಾಂಗದ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇಳದಲ್ಲಿ 20ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿದ್ದು, 600ಕ್ಕೂ ಹೆಚ್ಚು ಉದ್ಯೋಗಾವಕಾಶಗಳು ಲಭ್ಯವಿದೆ. ನಮ್ಮ ಸಂಸ್ಥೆಯೊಂದಿಗೆ ರಂಗನಾಯಕಿ ಸ್ತ್ರೀ ಸಮಾಜ, ಓಂ ಶ್ರೀನಿಕೇತನ ಟ್ರಸ್ಟ್, ರೋಟರಿ ಮೈಸೂರು ಹಾಗೂ ಮಂಡ್ಯ ಸಂಸ್ಥೆ ಮತ್ತು ಎನ್.ಸರಸ್ವತಿ ಅವರು ಸಹಕಾರ ನೀಡಿರುವರು. ಮೇಳದಲ್ಲಿ 18ರಿಂದ 30 ವರ್ಷ ವಯೋಮಾನದ ಎಸ್‌ಎಸ್‌ಎಲ್‌ಸಿ ಹಾಗೂ ಮೇಲ್ಪಟ್ಟ ವಿದ್ಯಾರ್ಹತೆಯ ಪ್ರತಿಯೊಬ್ಬರೂ ಭಾಗವಹಿಸಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸ್ತ್ರೀ ಸಮಾಜದ ಆಶಾಲತಾ ಪುಟ್ಟೇಗೌಡ, ರೋಟರಿ ಮೈಸೂರಿನ ಅಧ್ಯಕ್ಷ ಅರುಣ್ ಬೆಳವಾಡಿ, ರೋಟರಿ ಮಂಡ್ಯ ಅಧ್ಯಕ್ಷೆ ಅನುಪಮಾ ಇದ್ದರು.

ಗುಜರಿಯಲ್ಲಿ ತಾಮ್ರದ ಐಟಂ ಕಳವು ಮಾಡಿದ್ದ ಇಬ್ಬರ ಬಂಧನ

ಮೈಸೂರು, ಜ.10(ಆರ್‌ಕೆ)– ಗುಜರಿಯಲ್ಲಿ ತಾಮ್ರದ ಪದಾರ್ಥಗಳನ್ನು ಕಳವು ಮಾಡಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿರುವ ಮೈಸೂರಿನ ಎನ್.ಆರ್. ಠಾಣೆ ಪೊಲೀಸರು, 3,60,000 ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರು ತಾಲೂಕು, ಮಹದೇವಪುರ ರಸ್ತೆಯ ಭಾರತ್ ನಗರ ನಿವಾಸಿಗಳಾದ ಅಬಿದ್ ಮತ್ತು ನವಾಜ್ ಬಂಧಿತ ಆರೋಪಿಗಳು. ಎನ್.ಆರ್.ಮೊಹಲ್ಲಾದ ಶ್ರೀ ಬೀರೇಶ್ವರ ಎಂಟರ್‌ಪ್ರೈಸಸ್ ಗುಜರಿ ಮಳಿಗೆಯಲ್ಲಿ 2023ರ ಡಿ.26ರಂದು ರಾತ್ರಿ ತಾಮ್ರದ ಸ್ಕ್ರಾಪ್‌ಗಳನ್ನು ಕಳವು ಮಾಡಲಾಗಿತ್ತು. ಪ್ರಕರಣ ದಾಖಲಿಸಿಕೊಂಡಿದ್ದ ಎನ್.ಆರ್. ಠಾಣೆ ಪೊಲೀಸರು, ಆರೋಪಿಗಳನ್ನು ಬಂಧಿಸಿ ಅವರಿಂದ 3,60,000 ರೂ. ಬೆಲೆ ಬಾಳುವ 558 ಕೆ.ಜಿ. ತಾಮ್ರದ ಪದಾರ್ಥಗಳನ್ನು ವಶಪಡಿಸಿಕೊಂಡಿದ್ದಾರೆ.

ಡಿಸಿಪಿ ಎಸ್.ಜಾಹ್ನವಿ, ಎನ್.ಆರ್. ಉಪ ವಿಭಾಗದ ಎಸಿಪಿ ಅಶ್ವತ್ಥನಾರಾಯಣ್ ಅವರ ಮಾರ್ಗದರ್ಶನದಂತೆ ಎನ್.ಆರ್.ಠಾಣೆ ಇನ್‌ಸ್ಪೆಕ್ಟರ್ ಲಕ್ಷ್ಮೀಕಾಂತ ಕೆ.ತಳವಾರ್, ಸಬ್ ಇನ್‌ಸ್ಪೆಕ್ಟರ್ ಎಸ್.ಕೆ.ಗಣೇಶ, ಸಿಬ್ಬಂದಿಗಳಾದ ಟಿ.ಎಂ.ಆದಂ, ಎಂ.ಮೋಹನ್ ಕುಮಾರ್, ಸಿ.ಸುನಿಲ್ ಕುಮಾರ್, ಪತ್ತೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಮುಂದುವರೆದ ರೈಲ್ವೆ ನೌಕರರ ಪ್ರತಿಭಟನೆ



ಹೊಸ ಪಿಂಚಣಿ ಯೋಜನೆ(ಎನ್‌ಪಿಎಸ್) ರದ್ದುಪಡಿಸುವಂತೆ ಆಗ್ರಹಿಸಿ ರೈಲ್ವೆ ನೌಕರರು ಮಾನಂದವಾಡಿ ರಸ್ತೆಯಲ್ಲಿರುವ ರೈಲ್ವೆ ವರ್ಕ್‌ಶಾಪ್ ಬಳಿ ಪ್ರತಿಭಟನೆ ನಡೆಸಿದರು.

ಮೈಸೂರು,ಜ.10(ಜಿಎ)–ಹೊಸ ಪಿಂಚಣಿ ಯೋಜನೆ(ಎನ್‌ಪಿಎಸ್) ರದ್ದುಪಡಿಸಿ, ಹಳೆ ಪಿಂಚಣಿ ಯೋಜನೆಯನ್ನೇ ಮುಂದುವರೆಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ನೈರುತ್ಯ ರೈಲ್ವೆ ನೌಕರರ ಸಂಘದ ಸದಸ್ಯರು ಮೈಸೂರಿನ ರೈಲ್ವೆ ನಿಲ್ದಾಣದ ಸಮೀಪ ಡಿಆರ್‌ಎಂ ಕಚೇರಿ ಹಾಗೂ ಮಾನಂದವಾಡಿ ರಸ್ತೆಯಲ್ಲಿರುವ ರೈಲ್ವೆ ವರ್ಕ್‌ಶಾಪ್ ಬಳಿ ನಡೆಸುತ್ತಿರುವ ಉಪವಾಸ ಸತ್ಯಾಗ್ರಹ ಬುಧವಾರವು ಮುಂದುವರೆದಿದೆ.

ಹಳೆ ಪಿಂಚಣಿ ವ್ಯವಸ್ಥೆಯನ್ನು ಮರುಸ್ಥಾಪನೆ ಮಾಡಬೇಕು. ಈ ಮೂಲಕ ಸರ್ಕಾರಿ ನೌಕರರ ಹಿತ ಕಾಯಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿ, ಹಳೆಯ ಪಿಂಚಣಿ ಪದ್ಧತಿಯನ್ನು ರದ್ದುಗೊಳಿಸಿ ಹೊಸ ಪಿಂಚಣಿ ಜಾರಿಗೊಳಿಸಲಾಗಿದೆ. ಇದರಲ್ಲಿ ಪ್ರತಿ ತಿಂಗಳೂ ದೇಣಿಗೆ ನೀಡಿ ನಿವೃತ್ತಿಯ ಸಮಯದಲ್ಲಿ ಶೇ.60ರಷ್ಟನ್ನು ಹಿಂಪಡೆದು, ಉಳಿದ ಶೇ.40ಅನ್ನು ಷೇರು ಮಾರುಕಟ್ಟೆಯಲ್ಲಿ ಹೂಡಿ, ಅದರಲ್ಲಿ ದೊರೆತ ಲಾಭದಿಂದ ಪಿಂಚಣಿ ಕೊಡಲಾಗುತ್ತಿದೆ. ಇದು ಮಾರುಕಟ್ಟೆ ಆಧಾರಿತವಾದ ಕಾರಣ ನಿಯಮಿತ ಪಿಂಚಣಿಯ ಖಾತ್ರಿ ಇದರಲ್ಲಿ ಇಲ್ಲ. ಹೀಗಾಗಿ ಇದು ನೌಕರರಿಗೆ ಹಿತವಾಗುತ್ತಿಲ್ಲ. ಬದಲಿಗೆ ಮಾರಕವಾಗಿದೆ ಎಂದು ಕಿಡಿಕಾರಿದರು. ಪ್ರತಿಭಟನೆಯಲ್ಲಿ ಸಂಘಟನೆಯ ಮುಖಂಡರಾದ ಯತಿರಾಜ್, ಪಿ.ಶಿವಪ್ರಕಾಶ್, ಎಸ್.ಸೋಮಶೇಖರ್, ವಿ.ಅಶೋಕ್‌ಕುಮಾರ್, ಎಂ.ನಾಗೇಶ್ ಇನ್ನಿತರರು ಪಾಲ್ಗೊಂಡಿದ್ದರು.

ಕಾಯಕವೇ ಕೈಲಾಸ, ಸಮಾನತೆ ತತ್ವ ಪ್ರತಿಪಾದಿಸಿದ ಲಿಂಗಾಯತ ಧರ್ಮ ಅಳಿವಿನಂಚಿನಲ್ಲಿದೆ

- ಮುಂಡರಗಿ ಬೈಲಹೊಂಗಲ ತೋಂಟದಾರ್ಯ ಶಾಖಾಮಠದ ಶ್ರೀ ನಿಜಗುಣಾನಂದ ಸ್ವಾಮೀಜಿ ಬೇಸರ
- ಬಸವಣ್ಣನವರ ಸುಧಾರಣೆ ಮರೆತು ಬದುಕುತ್ತಿರುವುದು ಅತ್ಯಂತ ಬೇಸರ ಸಂಗತಿ



ಮೈಸೂರು,ಜ.10(ಎಸ್‌ಪಿಎನ್)– ನಾನೇ ದೇವರು ಎನ್ನುವ ಕಾಲಘಟ್ಟದಲ್ಲಿ ನನ್ನೊಳಗೊಬ್ಬ ದೇವರಿದ್ದಾನೆ ಎಂದು ಪ್ರತಿಪಾದಿಸಿದ ಲಿಂಗಾಯತ ಧರ್ಮ ಪ್ರಸ್ತುತ ಐಸಿಯುನಲ್ಲಿದೆ ಎಂದು ಮುಂಡರಗಿ ಬೈಲಹೊಂಗಲ ತೋಂಟದಾರ್ಯ ಶಾಖಾ ಮಠದ ಶ್ರೀ ನಿಜಗುಣಾನಂದ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು. ಮೈಸೂರು ಅಗ್ರಹಾರದಲ್ಲಿರುವ ಶ್ರೀ ಹೊಸ ಮಠದ ನಟರಾಜ ಸಭಾ ಭವನದಲ್ಲಿ ಮಂಗಳವಾರ ಬಸವ ಭಾರತ ಪ್ರತಿಷ್ಠಾನ ಏರ್ಪಡಿಸಿದ್ದ ಜಗಜ್ಯೋತಿ ಶ್ರೀ ಬಸವೇಶ್ವರ ವಿಶೇಷ ಅಂಚೆ ಕಾರ್ಡ್ ಬಿಡುಗಡೆಗೊಳಿಸಿ ವಿಶೇಷ ಉಪನ್ಯಾಸ ನೀಡಿದರು.

ಕಾಯಕವೇ ಕೈಲಾಸ, ಎಲ್ಲಾ ಸಮಾನರು ಎಂದು ಪ್ರತಿಪಾದಿಸಿದ ಲಿಂಗಾಯತ ಧರ್ಮ ಅಳಿವಿನ ಅಂಚಿನಲ್ಲಿದೆ. ಬಸವಣ್ಣನವರು 12 ನೇ ಶತಮಾನದಲ್ಲಿ ಸಮಾಜ ಸುಧಾರಣೆಗೆ ಏನೆಲ್ಲಾ ಸುಧಾರಣೆ ತಂದಿದ್ದರು. ಅದನ್ನೆಲ್ಲಾ ನಾವು ಮರೆತಿದ್ದೇವೆ. ದೇವರು, ಧರ್ಮದಿಂದ ದೂರವಾದ ತಳ ಸಮುದಾಯ, ಮಧ್ಯಮ ವರ್ಗದವರನ್ನು ಒಗ್ಗೂಡಿಸಿ ಲಿಂಗಾಯತ ಧರ್ಮ ಸ್ಥಾಪಿಸಿ, ಹೊಸ ಪರಿಕಲ್ಪನೆಯ ರಾಷ್ಟ್ರೀಯತೆ ಹುಟ್ಟು ಹಾಕಿದ್ದರು. ಈ ಅಂಶ ಲಿಂಗಾಯತ ಧರ್ಮದಲ್ಲಿದೆ ಎಂಬುದನ್ನು ಎಲ್ಲರೂ ಮರೆತು ಬದುಕುತ್ತಿರುವುದು ಆತಂಕದ ವಿಷಯ ಎಂದರು.

ಮಹಿಳಾ ಸಬಲೀಕರಣಕ್ಕೆ ಒತ್ತು: ಜಗತ್ತಿನ ಬೇರೆ ಧರ್ಮಗಳು ಮಹಿಳೆಯರಿಗೆ ಸಮಾನತೆ ನೀಡುವ ಬಗ್ಗೆ ಅವಕಾಶ ಕಲ್ಪಿಸಲಿಲ್ಲ. ಆದರೆ, ಬಸವಣ್ಣ ಸ್ಥಾಪಿಸಿದ ಲಿಂಗಾಯತ ಧರ್ಮದಲ್ಲಿ ಮಹಿಳೆಯರಿಗೆ ಸೂಕ್ತ ಸ್ಥಾನಮಾನ, ಸಮಾನತೆ ಕಲ್ಪಿಸಿದ್ದಾರೆ. ಇದನ್ನು ಅಕ್ಕಮಹಾದೇವಿ ವಚನ ಸಾಹಿತ್ಯದಲ್ಲಿ ಕಾಣಬಹುದು. ಪ್ರಸ್ತುತ ಲಿಂಗಾಯತರು ಇಷ್ಟಲಿಂಗ ಪೂಜೆ ಬಿಟ್ಟು, ಬೆಟ್ಟದ ಲಿಂಗಕ್ಕೆ ಪೂಜೆ ಸಲ್ಲಿಸಲು ಓಡೋಡಿ ಹೋಗುತ್ತಿದ್ದಾರೆ. ಮಠಾಧೀಶರು, ಜಂಗಮ ನಾಗುವ ಬದಲು ಪುರೋಹಿತರಾಗಿದ್ದಾರೆ ಎಂದು ತೀವ್ರ ಬೇಸರ ಹೊರಹಾಕಿದರು.

ಬಸವಣ್ಣನ ನೀತಿ, ಆದರ್ಶದಲ್ಲಿ ರಾಷ್ಟ್ರೀಯತೆ, ಸಮಾನತೆ, ಆರ್ಥಿಕ ಸಮಾನತೆ, ಕಾಯಕ ನೀತಿ, ಸಾಮಾಜಿಕ ಹಾಗೂ ಶೈಕ್ಷಣಿಕ ನೀತಿಗಳಲ್ಲಿ ಎಲ್ಲರೂ ಒಪ್ಪುವಂತಹ ಅಂಶಗಳನ್ನೊಳಗೊಂಡಿದೆ. ಉತ್ತರ ಭಾರತದ ಮಠಾಧೀಶರು ಭಜನೆ, ಹೋಮ–ಹವನಕ್ಕೆ ಸೀಮಿತವಾದರೆ, ಕರ್ನಾಟಕದ ಮಠಾಧೀಶರು ವಿಭಿನ್ನವಾಗಿ ನಿಲ್ಲುತ್ತಾರೆ. ಕರ್ನಾಟಕದ ಮಠಗಳಲ್ಲಿ ಶಿಕ್ಷಣ, ವಸತಿ, ಆರೋಗ್ಯ, ಆಧ್ಯಾತ್ಮಿಕತೆಗೆ ಹೆಚ್ಚಿನ ಆದ್ಯತೆ ನೀಡಿ, ದೇಶದ ಪ್ರಗತಿಗೆ ಪ್ರಾಮುಖ್ಯತೆ ನೀಡಿದ್ದಾರೆ. ವಚನ ಚಳವಳಿ ಮೂಲಕ ಸಮಾಜ ಸುಧಾರಣೆಗೆ ಒತ್ತು ನೀಡಿದ್ದಾರೆ ಎಂದರು. ಬಸವಣ್ಣ ಒಂದು ಜಾತಿಗೆ ಸೀಮಿತವಲ್ಲ. ಬಸವಣ್ಣ ಸ್ಥಾಪಿತ ಲಿಂಗಾಯತ ಧರ್ಮದಲ್ಲಿ ಮಾನವ ಹಕ್ಕಿನ ಪ್ರತಿಪಾದಕವಾಗಿದೆ. ಇದು ಕೆಲವರಿಗೆ ತಿಳಿಯುತ್ತಿಲ್ಲ. ನಮ್ಮ ಬದುಕಿನ ಶೈಲಿಯಿಂದ ಬಸವಣ್ಣನನ್ನು ಸಂಕುಚಿತ ಸ್ಥಾನಕ್ಕೆ ತಂದು ನಿಲ್ಲಿಸಿದ್ದೇವೆ. ಇಂದಿಗೂ ಬಸವ ಜಯಂತಿ ಎಂದರೆ, ನಾಲ್ಕು ಕಾಲಿನ ಎತ್ತು, ಪಾನಕ, ಮಜ್ಜಿಗೆಗೆ ಸೀಮಿತಗೊಳಿಸಿದ್ದೇವೆ. ಅಲ್ಲದೆ, ಮಿತ ಆರ್ಥಿಕ ನೀತಿ, ಕಾಯಕ ನೀತಿ, ಶೈಕ್ಷಣಿಕ, ಸಾಮಾಜಿಕ ಸಮಾನತೆ ಕುರಿತು 20 ಶತಮಾನದಲ್ಲಿ ಮಾತನಾಡುತ್ತಿದ್ದೇವೆ. ಆದರೆ, ಅಣ್ಣ ಬಸವಣ್ಣ ಹನ್ನೆರಡನೇ ಶತಮಾನದಲ್ಲಿ ವಚನ ಚಳವಳಿ ಮೂಲಕ ಮಾಡಿ ತೋರಿಸಿದ್ದಾರೆ ಎಂದರು.

ಸಾಂಸ್ಕೃತಿಕ ರಾಯಭಾರಿ ಎಂದು ಘೋಷಿಸಲಿ: ಸಾರಸ್ವತ ಲೋಕದಲ್ಲಿ ಬಸವಣ್ಣನನ್ನು ಬಿಟ್ಟು ಸಾಹಿತ್ಯ ರಚನೆ ಇಂದಿಗೂ ಸಾಧ್ಯವಿಲ್ಲ. ಹಾಗಾಗಿ ಜನಸಾಮಾನ್ಯರು ವಚನ ಸಾಹಿತ್ಯವನ್ನು ನೆನಪಿಸಿಕೊಳ್ಳದೇ ನಾನು ಕನ್ನಡಿಗ ಎಂದು ಹೊರಗಡೆ ಹೇಳಿಕೊಳ್ಳಲು ಸಾಧ್ಯವೇ ಎಂದು ಪ್ರಶ್ನಿಸಿದ ಅವರು, ಹಾಗಾಗಿ ರಾಜ್ಯ ಸರ್ಕಾರ ಬಸವಣ್ಣನನ್ನು 'ಕರ್ನಾಟಕ ಸಾಂಸ್ಕೃತಿಕ ರಾಯಭಾರಿ' ಎಂದು ಘೋಷಿಸಿದರೆ ತಪ್ಪಾಗಲಾರದು. ಅಲ್ಲದೆ, ಪ್ರತಿಯೊಬ್ಬರು ಬಸವಣ್ಣ ಪ್ರತಿಪಾದಿಸಿದ ವೈಚಾರಿಕತೆ, ವೈಜ್ಞಾನಿಕತೆ ಜೀವನ ಮೈಗೂಡಿಸಿಕೊಂಡು ಉತ್ತಮ ಜೀವನ ನಡೆಸಬೇಕು. ಇದನ್ನು ಬಿಟ್ಟು ಮೂಢನಂಬಿಕೆಗೆ ಜೋತು ಬೀಳಬೇಡಿ ಎಂದು ತಿಳಿ ಹೇಳಿದರು.

ಸಾಧಕರಿಗೆ ಸನ್ಮಾನ: ಈ ಸಂದರ್ಭದಲ್ಲಿ ನಾನಾ ಕ್ಷೇತ್ರದಲ್ಲಿ ಸಾಧನೆಗೈದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ.ವಿಜಯ ಕುಮಾರಿ ಕರಿಕಲ್, ಜಿ.ಎ.ಶಿವಲಿಂಗಯ್ಯ, ಪ್ರೊ.ಸಿ.ನಾಗಣ್ಣ, ಶಿವಲಿಂಗಪ್ಪ, ಎಂಪಿಎಂಸಿ ಮಾಜಿ ಸದಸ್ಯ ಅಹಿಂದ ಜವರಪ್ಪ, ಶೈಲಜಾ ತಿಪ್ಪೇರುದ್ರಸ್ವಾಮಿ ಸೇರಿದಂತೆ ಹಲವು ಮಂದಿಯನ್ನು ಸನ್ಮಾನಿಸಲಾಯಿತು. ಇದಕ್ಕೂ ಮುನ್ನ ಜಗಜ್ಯೋತಿ ಶ್ರೀ ಬಸವೇಶ್ವರ ವಿಶೇಷ ಅಂಚೆಕಾರ್ಡ್ ಬಿಡುಗಡೆಗೊಳಿಸಲಾಯಿತು.

ಕಾರ್ಯಕ್ರಮದಲ್ಲಿ ಹೊಸಮಠದ ಶ್ರೀ ಚಿದಾನಂದ ಮಹಾಸ್ವಾಮಿ, ಕುದೇರು ಗುರುಮಲ್ಲೇಶ್ವರ ಮಠದ ಶ್ರೀ ಗುರು ಶಾಂತಸ್ವಾಮಿ, ಎನ್.ಆರ್. ಪುರದ ಶ್ರೀ ಬಸವಯೋಗಿ ಪ್ರಭುಸ್ವಾಮಿ, ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಮಾಜಿ ಶಾಸಕ ನಿರಂಜನ್ ಕುಮಾರ್, ಹಿರಿಯ ಅಂಚೆ ಅಧೀಕ್ಷಕಿ ಡಾ.ಎಂಜಲ್ ರಾಜ್, ಪ್ರಗತಿಪರ ಕೃಷಿಕ ಶರಣ ಪ್ರಶಾಂತ್, ಮಾಜಿ ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್‌ಕುಮಾರ್, ಕೆ.ಆರ್. ಕ್ಷೇತ್ರದ ಜೆಡಿಎಸ್ ಮುಖಂಡ ಕೆ.ವಿ.ಮಲ್ಲೇಶ್, ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಶರಣ ಮಹದೇವಪ್ಪ, ಬಸವ ಭಾರತ ಪ್ರತಿಷ್ಠಾನದ ಶಿವರುದ್ರಪ್ಪ ಸೇರಿದಂತೆ ಇತರರಿದ್ದರು.

ಬಣ್ಣಾರಿ ಸಕ್ಕರೆ ಕಾರ್ಖಾನೆ ಮುಂದೆ
ಕೃಷಿ ಕಾರ್ಮಿಕರ ಸಂಘಟನೆ ಕಾರ್ಯಕರ್ತರ ಪ್ರತಿಭಟನೆ


ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯ ಮುಂಭಾಗ ಪ್ರತಿಭಟನೆ ನಡೆಸುತ್ತಿರುವ ರೈತರು

ಭೂಮಿ ಕಳೆದುಕೊಂಡ ರೈತರ ಮಕ್ಕಳಿಗೆ ಉದ್ಯೋಗ ನೀಡಲು ಆಗ್ರಹ

ನಂಜನಗೂಡು, ಜ.10– ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಗಾಗಿ ಭೂಮಿ ಕಳೆದುಕೊಂಡ ರೈತರ ಮಕ್ಕಳಿಗೆ ಕಾಯಂ ಉದ್ಯೋಗ ನೀಡುವಂತೆ ಆಗ್ರಹಿಸಿ ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆಯ ಕಾರ್ಯಕರ್ತರು ಕಾರ್ಖಾನೆಯ ಮುಂಭಾಗ ಪ್ರತಿಭಟನೆ ನಡೆಸಿದರು.

ತಾಲೂಕಿನ ಮಲ್ಲೂಪುರ ಬಳಿಯಿರುವ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯ ಮುಂಭಾಗ ಜಮಾವಣೆಗೊಂಡ ಕಾರ್ಯಕರ್ತರು ಕಾರ್ಖಾನೆಯ ಆಡಳಿತ ಮಂಡಳಿ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಎಐಕೆಕೆಎಂಎಸ್ ಸಂಘಟನೆಯ ಜಿಲ್ಲಾ ಸಂಚಾಲಕ ಬಸವರಾಜು ಮಾತನಾಡಿ, ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ 1992ರಿಂದಲೇ ಉತ್ಪಾದನೆಯನ್ನು ಪ್ರಾರಂಭಿಸಿದೆ. ಆದರೆ ಕಾರ್ಖಾನೆಗಾಗಿ ಭೂಮಿ ಕಳೆದುಕೊಂಡ ರೈತರ ಮಕ್ಕಳಿಗೆ ಉದ್ಯೋಗ ನೀಡದೆ ಕಾರ್ಖಾನೆ ಆಡಳಿತ ಮಂಡಳಿ ವಂಚಿಸುತ್ತಿದೆ. ಭೂಮಿ ಕಳೆದುಕೊಂಡ ಸುಮಾರು 16 ರೈತರ ಮಕ್ಕಳು ಕಾಯಂ ಉದ್ಯೋಗವಿಲ್ಲದೆ ಕಳೆದ 15 ವರ್ಷಗಳಿಂದಲೂ ಇಎಸ್‌ಐ, ಪಿಎಫ್, ಸುರಕ್ಷಿತ ಪರಿಕರಗಳಿಲ್ಲದೆ ಹೊರಗುತ್ತಿಗೆ ಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ ಎಂದರು.

9 ರೈತರ ಮಕ್ಕಳಿಗೆ ಉದ್ಯೋಗವನ್ನೇ ನೀಡಿಲ್ಲ, ಇತ್ತ ಭೂಮಿಯೂ ಇಲ್ಲದೆ ಇತ್ತ ಕೆಲಸವೂ ಇಲ್ಲದೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ಭೂಮಿ ಕಳೆದುಕೊಂಡ ರೈತರ ಮಕ್ಕಳಿಗೆ ಉದ್ಯೋಗ ನೀಡುವಂತೆ ಕೆಐಎಡಿಬಿ ಅಧಿಕಾರಿಗಳು, ಮುಖ್ಯಮಂತ್ರಿ ಸಿದ್ದರಾಮಯ್ಯರವರು ಸೂಚನೆ ನೀಡಿದ್ದರೂ ಸಹ ಸರ್ಕಾರಿ ಅಧಿಕಾರಿಗಳ ಮಾತಿಗಾಗಲಿ, ಮುಖ್ಯಮಂತ್ರಿಗಳ ಮಾತಿಗೂ ಬೆಲೆ ಕೊಡದೆ ಕಾರ್ಖಾನೆ ಆಡಳಿತ ಮಂಡಳಿ ನಿರ್ಲಕ್ಷ್ಯ ಮನೋಭಾವ ಅನುಸರಿಸುತ್ತಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಭೂಮಿ ಕಳೆದುಕೊಂಡು ಹೊರಗುತ್ತಿಗೆ ಕಾರ್ಮಿಕರಾಗಿ ದುಡಿಯುತ್ತಿರುವ ರೈತರ ಮಕ್ಕಳಿಗೆ ಈ ಕೂಡಲೇ ಉದ್ಯೋಗ ನೀಡಬೇಕು ಮತ್ತು ಕೆಲಸ ನೀಡದೆ ಇರುವ ರೈತರ ಮಕ್ಕಳಿಗೆ ಉದ್ಯೋಗ ನೀಡಬೇಕು ಇಲ್ಲವಾದಲ್ಲಿ ನಮ್ಮ ಪ್ರತಿಭಟನೆಯನ್ನು ಹಿಂಪಡೆಯುವ ಪ್ರಶ್ನೆಯೇ ಇಲ್ಲ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ರೈತ ಸಂಘಟನೆಯ ಬೊಕ್ಕಹಳ್ಳಿ ನಂಜುಂಡಸ್ವಾಮಿ, ಉಗ್ರನರಸಿಂಹೇಗೌಡ, ಹೆಜ್ಜಿಗೆ ಪ್ರಕಾಶ್, ಗುರುಲಿಂಗೇಗೌಡ, ಆರಾಧ್ಯ, ನಂಜುಂಡ, ಶ್ರೀಕಂಠ, ಉಮೇಶ್ ಮತ್ತು ಸಂತ್ರಸ್ತ ಕುಟುಂಬಗಳು ಇದ್ದವು.

ಡಾ.ಅಂಬೇಡ್ಕರ್ ಪುತ್ಥಳಿ ನಿರ್ಮಿಸಲು ಸಮಿತಿ ರಚಿಸಿ

ಹುಣಸೂರು, ಜ.10– ತಾಲೂಕಿನ ರತ್ನಪುರಿ ಗ್ರಾಮದಲ್ಲಿ ಅಂಬೇಡ್ಕರ್ ಪುತ್ಥಳಿ ಮತ್ತು ಉದ್ಯಾನವನ ನಿರ್ಮಿಸಲು ಗ್ರಾಮದ ಹಿರಿಯರ ಸಭೆ ಸೇರಿ ಸರ್ವಾನುಮತದಿಂದ ತೀರ್ಮಾನ ಕೈಗೊಂಡು ಸಮಿತಿ ರಚನೆ ಮಾಡಿದ್ದಾರೆ.

ಗ್ರಾಮದ ಶಾಲೆಯ ಹತ್ತಿರ ಶುದ್ಧ ಕುಡಿಯುವ ನೀರಿನ ಘಟಕದ ಪಕ್ಕದಲ್ಲಿ ಅಂಬೇಡ್ಕರ್ ಪುತ್ಥಳಿ ಮತ್ತು ಉದ್ಯಾನವನ ನಿರ್ಮಾಣ ಮಾಡಲು ಉದ್ದೇಶಿಸಿದ್ದು, ಅದರಂತೆ ಎಪಿಎಂಸಿ ಆವರಣದಲ್ಲಿ ಸಭೆ ಸೇರಿ ಪುತ್ಥಳಿ ಮತ್ತು ಉದ್ಯಾನವನ ನಿರ್ಮಾಣ ಮಾಡಲು ಮತ್ತು ಇದರ ನಿರ್ವಹಣೆಗಾಗಿ ಕಮಿಟಿಯನ್ನು ರಚಿಸಲಾಯಿತು.

ಸಮಿತಿಯ ಪದಾಧಿಕಾರಿಗಳಾಗಿ ಹರಿಹರ ಆನಂದ ಸ್ವಾಮಿ, ನಾಗರಾಜು, ಬಿ.ವೈ. ಪ್ರಸನ್ನ, ಅಜ್ಗರ್ ಪಾಷಾ, ಸರವಣ, ನಾಗೇಶ್ ರಾವ್ ಮೆಂಗಾಣಿ (ಬಾಬು), ಶ್ರೀಧರ್ ರಾವ್ ಸಿಂಧೆ ಸುದರ್ಶನ್ ಸಿಂಗ್ (ದೀಪು), ನಂದೀಶ್, ವಿಜೇಂದ್ರಕುಮಾರ್, ಕರ್ಣ, ರತ್ನಪುರಿ ಪುಟ್ಟಸ್ವಾಮಿ, ಅಗಸ್ಟೀನ್ (ಅಬ್ಬು), ರಫೀಕ್, ಮುಜೀಬ್, ಮೋಹನಾಚಾರಿ, ಶಿವಣ್ಣ, ಜನಾರ್ಧನ, ಕೃಷ್ಣೋಜಿರಾವ್ ಅವರನ್ನು ಆಯ್ಕೆಮಾಡಲಾಯಿತು.

ರಾಜಕೀಯ ಸ್ಥಾನಮಾನದಿಂದ ಸವಿತಾ ಸಮಾಜ ವಂಚಿತ

ಸವಿತಾ ಸಮಾಜದ ಮೈಸೂರು ಜಿಲ್ಲಾಧ್ಯಕ್ಷ ನಾಗೇಶ್ ವಿಷಾದ


ತಿ.ನರಸೀಪುರದಲ್ಲಿ ತಾಲೂಕು ಸವಿತಾ ಸಮಾಜ ನಾದಬ್ರಹ್ಮ ಸಂಗೀತ ವಾದ್ಯಗಾರರ ಕಲಾಸಂಘ ಆಯೋಜಿಸಿದ್ದ 8 ನೇ ವರ್ಷದ ತ್ಯಾಗರಾಜ ಸ್ವಾಮಿಗಳ ಆರಾಧನ ಮಹೋತ್ಸವ ಕಾರ್ಯಕ್ರಮವನ್ನು ವಾಟಾಳು ಮಠದ ಸಿದ್ದಲಿಂಗಶಿವಾಚಾರ್ಯ ಸ್ವಾಮಿ ಉದ್ಘಾಟಿಸಿದರು.

ತಿ.ನರಸೀಪುರ, ಜ.10– ಅಸಂಘಟಿತ ಸಮುದಾಯವಾದ ಸವಿತಾ ಸಮಾಜ ರಾಜಕೀಯ ಸ್ಥಾನಮಾನದಿಂದ ವಂಚಿತವಾಗಿದೆ ಎಂದು ಸವಿತಾ ಸಮಾಜದ ಮೈಸೂರು ಜಿಲ್ಲಾಧ್ಯಕ್ಷ ಎನ್.ಆರ್. ನಾಗೇಶ್ ವಿಷಾದ ವ್ಯಕ್ತಪಡಿಸಿದರು.

ಪಟ್ಟಣದ ಆರ್ಯಮಹಲ್ ಕಲ್ಯಾಣ ಮಂಟಪದಲ್ಲಿ ತಾಲೂಕು ಸವಿತಾ ಸಮಾಜ ನಾದಬ್ರಹ್ಮ ಸಂಗೀತ ವಾದ್ಯಗಾರರ ಕಲಾ ಸಂಘ ಆಯೋಜಿಸಿದ್ದ 8 ನೇ ವರ್ಷದ ತ್ಯಾಗರಾಜ ಸ್ವಾಮಿಗಳ ಆರಾಧನ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಸವಿತಾ ಸಮಾಜಕ್ಕೆ ರಾಜಕೀಯ ಸ್ಥಾನಮಾನ ನೀಡುವುದಾಗಿ ಹೇಳುವ ರಾಜಕೀಯ ಪಕ್ಷಗಳು ಚುನಾವಣೆಗೆ ಟಿಕೆಟ್ ಹಂಚಿಕೆ ಮಾಡುವ ಸಂದರ್ಭದಲ್ಲಿ ಸಮಾಜವನ್ನು ನಿರ್ಲಕ್ಷಿಸುತ್ತವೆ. ಸಮುದಾಯ ಸಮಗ್ರವಾಗಿ ಮುಂದೆ ಬರಲು ರಾಜಕೀಯ ಪ್ರಾತಿನಿಧ್ಯ ಅಗತ್ಯ. ಸಮಾಜ ಸುಧಾರಣೆಯ ಮಾತನಾಡುವ ಎಲ್ಲಾ ರಾಜಕೀಯ ಪಕ್ಷಗಳು ಈ ಬಗ್ಗೆ ಗಮನ ಹರಿಸಬೇಕು. ಸವಿತಾ ಸಮಾಜಕ್ಕೆ ಸಾಮಾಜಿಕ ನ್ಯಾಯ ಒದಗಿಸಿಕೊಡಲು ಎಲ್ಲ ಪಕ್ಷಗಳೂ ಮುಂದಾಗಬೇಕು' ಎಂದು ಅವರು ಒತ್ತಾಯಿಸಿದರು.

ಈ ವೇಳೆ ವಾಟಾಳು ಮಠದ ಸಿದ್ದಲಿಂಗಶಿವಾಚಾರ್ಯಸ್ವಾಮಿ, ಕಸಾಪ ಅಧ್ಯಕ್ಷ ಪುಟ್ಟಸ್ವಾಮಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಿವಶಂಕರಮೂರ್ತಿ, ಅನಾಥ ಶವಗಳ ಮುಕ್ತಿದಾತ ಡಾ.ಎಂ. ಮಾದೇಶ್, ಸವಿತಾ ಸಮಾಜದ ತಾಲೂಕು ಅಧ್ಯಕ್ಷ ಎಂ.ನಾಗೇಂದ್ರ, ವಿಚಾರವಾದಿ ಪ್ರಭುಸ್ವಾಮಿ, ಸೇವಾಶ್ರಯ ಫೌಂಡೇಷನ್ ಅಧ್ಯಕ್ಷ ಮಣಿಕಂಠರಾಜ್ ಗೌಡ, ಚಿಕ್ಕಮ್ಮತಾಯಿ ಗುಡ್ಡಪ್ಪ ಶಶಿಕುಮಾರ್, ಪುರಸಭೆ ಮಾಜಿ ಅಧ್ಯಕ್ಷ ನಂಜುಂಡಸ್ವಾಮಿ, ಸೋಮು, ತಾಲೂಕು ಸವಿತಾ ಸಮಾಜ ನಾದಬ್ರಹ್ಮ ಸಂಗೀತ ವಾದ್ಯಗಾರರ ಕಲಾ ಸಂಘದ ಅಧ್ಯಕ್ಷ ಲೋಕೇಶ್, ಗೌರವಾಧ್ಯಕ್ಷ ನಾಗರಾಜು, ಕಾರ್ಯದರ್ಶಿ ಚಂದ್ರಶೇಖರ್, ಖಜಾಂಚಿ ಗಣೇಶ್, ಶೇಖರ್, ವೆಂಕಟೇಶ್, ವೆಂಕಟರಾಮು, ನಾಗೇಂದ್ರ, ಸವಿತಾ ಸಮಾಜದ ಸಿದ್ದರಾಜು(ಕರಡ), ಜೋಗಿ ನಾಗರಾಜು ಸೇರಿದಂತೆ ಮತ್ತಿತರರಿದ್ದರು.


ತುಮ್ಮನೇರಳೆ ಹಾಲು ಉತ್ಪಾದಕರ ಸಂಘದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಸದಸ್ಯರು ಗ್ರಾಪಂ ಅಧ್ಯಕ್ಷ ಟಿ.ಎನ್. ನಂದೀಶ ಅವರ ನೇತೃತ್ವದಲ್ಲಿ ಜಯಭೇರಿ ಬಾರಿಸಿದ್ದಾರೆ. ಮಾಜಿ ಪ್ರಧಾನ ಟಿ.ಜಿ. ನಾಗರಾಜು, ಪಟೇಲ್ ಗುರುಸ್ವಾಮಿ, ನಂಜುಂಡಸ್ವಾಮಿ, ರಾಜಣ್ಣ, ನಂದೀಶ, ಪಟೇಲ್ ಶಿವಕುಮಾರ್, ಚಂದ್ರು, ಮಂಜು, ಮಲ್ಲೇಶ, ಗೂಳಿಸ್ವಾಮಿ, ಗಿರೀಶ್ ಮಾದಪ್ಪ, ಕುಳ್ಳಪ್ಪ, ಶಾರದಾ ಶಿವಕುಮಾರ್ ಇತರರು ಈ ವೇಳೆ ಉಪಸ್ಥಿತರಿದ್ದರು.


ತಾಂಡವಪುರ ಗ್ರಾಪಂ ಉಪಾಧ್ಯಕ್ಷ ಬಿ.ಶಿವಣ್ಣನವರ ಹುಟ್ಟುಹಬ್ಬದ ಪ್ರಯುಕ್ತ ಅಡಕನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಪ್ರೊಜೆಕ್ಟರ್ ಹಾಗೂ ಸ್ಕ್ರೀನ್ ಅನ್ನು ನೀಡಿದ್ದ ಶಶಿಧರ್ ಅವರನ್ನು ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು ಅಭಿನಂದಿಸಿದರು. ಗ್ರಾಪಂ ಅಧ್ಯಕ್ಷೆ ನಾಗಮ್ಮ, ನಾಗವೇಣಿ ರಾಜು, ರೇವಮ್ಮ, ಸುಧಾರಾಣಿ, ಸಿದ್ದಮ್ಮ, ಮಧು, ಪಟೇಲ್, ಎನ್. ಚಂದ್ರು, ಸಿ.ಎಂ. ಚಂದ್ರು, ಶಶಿಧರ್, ಎಸ್‌ಡಿಎಂಸಿ ಅಧ್ಯಕ್ಷ ಬಸವರಾಜು ಭಾಗವಹಿಸಿದ್ದರು.


ಹಲವಾರ ಡೇರಿ ಜೆಡಿಎಸ್ ಪಾಲು

ತಿ.ನರಸೀಪುರ, ಜ.10–ತಾಲೂಕಿನ ಹಲವಾರ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನ ಜೆಡಿಎಸ್ ಬೆಂಬಲಿತರ ಪಾಲಾಗಿದ್ದು, ಬುಧವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಮಹದೇವಸ್ವಾಮಿ, ಉಪಾಧ್ಯಕ್ಷರಾಗಿ ನಾಗಶೆಟ್ಟಿ ಆಯ್ಕೆಯಾದರು.

ಚುನಾವಣಾ ಸಭೆಯಲ್ಲಿ ಅಧ್ಯಕ್ಷ ಸ್ಥಾನದ ಆಯ್ಕೆ ಬಯಸಿ ಮಹದೇವಸ್ವಾಮಿ ಹಾಗೂ ಗುರುಸ್ವಾಮಿ ಉಮೇದುವಾರಿಕೆ ಸಲ್ಲಿಸಿದರೆ, ಉಪಾಧ್ಯಕ್ಷ ಸ್ಥಾನಕ್ಕೆ ನಾಗಶೆಟ್ಟಿ ಹಾಗೂ ಕಾಳಾಚಾರಿ ನಾಮಪತ್ರ ಸಲ್ಲಿಸಿದರು.

ಒಂದಕ್ಕಿಂತ ಹೆಚ್ಚು ನಾಮಪತ್ರ ಸಲ್ಲಿಕೆಯಾದ ಹಿನ್ನೆಲೆಯಲ್ಲಿ ಚುನಾವಣೆ ನಡೆಸಲಾಯಿತು. ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನದ ಆಯ್ಕೆ ಬಯಸಿದ್ದ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಮಹದೇವಸ್ವಾಮಿ ಹಾಗೂ ನಾಗಶೆಟ್ಟಿ ತಲಾ 8 ಮತಗಳನ್ನು ಪಡೆದರೆ, ಗುರುಸ್ವಾಮಿ ಹಾಗೂ ಕಾಳಾಚಾರಿ ತಲಾ ನಾಲ್ಕು ಮತ ಪಡೆದರು. 8 ಮತಗಳನ್ನು ಪಡೆದ ಮಹದೇವಸ್ವಾಮಿ ಹಾಗೂ ನಾಗಶೆಟ್ಟಿ ವಿಜೇತರಾಗಿದ್ದಾರೆಂದು ಚುನಾವಣಾಧಿಕಾರಿ ಬಿ.ಡಿ. ಸುಮಲತಾ ಘೋಷಿಸಿದರು.

ಚುನಾವಣೆಯಲ್ಲಿ ನಿರ್ದೇಶಕರಾದ ಶಾಂತಶೆಟ್ಟಿ, ನಂಜುಂಡಸ್ವಾಮಿ, ಮಹದೇವಪ್ಪ, ಮರಿಸ್ವಾಮಿ, ಲೋಕಮಣಿ, ಗಿರಿಜಮ್ಮ, ರಾಚಯ್ಯ, ನಂಜುಂಡಸ್ವಾಮಿ ಬಿನ್ ಶಿವಪ್ಪ ಭಾಗವಹಿಸಿದ್ದರು.


ತಿ.ನರಸೀಪುರ ತಾಲೂಕು ಹಲವಾರ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ –ಉಪಾಧ್ಯಕ್ಷ ಸ್ಥಾನಕ್ಕೆ ಬುಧವಾರ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಮಹದೇವಸ್ವಾಮಿ ಹಾಗೂ ನಾಗಶೆಟ್ಟಿ ಅಧ್ಯಕ್ಷ –ಉಪಾಧ್ಯಕ್ಷರಾಗಿ ಆಯ್ಕೆಯಾದರು.

ನೆರಗ್ಯಾತನಹಳ್ಳಿ ಪಿಎಸಿಸಿ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಚೇರ್ಮನ್ ಶಿವಸ್ವಾಮಿ, ರಜನೀಕಾಂತ್(ಪಾಲಾಕ್ಷ), ಅರವಿಂದ್, ಹಲವಾರ ಸಿದ್ದಶೆಟ್ಟಿ, ನಂಜುಂಡಶೆಟ್ಟಿ, ಮಲ್ಲಪ್ಪನ ಮಹದೇವಸ್ವಾಮಿ, ಬಸವರಾಜು(ಅಪ್ಪಿ), ರಾಚಯ್ಯ, ಅಜ್ಜಪ್ಪನ ಮಹದೇವಸ್ವಾಮಿ, ರಘು, ಗೋಪಿ, ಮಹದೇವಶೆಟ್ಟಿ, ಸಿದ್ದರಾಜು ಮತ್ತಿತರರಿದ್ದರು.

ಚುಂಚನಹಳ್ಳಿ ಡೇರಿಗೆ ನಿರ್ದೇಶಕರ ಅವಿರೋಧ ಆಯ್ಕೆ

ನಂಜನಗೂಡು, ಜ.10– ತಾಲೂಕಿನ ಚುಂಚನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕರ ಸ್ಥಾನಕ್ಕೆ ಸೋಮವಾರ ನಡೆದ ಚುನಾವಣೆಯಲ್ಲಿ 10 ಮಂದಿ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಬಿಜೆಪಿ ಬೆಂಬಲಿತ ಅಭ್ಯರ್ಥಿಗಳಾದ ಬಸಪ್ಪ, ಹೇಮಪ್ಪ, ಸಿದ್ದರಾಜು, ಶಶಿಧರ್, ಮಹದೇವಪ್ಪ, ಪಿ.ಮಹದೇವಪ್ಪ, ಸಿದ್ದರಾಜು, ಮುದ್ದಮಲ್ಲಯ್ಯ, ಸುಬ್ಬಮ್ಮ, ಭಾಗ್ಯಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆ ಘೋಷಿಸಲಾಯಿತು. ಈ ವೇಳೆ ಮಾಜಿ ತಾಪಂ ಉಪಾಧ್ಯಕ್ಷ ಸಿ.ಎಂ.ಮಹದೇವಯ್ಯ, ಗ್ರಾಪಂ ಸದಸ್ಯರಾದ ರವಿಕುಮಾರ್, ಮಹದೇವ, ಮುಖಂಡರಾದ ನಾಗರಾಜು, ಮಂಜುಳಾ, ಪುಟ್ಟಪ್ಪ, ಸಿ.ಜಿ.ಮಂಜು, ರಾಜೇಂದ್ರ, ಮಹದೇವಪ್ಪ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಡೆವಿಲ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಸಲಾರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಕಾಟೇರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಟೇರ (ಕ)	4 ಪ್ರದರ್ಶನಗಳು
ರಾಜಕಮಲ್	
ಕಾಟೇರ (ಕ)	4 ಪ್ರದರ್ಶನಗಳು
ಸಂಗಂ	
ಸಲಾರ್ (ಕ)	4 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಟೈಗರ್–3 (ಹಿಂ)	4 ಪ್ರದರ್ಶನಗಳು
ಪ್ರಭಾ	
on line ಮದುವೆ off line ಶೋಭನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ಪ್ರೇಮ ಕಥ (ತೆ):** ಬೆ.10.20ಕ್ಕೆ, **ಮಾಥಿಮಾರನ್ (ತ):** ಮ.1.05ಕ್ಕೆ, **ಸಲಾರ್–1 (ತೆ):** ಮ.3.40ಕ್ಕೆ, **ಕಾಟೇರ (ಕ):** ರಾ.7.05ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	**ಅನಿಮಲ್ (ಹಿಂ):** ಮ.12.05ಕ್ಕೆ, **ಕಾಟೇರ (ಕ):** ಮ.3.50ಕ್ಕೆ, ರಾ.10ಕ್ಕೆ, **ಪ್ರೇಮ ಕಥ (ತೆ):** ರಾ.7.15ಕ್ಕೆ.
ಸ್ಕ್ರೀನ್ 3	**ಒಂಟಿ ಬಂಟಿ ಲವ್ ಸ್ಟೋರಿ (ಕ):** ಬೆ.10.20ಕ್ಕೆ, **ಡಂಕಿ (ಹಿಂ):** ಮ.1.20ಕ್ಕೆ, ರಾ.7.10ಕ್ಕೆ, **ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ):** ಸಂ.4.30ಕ್ಕೆ, **ಆಟಂ (ಮ):** ರಾ.10.15ಕ್ಕೆ.
ಸ್ಕ್ರೀನ್ 4	**ಕಾಟೇರ (ಕ):** ಬೆ.9.50ಕ್ಕೆ, ಮ.1.15ಕ್ಕೆ, ಸಂ.4.45ಕ್ಕೆ, ರಾ.8.30ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	**ಕಾಟೇರ (ಕ):** ಬೆ.11.30ಕ್ಕೆ, ಮ.3.10ಕ್ಕೆ, ಸಂ.6.50ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	**ಕಾಟೇರ (ಕ):** ಬೆ.10.30ಕ್ಕೆ, ಮ.2.10ಕ್ಕೆ, ಸಂ.5.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	**ಸಲಾರ್–1 (ಕ):** ಬೆ.11ಕ್ಕೆ, ಸಂ.6.10ಕ್ಕೆ, ರಾ.9.45ಕ್ಕೆ, **ಸಲಾರ್ –1 (ಹಿಂ):** ಮ.2.35ಕ್ಕೆ,
ಸ್ಕ್ರೀನ್ 4	**ಮೈಗ್ರೇಷನ್ (3ಡಿ)(ಇಂ):** ಬೆ.10.30ಕ್ಕೆ, ರಾ.7.55ಕ್ಕೆ, **ಡಂಕಿ (ಹಿಂ):** ಮ.12.35ಕ್ಕೆ, ಸಂ.4.35ಕ್ಕೆ, **ಸಲಾರ್–1 (ಹಿಂ):** ರಾ.10ಕ್ಕೆ

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ಪಾರ್ಕಿಂಗ್ (ಕ):** ಬೆ.10.35ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ 2 (ಕ):** ಮ.1.10ಕ್ಕೆ, **ಬ್ಯಾಡ್ ಮ್ಯಾನರ್ಸ್ (ಕ):** ಸಂ.4ಕ್ಕೆ, **ಅರ್ಧಂಬರ್ಧ ಪ್ರೇಮ ಕಥೆ (ಕ):** ಸಂ.6.35ಕ್ಕೆ, **ಅನ್ನಪೂರ್ಣಿ (ತ):** ರಾ.9.15ಕ್ಕೆ
ಸ್ಕ್ರೀನ್ 2	**ಅನಿಮಲ್ (ಹಿಂ):** ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ಮ.1.45ಕ್ಕೆ.
ಸ್ಕ್ರೀನ್ 3	**ಸ್ಯಾಮ್ ಬಹದ್ದೂರ್ (ಹಿಂ):** ಬೆ.10.10ಕ್ಕೆ, ಸಂ.4.50ಕ್ಕೆ, **ಅನಿಮಲ್ (ಹಿಂ):** ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10.45ಕ್ಕೆ, **ಅನಿಮಲ್ (ಹಿಂ):** ಮ.2.40ಕ್ಕೆ, **ನೆಪೋಲಿಯನ್ (ಇಂ):** ಸಂ.6.25ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, **ಡಂಕಿ (ಹಿಂ):** ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, **ನೆರು (ಮ):** ರಾ.10.10ಕ್ಕೆ, **ಸಲಾರ್ –1 (ಮ):** ಸಂ.6.35ಕ್ಕೆ, **ಸಲಾರ್–1 (ಹಿಂ):** ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, **ಸಲಾರ್–1 (ಕ):** ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, **ಸಲಾರ್– 1(ತೆ):** ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸ್ಮಶಾನ ಅಭಿವೃದ್ಧಿಗೆ ಕ್ರಿಯಾ ಯೋಜನೆ ಸಿದ್ಧಪಡಿಸಿ

ಹುಣಸೂರು, ಜ.10– ತಾಲೂಕಿನ ಗಾವಡಗೆರೆ ಹೋಬಳಿ, ಕಟ್ಟೆಮಳಲವಾಡಿ ಗ್ರಾಮದ ಸ್ಮಶಾನ ಅಭಿವೃದ್ಧಿಪಡಿಸಲು ಕ್ರಿಯಾಯೋಜನೆ ಸಿದ್ಧಪಡಿಸುವಂತೆ ತಹಸೀಲ್ದಾರ್ ಮಂಜುನಾಥ್ ಸೂಚಿಸಿದ್ದಾರೆ.

ಗ್ರಾಮದ ನಂದಿ ಸರ್ಕಲ್ ಪಕ್ಕದಲ್ಲಿರುವ ಪರಿಶಿಷ್ಟ ಜಾತಿಯ ಸ್ಮಶಾನಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ಅವರು ಮಾತನಾಡಿದರು. ಕಟ್ಟೆಮಳಲವಾಡಿ ಗ್ರಾಮದ ಸರ್ವೆ ನಂಬರ್ 192ರಲ್ಲಿ ಸ್ಮಶಾನ ಮಂಜೂರು ಮಾಡಲಾಗಿದೆ. ಇದರಲ್ಲಿ 3 ಎಕರೆ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಸಮುದಾಯದವರು ಹಲವಾರು ವರ್ಷಗಳಿಂದ ಶವಸಂಸ್ಕಾರ ಮಾಡಿಕೊಂಡು ಬರುತ್ತಿದ್ದಾರೆ. ಆದರೆ ಇತ್ತೀಚೆಗೆ ಮಳೆ ಹೆಚ್ಚಾಗಿ ಮೇಲ್ಭಾಗದ ಸಿಲುಬೆಗೆರೆ ಕೋಡಿ ಬಿದ್ದು ಮತ್ತು ಊರಿನ ಚರಂಡಿ ನೀರು ಹರಿದು ಬಂದು ಸ್ಮಶಾನದಲ್ಲಿ ನಿಂತು ನೀರು ತುಂಬಿಕೊಂಡಿದೆ. ಇದರಿಂದ ಮರಣ ಹೊಂದಿದ ಪರಿಶಿಷ್ಟ ಜಾತಿಯವರು ಈ ಪ್ರದೇಶದಲ್ಲಿ ಶವ ಸಂಸ್ಕಾರ ಮಾಡಲು ಆಗದೆ ತುಂಬಾ ತೊಂದರೆಪಡುವ ಪರಿಸ್ಥಿತಿ ಬಂದಿದೆ ಎಂದು ದೂರುಗಳು ಕೇಳಿಬಂದ ಹಿನ್ನೆಲೆಯಲ್ಲಿ ತಹಸೀಲ್ದಾರ್ ಅವರು ಸ್ಥಳ ಪರಿಶೀಲನೆ ನಡೆಸಿ, ಈ ಸೂಚನೆ ನೀಡಿದ್ದಾರೆ.

ಮುಖಂಡರಾದ ನೇರಳಕುಪ್ಪೆ ಮಹದೇವ, ನಿಂಗರಾಜ್ ಮಲ್ಲಾಡಿ, ರಾಜೇಶ್,



ತಾಲೂಕು ಪಂಚಾಯ್ತಿ ಇಂಜಿನಿಯರ್ ನರಸಿಂಹಯ್ಯ, ತಾಲೂಕು ಸಮಾಜ ಕಲ್ಯಾಣಾಧಿಕಾರಿ ಸಿದ್ದರಾಜು, ಗಾವಡಗೆರೆ ಕಂದಾಯಾಧಿಕಾರಿ ಅರುಣ್ ಕುಮಾರ್, ಹೇಮಂತ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಿಜಯಕುಮಾರಿ, ಸಿಬ್ಬಂದಿ ಮಹದೇವ, ವಿ.ಎ.ಶ್ರೀವಾಸ್ತವ, ಕಟ್ಟೆಮಳಲವಾಡಿ ಗ್ರಾಪಂ ಅಧ್ಯಕ್ಷ ಚಿನ್ನಮುತ್ತು ಪುಟ್ಟರಾಜು, ಉಪಾಧ್ಯಕ್ಷ ದಿಲೀಪ್, ಗ್ರಾಪಂ ಸದಸ್ಯರಾದ ನಟರಾಜು, ತ್ಯಾಗರಾಜು, ಮಾದೇವ, ಎಸ್.ಗಣೇಶ, ದಸಂಸ ದೇವೇಂದ್ರ ಕುಳುವಾಡಿ ಹಾಜರಿದ್ದರು.


ಹೆಚ್.ಡಿ.ಕೋಟೆ ತಾಲೂಕಿನ ಆನಗಟ್ಟಿ ಗ್ರಾಮದ ಅಂಗನವಾಡಿ ಕೇಂದ್ರದ ಮಕ್ಕಳಿಗೆ ಅಂಬೇಡ್ಕರ್ ಸೇನೆ ತಾಲೂಕು ಸಮಿತಿ ವತಿಯಿಂದ ಉಚಿತವಾಗಿ ಚೇರ್ ವಿತರಿಸಲಾಯಿತು. ಗ್ರಾಪಂ ಸದಸ್ಯ ಆನಗಟ್ಟಿ ಡಿ.ದೇವಯ್ಯ, ಸೋಮಣ್ಣ, ಗ್ರಾಮದ ಯಜಮಾನರಾದ ಜವರಾಜು, ಅಂಬೇಡ್ಕರ್ ಸೇನೆ ಸಮಿತಿಯ ತಾಲೂಕು ಅಧ್ಯಕ್ಷ ಮಹದೇವಸ್ವಾಮಿ ಕೋಟೆ, ಪ್ರಧಾನ ಕಾರ್ಯದರ್ಶಿ ಗಣೇಶ್ ಆನಗಟ್ಟಿ, ಖಜಾಂಚಿ ಹೆಗ್ಗಡಾಪುರ ವಿಶ್ವ(ಚಿಕ್ಕಣ್ಣ), ಸದಸ್ಯರಾದ ಶಿವು ಶೀರನಹುಂಡಿ, ಯೋಗೀಶ್ ಜಕ್ಕಹಳ್ಳಿ, ರಂಗಸ್ವಾಮಿ ಕೂಲ್ಯ, ಮಾದೇಶ್ ಹುಲಿಕುರ, ಆನಗಟ್ಟಿ ಗ್ರಾಮದ ಮುಖಂಡರಾದ ಗೋಪಾಲಯ್ಯ, ಶೇಖರ್, ಅಂಗನವಾಡಿ ಕಾರ್ಯಕರ್ತೆ ಯಶೋಧಾ ಹಾಗೂ ನಾಗಮ್ಮ ಇದ್ದರು.

ವಿಜೃಂಭಣೆಯ ಅಯ್ಯಪ್ಪಸ್ವಾಮಿ ಪೂಜಾ ಮಹೋತ್ಸವ

ಕಂಪಲಾಪುರ, ಜ.10– ಶಬರಿಮಲೆ ಶ್ರೀಅಯ್ಯಪ್ಪ ಸೇವಾ ಸಮಿತಿ ವತಿಯಿಂದ ಗ್ರಾಮದಲ್ಲಿ ಅಯ್ಯಪ್ಪಸ್ವಾಮಿ ಪೂಜಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಪೂಜಾ ಸ್ಥಳದಲ್ಲಿ ಗಣಪತಿ, ಅಯ್ಯಪ್ಪ, ಸುಬ್ರಹ್ಮಣ್ಯಸ್ವಾಮಿಯ ಫೋಟೋಗಳನ್ನು ಬಾಳೆದಿಂಡಿನಿಂದ ಮಾಡಿದ ಅಲಂಕೃತ ಮಂಟಪದಲ್ಲಿ ಇಟ್ಟು ಪೂಜೆ ನೆರವೇರಿಸಲಾಯಿತು. ಕುಶಾಲನಗರದ ಮುತ್ತಿನ ಮುಳ್ಳುಸೋಗೆಯ ಗುರುಸ್ವಾಮಿಗಳಾದ ನಾಗರಾಜ್ ಹಾಗೂ ಹರಿಲಾಪುರದ ಪುರುಷೋತ್ತಮ್ ಅವರ ನೇತೃತ್ವದಲ್ಲಿ ಪೂಜಾ ವಿಧಿ ವಿಧಾನಗಳು ನೆರವೇರಿದವು.

ಹೆಗ್ಗೆರೆ ಕೆರೆಯಿಂದ ಕಳಸ: ರಾತ್ರಿ ಗ್ರಾಮದ ಹೊರವಲಯದಲ್ಲಿರುವ ಹೆಗ್ಗೆರೆ ಕೆರೆಯಲ್ಲಿ ಎಲ್ಲಾ ಅಯ್ಯಪ್ಪ ಮಾಲಾಧಾರಿಗಳು ಸ್ನಾನ ಮಾಡಿದರು. ಬಳಿಕ ಅಲ್ಲಿಂದ ಮೂವರು ಕಳಸ ಹೊತ್ತು ನಿಂತರೆ ಅವರೆದುರು 70



ಮಾಲಾಧಾರಿಗಳು ಒಂದೂವರೆ ಕಿಲೋ ಮೀಟರ್ ಹಿಮ್ಮುಖವಾಗಿ ನಡೆದು ಪೂಜಾ ಸ್ಥಳಕ್ಕೆ ಬಂದಿದ್ದು ವಿಶೇಷವಾಗಿತ್ತು

ಕುದಿಯುವ ಎಣ್ಣೆಯಲ್ಲಿ ಕಜ್ಜಾಯ ತೆಗೆದ ಮಾಲಾಧಾರಿಗಳು: ಕೊಂಡ ಹಾಯ್ದ ನಂತರ ಗುರುಸ್ವಾಮಿಗಳು ಖಜ್ಜಾಯ ಬೇಯಿಸಲು ಇಟ್ಟಿಗೆಯಿಂದ ಒಲೆ ನಿರ್ಮಿಸಿ ನಿಯಮದಂತೆ ಪೂಜೆ ಸಲ್ಲಿಸಿ ಬಾಣಲಿಯೊಳಗೆ 2 ಟಿನ್ ಎಣ್ಣೆ ಸುರಿದು ಕಾದ ನಂತು ಕಜ್ಜಾಯ ಬೇಯಿಸಲು ಪ್ರಾರಂಭಿಸಿದರು. ಎಣ್ಣೆ ಕುದಿಯುತ್ತಿದ್ದಂತೆ ಗುರುಸ್ವಾಮಿಗಳು ಮೊದಲು ಹೊಂಬಾಳೆ ಎಣ್ಣೆಯೊಳಗೆ ಅದ್ದಿ ಅದರ ಸಮೇತ ಮೈಮೇಲೆಲ್ಲಾ ಎರಚಿಕೊಂಡರು.

ಶ್ರೀಶೈಲ ಜಗದ್ಗುರು ಇಷ್ಟಲಿಂಗ ಮಹಾಪೂಜೆ, ಶ್ರೀ ಮಹಾಲಿಂಗ ಸ್ವಾಮೀಜಿ ಪುಣ್ಯ ಸ್ಮರಣೋತ್ಸವ

ತಿ.ನರಸೀಪುರ, ಜ.10– ತಾಲೂಕಿನ ಮುಡುಕುತೊರೆ ಕ್ಷೇತ್ರದ ತೋಪಿನ ಮಠದಲ್ಲಿ ಶ್ರೀ ಶೈಲ ಜಗದ್ಗುರು ಇಷ್ಟಲಿಂಗ ಮಹಾಪೂಜೆ ಹಾಗೂ ಲಿಂಗೈಕ್ಯ ಶ್ರೀ ಮಹಾಲಿಂಗ ಸ್ವಾಮೀಜಿ 3ನೇ ವರ್ಷದ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮ ಶುಕ್ರವಾರ (ಜ.12) ಜರುಗಲಿದೆ ಎಂದು ತೋಪಿನ ಮಠದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.


ತಿ.ನರಸೀಪುರ ಪಟ್ಟಣದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮುಡುಕುತೊರೆ ತೋಪಿನಮಠದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಮಾತನಾಡಿದರು.

ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಅವರು, ಶುಕ್ರವಾರ ಬೆಳಗ್ಗೆ 10.30 ಗಂಟೆಗೆ ಪುಣ್ಯ ಸ್ಮರಣೋತ್ಸವದ ಜೊತೆಗೆ ಧಾರ್ಮಿಕ ಸಮಾರಂಭ ಸಹ ನಡೆಯಲಿದ್ದು, ಶ್ರೀಶೈಲ ಪೀಠದ 1008ನೇ ಜಗದ್ಗುರು ಡಾ.ಚನ್ನ ಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು,ಸುತ್ತೂರು ವೀರ ಸಿಂಹಾಸನ ಮಹಾ ಸಂಸ್ಥಾನ ಮಠದ ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದಾರೆ. ಕನಕಪುರ ಮರಳೆ ಗವಿಮಠದ ಮುಮ್ಮಡಿ ಶಿವರುದ್ರಸ್ವಾಮೀಜಿ, ಆದಿಚುಂಚನಗಿರಿ ಮಠದ ಶ್ರೀ ಸೌಮ್ಯನಾಥ ಸ್ವಾಮೀಜಿ ಸಮ್ಮುಖದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಕಾರ್ಯಕ್ರಮದ ದಿವ್ಯ ನೇತೃತ್ವವನ್ನು ತೋಪಿನ ಮಠದ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ವಹಿಸಲಿದ್ದಾರೆ ಎಂದು ತಿಳಿಸಿದರು.

ಭಾರತೀಯ ಜನತಾ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಧಾರ್ಮಿಕ ಸಮಾರಂಭವನ್ನು ಉದ್ಘಾಟಿಸಲಿದ್ದು, ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಗುಂಡ್ಲುಪೇಟೆ ಶಾಸಕ ಗಣೇಶ್ ಪ್ರಸಾದ್, ಮಳವಳ್ಳಿ ಶಾಸಕ ಪಿ.ಎಂ.ನರೇಂದ್ರ ಸ್ವಾಮಿ, ಹನೂರು ಶಾಸಕ ಎಂ.ಮಂಜುನಾಥ್, ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್, ಬಿಜೆಪಿ ಮುಖಂಡ ಡಾ.ರೇವಣ್ಣ ಸೇರಿದಂತೆ ವಿವಿಧ ಮಠಾಧೀಶರು, ಹರಗುರು ಚರಮೂರ್ತಿಗಳು, ರಾಜಕೀಯ ಮುಖಂಡರು, ಸಮಾಜದ ಗಣ್ಯರು ಸಮಾರಂಭದಲ್ಲಿ ಹಾಜರಿರಲಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸ್ವಾಮೀಜಿಗಳ ಆಶೀರ್ವಾದ ಪಡೆದುಕೊಳ್ಳುವಂತೆ ಅವರು ತಿಳಿಸಿದರು. ವೀರಶೈವ ಸಮಾಜದ ಮುಖಂಡ ಅಂಗಡಿ ಶೇಖರ್ ಮಾತನಾಡಿ, ಈ ಕಾರ್ಯಕ್ರಮಕ್ಕೆ ಹೆಚ್ಚಿನ ಭಕ್ತರು ಆಗಮಿಸುವಂತೆ ಮನವಿ ಮಾಡಿದರು. ಸಮಾಜದ ಮುಖಂಡರಾದ ನಾಗರಾಜು (ಜಿಪ್ಪಿ), ಹೋಟೆಲ್ ಮಹೇಶ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.


ಸಾಲಿಗ್ರಾಮ ತಾಲೂಕಿನ ಸಕ್ಕರೆ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಯಲ್ಲಿ ಗಬ್ಬೆದ್ದು ನಾರುವ ಶೌಚಾಲಯ, ಮಲಗುವ ಕೋಣೆಯ ಅಶುಚಿತ್ವ, ವಾರ್ಡನ್ ಇಲ್ಲದೆ ಇರುವುದು ಸೇರಿದಂತೆ ಅವ್ಯವಸ್ಥೆಗಳ ತಾಣವಾಗಿರುವುದನ್ನು ಖಂಡಿಸಿ ಪೋಷಕರು ಶಾಲೆಯ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

9TH YEAR REMEMBRANCE



L. MALLAIAH
1932-2015
Proprietor
SUNLIGHT
CLEANERS & DYERS
K.R. Circle, Mysore
Son: Shankar.M & Family

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ




ಶ್ರೀಯುತ ಎಸ್.ಮಂಜುನಾಥ್
ಉಪಾಧ್ಯಕ್ಷರು, ವಾಣಿವಿಲಾಸ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ
(ಲೇಟ್ ಚಿಕ್ಕರಾಮೇಗೌಡರ ಮೊಮ್ಮಗ ಮತ್ತು ಲೇಟ್ ಶ್ರೀಮತಿ ದೇವಮ್ಮ ಮತ್ತು ಲೇಟ್ ಶ್ರೀ ಸೀತಾರಾಮುರವರ ಮಗ)
ಮಂಚೇಗೌಡನಕೊಪ್ಪಲು, ಮೈಸೂರು – 17

ಇವರು ದಿನಾಂಕ: 01.01.2024 ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 11.01.2024 ಗುರುವಾರ ಬೆಳಗ್ಗೆ 9.00 ಗಂಟೆಗೆ ನಮ್ಮ ಸ್ವಗೃಹ #158, ವಾಣಿವಿಲಾಸ ಬಡಾವಣೆ, ಹೆಬ್ಬಾಳ್, ಮೈಸೂರಿನಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಪತ್ನಿ : ಶ್ರೀಮತಿ ಪಿ.ಜಯಲಕ್ಷ್ಮಮ್ಮ, ಮಕ್ಕಳಾದ : ಶ್ರೀ ಪ್ರಸನ್ನ ಕುಮಾರ್ ಎಂ., ಶ್ರೀ ಪ್ರಶಾಂತ್ ಎಂ., ಸಹೋದರ: ಸೋಮಶೇಖರ್, ಅಕ್ಕಂದಿರು ಮತ್ತು ಕುಟುಂಬವರ್ಗದವರು ಹಾಗೂ ಬಂಧು–ಮಿತ್ರರು

ಭೋಜನ: ಮಧ್ಯಾಹ್ನ 12.30 ಗಂಟೆಗೆ, ಸ್ಥಳ: ಮಂಚೇಗೌಡನಕೊಪ್ಪಲು ಸಮುದಾಯ ಭವನ, ಮಯೂರ್ ಸರ್ಕಲ್ ಹತ್ತಿರ, ಹೆಬ್ಬಾಳ್, ಮೈಸೂರು–570017

22ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಬಿ. ಹೊನ್ನೇಗೌಡರು
ನಿಧನ : 11-01-2002

ನಿಮ್ಮ ನೆನಪಿನಲ್ಲಿ
ಮಕ್ಕಳು, ಸೊಸೆಯಂದಿರು, ಅಳಿಯಂದಿರು ಮತ್ತು ಮೊಮ್ಮಕ್ಕಳು ಹಾಗೂ ಹೂಟಗಳ್ಳಿ ಗ್ರಾಮಸ್ಥರು, ಹೊನ್ನೇಗೌಡ ಬ್ಲಾಕ್, ಹೂಟಗಳ್ಳಿ

KNC INNOVATIVE GLOBAL SCHOOL & P. U. COLLEGE

295/B, Hebbal Industrial Area, Mysuru - 570 016.
Phone: 0821-2402929 / 94811 23959 / 98443 37080

WANTED TEACHING FACULTIES

A Reputed, CBSE affiliated School requires following faculties for the year 2024-25. Candidates having required qualification with minimum 5 years experience may apply. All candidates must have fluency in English.

1. NURSERY TEACHERS with N.S.T/N.T.T/M.N.T.T
2. MOTHER TEACHERS with D.Ed/D.El.Ed for teaching Grade - 1 & 2.
3. TRAINED GRADUATE TEACHERS for Primary & Middle Classes with B.Ed/B.El.Ed for English, Kannada, Hindi, Social Science, Mathematics, Science & Computer subjects.
4. TRAINED GRADUATE TEACHERS for High School with B.Ed., / B.El.Ed for English, Hindi, Social Science & Mathematics subjects.
5. Teachers for Music & Dance & Physical Education.

For Serial number 1 to 5 posts forward your resume with photo to career@kncinnovativeglobalschool.com within 20-01-2024.

6. TRAINED & EXPERIENCED LECTURERS to teach PUC (State syllabus) with CET & NEET in the following subjects: English, Kannada, Physics, Mathematics, Computer Science & Hindi.

Candidates must have fluency in English.

For Serial number 6 forward your resume with photo to puc@kncinnovativeglobalschool.com within 20-01-2024.

Registrations open for Admissions for Montessori-1, 2, 3 & Grade 1–10 (CBSE) classes,
I & II PUC (Science & Commerce Stream) (State Board) for the academic year 2024-25

MUDA APPROVED SITES FOR SALE

Last 8
30X40 EAST FACING
Available.
Location: Adjacent J P Nagar, At Mysore-Ooty Road & Ring Road Junction.
Price @ Rs 65 lakhs onwards
Call: 96200 99122

WANTED

Manager	- 1 Post
Unisex Stylist	- 1 Post
Unisex Beautician	- 2 Post
Nail Artist	- 1 Post

for a leading Unisex Salon in Jayalakshmipuram, Mysuru
Contact : 99457 73721

ಕೆಪಿಎಆರ್ ಎಥರ್ — ATHER

ಈ ಸಂಕ್ರಾಂತಿ ಮಂಗಳಕರವಾದ ಆರಂಭವನ್ನು ಮಾಡಿ
₹.0 ಮುಂಗಡ ಪಾವತಿ
450X ₹1,25,999* ರಿಂದ ಪ್ರಾರಂಭ
- ₹26,000* ವರೆಗಿನ ಕೊಡುಗೆಗಳು
- ಜನರಲ್ ಸರ್ವೀಸ್ ಅನ್ನು ಸಹ ಪಡೆದುಕೊಳ್ಳಿ



11, 12 ಮತ್ತು 13 ಜನವರಿ 2024
(ಗುರುವಾರ, ಶುಕ್ರವಾರ ಮತ್ತು ಶನಿವಾರ)
ಬೆಳಿಗ್ಗೆ 10 ರಿಂದ ಸಂಜೆ 7 ರವರೆಗೆ

ಸ್ಥಳ : ಟೆರೇಸಿಯನ್ ಕಾಲೇಜ್ ಸಿಗ್ನಲ್, ರಿಲಯನ್ಸ್ ಪೆಟ್ರೋಲ್ ಬಂಕ್ ಹತ್ತಿರ, ಸಿದ್ಧಾರ್ಥನಗರ, ಮೈಸೂರು
ಸೇಲ್ಸ್ : 8050701555 ಸರ್ವೀಸ್ : 8050698555 *T&C Apply

FOR RENT

Building suitable for college & hostel with individual rooms & attached toilets which can accommodate 120 students. Near Agrahar & JLB Road.
Interested can Contact email
mysr79272@gmail.com
Brokers Excuse.

ಕರ್ನಾಟಕ ಸರ್ಕಾರ

ತೋಟಗಾರಿಕೆ ಇಲಾಖೆ
ಸಹಾಯಕ ತೋಟಗಾರಿಕೆ ನಿರ್ದೇಶಕರು
(ಉದ್ಯಾನವನ ಮತ್ತು ತೋಟಗಳು),
ಗಾಂಧಿವನ ಎದುರು, ಇಟ್ಟಿಗೆಗೂಡು, ಮೈಸೂರು –570010

ಪ್ರಕಟಣೆ

ಕುಪ್ಪಣ್ಣ ಪಾರ್ಕ್ ಉದ್ಯಾನವನ ಮತ್ತು ಗ್ಲಾಸ್ ಹೌಸ್‌ನ್ನು ಚಲನ ಚಿತ್ರೀಕರಣ, ಕಿರಿತೆರೆ ಧಾರಾವಾಯಿ ಚಿತ್ರೀಕರಣ, ಪ್ರಿ/ಪೋಸ್ಟ್ ವೆಡ್ಡಿಂಗ್ ವೀಡಿಯೋ, ಕೃಷಿ, ತೋಟಗಾರಿಕೆ ಇಲಾಖೆಗಳ ತಾಂತ್ರಿಕ ಸಭೆ/ತರಬೇತಿ ಸಮಾರಂಭಗಳಿಗೆ, ವಿಶ್ವವಿದ್ಯಾನಿಲಯಗಳ ಕಾರ್ಯಕ್ರಮಗಳಿಗೆ ಹಾಗೂ ಖಾಸಗಿ ಸಂಸ್ಥೆಗಳ ಸಭೆ ಸಮಾರಂಭಗಳಿಗೆ, ವಸ್ತು ಪ್ರದರ್ಶನಕ್ಕೆ (On Special Intrest) ಸರ್ಕಾರ ನಿಗದಿಪಡಿಸಿರುವ ದರದನ್ವಯ ಬಾಡಿಗೆಗೆ ನೀಡಲಾಗುತ್ತದೆ.

ಸಹಿ/– ಸಹಾಯಕ ತೋಟಗಾರಿಕೆ ನಿರ್ದೇಶಕರು
DIPR/DDMYS/KSMCA/876/2023-24

ಪುರಸಭೆ ಕಾರ್ಯಾಲಯ, ವಿರಾಜಪೇಟೆ

ಕೊಡಗು ಜಿಲ್ಲೆ 571218
ದೂರವಾಣಿ ಸಂಖ್ಯೆ :- 08274-257332 | ಇಮೇಲ್: itstaff_ulb_virajpet@yahoo.com | ವೆಬ್‌ಸೈಟ್ :- www.virajpettown.mrc.gov.in

ಕ್ರ.ಸಂ.ನಂ.ಪು.ವಿ/15ನೇ ಹ.ಆ.ಕು.ನೀ.ಸ.ಪ.ಅ.ಎಸ್.ಎಫ್.ಸಿ/ಟಿ-05/2023-24 ದಿನಾಂಕ: 09/01/2024

ಟೆಂಡರ್ ಪ್ರಕಟಣೆ
(ಇ-ಪ್ರೋಕ್ಯೂರಮೆಂಟ್ ಪೋರ್ಟಲ್ ಮುಖಾಂತರ)

ವಿರಾಜಪೇಟೆ ಪುರಸಭೆಯ 2021-22 2022-23 ಮತ್ತು 2023-24 ನೇ ಸಾಲಿನ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದಡಿಯಲ್ಲಿ, 2023-24 ನೇ ಸಾಲಿನ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವ ಅನುದಾನದಡಿಯಲ್ಲಿ, ಮತ್ತು 2023-24ನೇ ಸಾಲಿನ ಎಸ್.ಎಫ್.ಸಿ ಮುಕ್ತ ನಿಧಿ ಅನುದಾನದಡಿಯಲ್ಲಿ, ಯಂತ್ರೋಪಕರಣಗಳನ್ನು ಒದಗಿಸಲು ಹಾಗೂ ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000, ಹಾಗೂ ತಿದ್ದುಪಡಿ ನಿಯಮ 2001ಕ್ಕೆ ಒಳಪಟ್ಟು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರಿಂದ ಕೆ.ಜಿ-1 ರ ಮತ್ತು ಕೆ.ಡಬ್ಲ್ಯೂ 1ರ ನಿಯಮಗಳಗನುಸಾರ ಇ-ಪ್ರೋಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಯುಳ್ಳ ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.eproc.karnataka.gov.in ವೆಬ್ ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪ್ರೋಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು.

1. ಟೆಂಡರ್ ಫಾರಂಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ : 10/01/2024 ರಿಂದ 24/01/2024 ಸಂಜೆ 17.30 ಗಂಟೆಗೆ
2. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 24/01/2024 ಸಂಜೆ 17.30 ಗಂಟೆ ವರೆಗೆ
3. ಟೆಂಡರ್ ತೆರೆಯುವ ದಿನಾಂಕ : 25/01/2024 ಬೆಳಗ್ಗೆ 11.00 ಗಂಟೆಯ ನಂತರ
4. ಟೆಂಡರುಗಳನ್ನು ತೆರೆಯುವ ಸ್ಥಳ : ವಿರಾಜಪೇಟೆ ಪುರಸಭೆ

ಕಾಮಗಾರಿಗಳ ವಿವರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿಗಳಾಗಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್‌ಸೈಟ್ :-www.virajpettown.mrc.gov.in ನಲ್ಲಿ ಮತ್ತು ಕಛೇರಿಯ ಸೂಚನಾ ಫಲಕವನ್ನು ನೋಡಬಹುದಾಗಿದೆ.

ಸಹಿ/–	ಸಹಿ/–
(ಶ್ರೀ ವಿನಾಯಕ್ ನರ್ವಡೆ ಭಾ.ಆ.ಸೇ) ಆಡಳಿತಾಧಿಕಾರಿ, ಪುರಸಭೆ, ವಿರಾಜಪೇಟೆ.	(ಶ್ರೀ ಚಂದ್ರ ಕುಮಾರ್.ಎ) ಮುಖ್ಯಾಧಿಕಾರಿ, ಪುರಸಭೆ, ವಿರಾಜಪೇಟೆ.

ಜಮೀನು ಮಾರಾಟಕ್ಕಿದೆ

ಮೈಸೂರು ತಾ, ಜಯಪುರ ಹೋ, ಚಿಕ್ಕನಹಳ್ಳಿ ಸರ್ವೇ ನಂ.1ಎ, 38 ಗುಂಟೆ, ಜಮೀನು ಮಾರಾಟಕ್ಕಿದೆ ಪೆರಿಫೆರಲ್ ರಿಂಗ್‌ರಸ್ತೆ ಪಕ್ಕದಲ್ಲಿ ಮತ್ತು ಜಯಪುರ ಉಪನಗರ ಬಡಾವಣೆಯ ಪಕ್ಕದಲ್ಲಿದೆ ಮತ್ತು ಮುರುಡಗಳ್ಳಿಯಲ್ಲಿ ಲೇಔಟ್ ಪಕ್ಕದಲ್ಲಿ ಮಾವಿನ ತೋಟ 1 ಎಕರೆ, 8 ಗುಂಟೆ ಲೇಔಟ್ ಮಾಡಲು ಸೂಕ್ತವಾಗಿದೆ. ಸಂಪರ್ಕಿಸಿ:
9663793666, 9980607552

ಬೇಕಾಗಿದ್ದಾರೆ

ಮೈಸೂರಿನ ಅತಿ ದೊಡ್ಡ ಮತ್ತು ಅತ್ಯಾಧುನಿಕ ಫ್ಲಾಗ್‌ಶಿಪ್ ಟಿವಿಎಸ್ ಮುಖ್ಯ ಡೀಲರ್‌ಶಿಪ್ ಬಂಬೂ ಬಜಾರಿನಲ್ಲಿ
- ಸೇಲ್ಸ್ ಮ್ಯಾನೇಜರ್
- ಸೇಲ್ಸ್ ಅಡ್ವೈಸರ್ಸ್
- ಸರ್ವೀಸ್ ಅಡ್ವೈಸರ್ಸ್
- ಅಕೌಂಟ್ಸ್ ಅಸಿಸ್ಟೆಂಟ್ (Tally)
- ಟೆಕ್ನೀಷಿಯನ್ಸ್
- ಹೆಲ್ಪರ್ಸ್
- ಟೆಲಿ ಕಾಲರ್ಸ್
- ಕಸ್ಟಮರ್ ಕೇರ್ ಎಕ್ಸಿಕ್ಯೂಟಿವ್

WALK IN : 12th & 13th Jan @ 10:30 AM
ಅಂಬಾರಿ ಟಿವಿಎಸ್
(ದಿವ್ಯದೀಪ ಆಟೋ ವೆಂಚರ್ಸ್ ಪ್ರೈ.ಲಿ.ನ ಘಟಕ)
#3615, ಹೊಸ ನಂ. ಎಂ.28 ಸಯ್ಯಾಜಿರಾವ್ ರಸ್ತೆ, ಬಂಬೂ ಬಜಾರ್, ಮಂಡಿ ಮೊಹಲ್ಲಾ, ಮೈಸೂರು–01
90191 72160 / 99640 21500

ಹುಣಸೂರು ಪಿರಿಯಾಪಟ್ಟಣ ತಾಲ್ಲೂಕು, ಗಿರಿಜನರ ದೊಡ್ಡಪ್ರಮಾಣದ ವಿವಿದೋದ್ದೇಶ ಸಹಕಾರ ಸಂಘ ನಿ; ಹುಣಸೂರು.

ಸಂ:ಜೆಆರ್‌ಎಂ–1/ಆರ್‌ಸಿಎಸ್013/1971 ದಿ:24-03-1971
ಉಲ್ಲೇಖ: ದಿನಾಂಕ: 10-01-2024.

ಹರಾಜು ಪ್ರಕಟಣೆ

ಹುಣಸೂರು ತಾಲ್ಲೂಕು ಕಲ್ಲಬೆಟ್ಟ ಪ್ಲಾಂಟೇಶನ್, ನಂಜಾಪುರ ಪ್ಲಾಂಟೇಷನ್, ಗುರುಪುರ ಪ್ಲಾಂಟೇಷನ್ ಗಳಲ್ಲಿರುವ ಸುಮಾರು 20 ಟನ್ ಹುಣಸೇ ಫಸಲನ್ನು ಮತ್ತು ಪಿರಿಯಾಪಟ್ಟಣ ತಾಲ್ಲೂಕು ಆಲದಕಟ್ಟೆ ಹಾಡಿಯಲ್ಲಿ ಶೇಖರಣೆ ಮಾಡಿರುವ ಸುಮಾರು 500 ಕೆಜಿ ಮರದ ಪಾಚಿಯನ್ನು ಟೆಂಡರ್ ಮೂಲಕ ಹರಾಜಿಗೆ ಇಡಲಾಗಿದೆ. ಟೆಂಡರಿನಲ್ಲಿ ಭಾಗವಹಿಸುವ ಆಸಕ್ತರು ಸಂಘದ ಹೆಸರಿನಲ್ಲಿ ರೂ:40,000/- ಗಳನ್ನು ಡಿಪಾಸಿಟ್ ಮಾಡಿ, ಭರ್ತಿ ಮಾಡಿದ ಟೆಂಡರ್ ಫಾರಂ ಗಳನ್ನು ದಿನಾಂಕ:18-01-2024 ರ ಗುರುವಾರ ಸಂಜೆ 4-00 ಗಂಟೆಯೊಳಗೆ ಕಛೇರಿಗೆ ತಲುಪಿಸುವುದು.

ಟೆಂಡರ್ ಲಕೋಟೆಗಳನ್ನು ದಿನಾಂಕ:19-01-2024 ರ ಶುಕ್ರವಾರ ಬೆಳಗ್ಗೆ 11-30 ಗಂಟೆಗೆ ಕಛೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಸಂಘದ ಕಾರ್ಯನಿರ್ವಾಹಕ ಅಧಿಕಾರಿಯವರನ್ನು ಸಂಪರ್ಕಿಸಿ ತಿಳಿದುಕೊಳ್ಳುವುದು.

ದೂರವಾಣಿ: ಅಧ್ಯಕ್ಷರು : 7975729528 ಕಾರ್ಯದರ್ಶಿ : 7338424426

ಸಹಿ/– ಅಧ್ಯಕ್ಷರು, ಹುಣಸೂರು ಪಿರಿಯಾಪಟ್ಟಣ ತಾಲ್ಲೂಕು ಗಿರಿಜನರ ದೊಡ್ಡಪ್ರಮಾಣದ ವಿವಿದೋದ್ದೇಶ ಸಹಕಾರ ಸಂಘ ನಿ; ಹುಣಸೂರು

ಮೋಹನ್ ಭಂಡಾರ್®

ಸಯ್ಯಾಜಿ ರಾವ್ ರಸ್ತೆ
ಸಂಕ್ರಾಂತಿಯನ್ನು ಆಚರಿಸಿ ಎಳ್ಳು ಬೆಲ್ಲದ
ಸಮ ಪ್ರಮಾಣದ ಮಿಶ್ರಣದೊಂದಿಗೆ



ಭೇಟಿಕೊಡಿ – ಮೋಹನ್ ಭಂಡಾರ್, ಸಯ್ಯಾಜಿ ರಾವ್ ರಸ್ತೆ
ನಾವು ಯಾವುದೇ ಶಾಖೆಯನ್ನು ಹೊಂದಿಲ್ಲ
ಸಂಪರ್ಕಿಸಿ : 96062 33244 ಫ್ರೀ ಹೋಮ್ ಡೆಲಿವರಿ 3 ಗಂಟೆ ಯೊಳಗೆ

ಮೈಸೂರು ಮಿತ್ರ 44 — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ.ಮೈ.ನ.ಪ್ರಾ./ವಕ-4/ಪಿ.ಆರ್-195/2023-24 ದಿನಾಂಕ: 06.01.2024

ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ (ಹಿಂದಿನ CITB) ಮೈಸೂರು ಜಿಲ್ಲೆ, ಗುಂಡ್ಲುಪೇಟೆನಲ್ಲಿ ವಾಸವಿದ್ದ ಅಮೀಲ್ದಾರ್‌ರಾದ ಶ್ರೀ. ಟಿ.ಹೆಚ್.ಅಮೀರ್ ರವರಿಗೆ ದಿನಾಂಕ: 03.09.1946 ರಂದು ಜಯಲಕ್ಷ್ಮಿಪುರಂ 2ನೇ ಬ್ಲಾಕ್ ಬಡಾವಣೆಯ ನಿವೇಶನ ಸಂಖ್ಯೆ.46, ಅಳತೆ 60x110 ಅಡಿಗಳು, ನಿವೇಶನ ಮಂಜೂರಾಗಿದ್ದು, ಇದರ ಬಾಬ್ತು ಪೂರ್ಣ ಹಣ ರೂ.1,100/–ಗಳನ್ನು ಪಾವತಿಸಿದ್ದು, ನಂತರ ಶ್ರೀಮತಿ ಪ್ರೇಮ ಪದ್ಮನಾಭನ್ ರವರಿಂದ ಚಲನ್ ನಂ.6396/64.ರಲ್ಲಿ ರೂ.2933.33/– ಗಳನ್ನು ಪಾವತಿಸಿಕೊಂಡು ದಿ:20.06.1975ರಂದು ನಿವೇಶನ ವರ್ಗಾವಣೆ ಮಾಡಲಾಗಿದೆ. ನಂತರ ಶ್ರೀ.ಡಿ.ಎನ್ ಬೆಜ್‌ಬೊರಹ್ ರವರಿಂದ ಚಲನ್ ಸಂಖ್ಯೆ: 5881/59ರಲ್ಲಿ ರೂ.3.314.83/– ಗಳನ್ನು ಪಾವತಿಸಿಕೊಂಡು ದಿ:12.06.1978ರಂದು ನಿವೇಶನ ವರ್ಗಾವಣೆ ಪತ್ರ ನೀಡಲಾಗಿರುತ್ತದೆ. ಹಾಗೂ ದಿ:25.09.1979 ರಂದು ಸ್ವಾಧೀನ ಪತ್ರವನ್ನು ನೀಡಲಾಗಿರುತ್ತದೆ. ಅಂತಿಮವಾಗಿ ಶ್ರೀ.ಡಿ.ಎನ್ ಬೆಜ್ ಬೊರಹ್ ರವರು ಶ್ರೀ ಬಿ.ಎಸ್.ದತ್ತರಾವ್ ಮತ್ತು ಶ್ರೀಮತಿ ಬಿ.ಎಸ್.ವೆಂಕಟಲಕ್ಷ್ಮಿರವರಿಗೆ ದಿ:12.03.1980ರಂದು ಜಂಟಿಯಾಗಿ ಶುದ್ಧಕ್ರಯಕ್ಕೆ ಮಾರಾಟ ಮಾಡಿದ್ದು, ಸದರಿ ಖರೀದಿದಾರರು ನಗರ ಪಾಲಿಕೆಯಲ್ಲಿ ಜಂಟಿ ಖಾತೆ ಪಡೆದುಕೊಂಡಿರುತ್ತಾರೆ. ನಂತರದಲ್ಲಿ ಸದರಿ ಖರೀದಿದಾರರು ದಿ:29.02.1992ರಂದು ನಿವೇಶನ ಸಂಖ್ಯೆ.46 ಅನ್ನು ಸಂಖ್ಯೆ: 46 & 46/1 ಎಂದು ವಿಭಾಗ ಮಾಡಿದ್ದು, ನಗರಯೋಜನಾ ಶಾಖೆಯಿಂದ ನಕ್ಷೆ ಅನುಮೋದನೆ ಪಡೆಯಲಾಗಿದೆ.

ಶ್ರೀಮತಿ ಬಿ.ಎಸ್.ವೆಂಕಟಲಕ್ಷ್ಮಿರವರು ದಿನಾಂಕ:12.06.1991 ರಂದು ನಿ.ಸಂ.46ರ ಭಾಗಶಃ ಅಳತೆ 40*60ರ ನಿವೇಶನವನ್ನು ಇವರ ಮಗಳಾದ ಶ್ರೀಮತಿ. ಪದ್ಮ ವಿ ರಾವ್ ಕೋಂ ಶ್ರೀ ವಿಶ್ವನಾಥ್ ನಾರಾಯಣ್ ರಾವ್ ರವರಿಗೆ ನೋಂದಾಯಿತ ವಿಲ್ ಮಾಡಿದ್ದು, ನಂತರ ಶ್ರೀಮತಿ ಬಿ.ಎಸ್.ವೆಂಕಟಲಕ್ಷ್ಮಿ ರವರು ದಿನಾಂಕ: 09.08.2004 ರಂದು ಮೃತರಾಗಿರುತ್ತಾರೆ. ಪ್ರಸ್ತುತ, ಮನೆ ನಂ.46/1, 2ನೇ ಬ್ಲಾಕ್, 5ನೇ ಮುಖ್ಯರಸ್ತೆ, ಜಯಲಕ್ಷ್ಮಿಪುರಂ ಮೈಸೂರು. ರಲ್ಲಿ ವಾಸಿಸುವ ಶ್ರೀಮತಿ. ಪದ್ಮ ವಿ ರಾವ್ ಕೋಂ ಶ್ರೀ ವಿಶ್ವನಾಥ್ ನಾರಾಯಣ್ ರವರು ಮೇಲ್ಕಂಡ ನಿವೇಶನ ಸಂಖ್ಯೆ: 46/1ರ ವಾರಸುದಾರರಾಗಿರುವುದಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ, ಜಯಲಕ್ಷ್ಮೀಪುರಂ 2ನೇ ಬ್ಲಾಕ್ ಬಡಾವಣೆಯ ನಿವೇಶನ ಸಂಖ್ಯೆ.46/1, ಅಳತೆ 40x60 ಅನ್ನು ಅವರ ಹೆಸರಿಗೆ ಕ್ರಯ ಮತ್ತು ವಿಲ್ ಆಧಾರದ ಮೇಲೆ ವರ್ಗಾವಣೆ ನೀಡುವಂತೆ ಕೋರಿರುವುದರಿಂದ, ಅರ್ಜಿದಾರರ ಮನವಿಯಂತೆ ಸ್ವತ್ತಿನ ವರ್ಗಾವಣೆ ನೀಡುವ ಸಂಬಂಧ ಮೇಲ್ಕಂಡ ಸ್ವತ್ತಿಗೆ ಸಂಬಂಧಪಟ್ಟಂತೆ ಹಿತಾಸಕ್ತಿದಾರರಿಂದ ಅಥವಾ ಇತರೆ ಯಾರಿಂದಾದರು ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 10 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ತಕರಾರು ಸಲ್ಲಿಸುವುದು ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಯಹಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಸಹಿ/– ವಿಶೇಷ ತಹಸೀಲ್ದಾರ್, ವಲಯ ಕಛೇರಿ–4, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಮೊದಲ ಬಾರಿಗೆ-ನಾದ ಚಕ್ರವರ್ತಿ ಪಿಟೀಲು ವಿದ್ವಾನ್ ಡಾ. ಎಲ್. ಸುಬ್ರಮಣಿಯಂ ರವರಿಂದ ಭಾರತ ಸಿಂಫನಿ ಮತ್ತು ದತ್ತ ಸಿಂಫನಿ ಒಳಗೊಂಡ ಮಾಂತ್ರಿಕ ಸಂಗೀತ ಸಂಭ್ರಮವನ್ನು ಅನುಭವಿಸಿ



ಪೂಜ್ಯ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ
ಅವಧೂತ ದತ್ತ ಪೀಠಂ


ಅವಧೂತ ದತ್ತ ಪೀಠಂ
ಹಾಗೂ
ಲಕ್ಷ್ಮೀನಾರಾಯಣ®
ಗ್ಲೋಬಲ್ ಮ್ಯೂಜಿಕ್ ಫೆಸ್ಟಿವಲ್
ಪ್ರಸ್ತುತ



ಪ್ರೊ. ವಿ.ಲಕ್ಷ್ಮೀನಾರಾಯಣ



ಮೆಸ್ಟ್ರೋ ಅಬ್ಜಲ್ ಮುಖಿದ್ದಿನ್



ಡಾ.ಎಲ್.ಸುಬ್ರಮಣಿಯಂ



ಕವಿತಾ ಕೃಷ್ಣಮೂರ್ತಿ



ಗುಲ್ಮೀರಾ ಕುಟ್ಟಿಬದಮೋವಾ



ಡಾ.ಬಿಂದು ಸುಬ್ರಮಣಿಯಂ



ಉತ್ತರ ಕಝೂಕಿಸ್ತಾನ್‌ನ ಸಿಂಫನಿ ಆರ್ಕೆಸ್ಟ್ರಾ



ಡಾ.ಅಂಬಿ ಸುಬ್ರಮಣಿಯಂ



ಎರ್ಕೆಗಾಗಿ ರಾಖ್ಮಾದಿಯೇವ್ ರಾಜ್ಯ ಅಕಾಡೆಮಿಕ್ ಚೇಂಬರ್ ಗಾಯನ



ಮಹತಿ ಸುಬ್ರಮಣಿಯಂ

ಸ್ಥಳ :
ನಾದ ಮಂಟಪ
ಅವಧೂತ ದತ್ತ ಪೀಠಂ
ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಮೈಸೂರು

11 ಜನವರಿ 2024
ಸಂಜೆ 6.30

SUBRAMANIAM FOUNDATION — AVADHOOTA DATTA PEETHAM MYSURU

ಪ್ರವೇಶ ಎಲ್ಲರಿಗೂ ಉಚಿತ
(ಕಾಯ್ದಿರಿಸಿದ ಆಸನಗಳನ್ನು ಹೊರತುಪಡಿಸಿ)

LGCE Lakshminarayana Global Centre of Excellence — musee musical school of music